ಪ್ರಕಟಣೆ—೨

ಅಧ್ಯಕ್ಷರು.—ಪ್ರಕಟಣೆ—೨, ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿದೆ.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ ೯೯ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ ೧೩-೧೦-೧೯೮೮ ರಂದು ತಿದ್ದುಪಡಿಗಳಿಲ್ಲದೆ ಅಂಗೀಕಾರವಾದ ಈ ಕೆಳಕಂಡ ವಿಧೇಯಕವನ್ನು ವಿಧಾನ ಸಭೆಯ ಅನುಮೋದನೆಗಾಗಿ ಕಳುಹಿಸುತ್ತಿದ್ದೇನೆ.

೧೯೮೮ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ಎರಡನೇ ತಿದ್ದುಪಡಿ) ವಿಧೇಯಕ."

ಬೆಂಗಳೂರು ಅರಮನೆಯ ಆವರಣದಲ್ಲಿ ಜರುಗಿದ ಜನತಾ ಮೇಳಕ್ಕೆ ಸರ್ಕಾರಿ ಯಂತ್ರದ ದುರುಪಯೋಗ ಮತ್ತು ಜನತಾ ದಳದ ಉದಯದಿಂದ ಸರ್ಕಾರದ ಮೇಲೆ ಉಂಟಾಗಿರುವ ಪರಿಣಾಮದ ಬಗ್ಗೆ ನಿಯಮ ೬೮ರ ಮೇರೆಗೆ ಚರ್ಚೆ

ಅಧ್ಯಕ್ಷರು.—ಈಗ ಶ್ರೀಮತಿ ನಾಗರತ್ನಮ್ಮನವರು ೬೮ನೇ ನಿಯಮದ ಪ್ರಕಾರ ಅವಕಾಶ ಮಾಡಿಕೊಟ್ಟಿರುವ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡಬೇಕು.

(ಗೊಂದಲ)

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೇ, ನಾನು ಒಂದು ನೋಟೀಸ್ ಕೊಟ್ಟಿದ್ದೆ.

(ಗೊಂದಲ)

ಅಧ್ಯಕ್ಷರು.—ಈಹೊತ್ತು ೮ ಗಮನ ಸೆಳೆಯುವ ಸೂಚನೆ ಇದೆ, ಅನಂತರ ೫೩ ನಿಯಮದ ಪ್ರಕಾರ ೩೩೪ರ ಪ್ರಕಾರ ವಿಷಯಗಳು ಇದೆ, ಇವೊತ್ತು ಏನೇನು ಅಜೆಂಡಾ ಪ್ರಕಾರ ಇದೆ, ಅದರಂತೆ ಹೋಗೋಣ ಇವೊತ್ತು ರಾತ್ರಿ ೧೨ ಗಂಟೆ ಅಲ್ಲ, ೧೩ ಗಂಟೆ ಆದರೂ ಸಭೆ ನಡೆಸೋಣ.

ಶ್ರೀ ಯು. ಭೂಪತಿ.—೧೩ ಗಂಟೆ ಇಲ್ಲ......

(ಗೊಂದಲ)

ಅಧ್ಯಕ್ಷರು.—ಇವೊತ್ತು ವಿಷಯಗಳು ಬಹಳ ಇವೆ. ಈ ವಿಷಯವನ್ನು ಒಂದು ಗಂಟೆಯಲ್ಲಿ ಮುಗಿಸೋಣ.

(ಗೊಂದಲ)

ಶ್ರೀ ಡಿ. ಜಿ. ಬಸವನಗೌಡ.—ಅಧ್ಯಕ್ಷರೇ, ೧೨ ಗಂಟೆ ಅಲ್ಲ, ೧ ಗಂಟೆ ಆಗಲಿ, ಕುಳಿತುಕೊಳ್ಳುತ್ತೇವೆ ತಾವು ಸಭಾಧ್ಯಕ್ಷರಾದ ಮೇಲೆ ಊಟ ಕೊಟ್ಟಿಲ್ಲ, ಆದ್ದರಿಂದ ರಾತ್ರಿ ಎಲ್ಲರಿಗೂ ಊಟದ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು.—ನಿಯಮಗಳ ಪ್ರಕಾರ ಯಾರು ಯಾರು ಎದ್ದು ನಿಲ್ಲುತ್ತಾರೆ, ಅವರೆಲ್ಲರನ್ನೂ ನಾನು ಕರೆಯುತ್ತೇನೆ, ನಿಯಮ ಬಿಟ್ಟರೆ ನಾನು ಯಾರನ್ನೂ ಕೂಡ ಕರೆಯುವುದಿಲ್ಲ. ಈಗ ಶ್ರೀಮತಿ ನಾಗರತ್ನಮ್ಮನವರು ಮಾತನಾಡುತ್ತಾರೆ ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಧ್ಯಕ್ಷರೇ, ಸುಮಾರು ೧೦-೧೨ ಜನರು ರುಜು ಮಾಡಿ ಒಂದು ಅಡ್ಜರ್ನ್‌ಮೆಂಟ್ ಮೋಷನ್ ಕಳುಹಿಸಿದ್ದೇವೆ. ಅಡ್ಜರ್ನ್‌ಮೆಂಟ್ ಮೋಷನ್ ಅಂದರೆ ಎಲ್ಲಾ

ವಿಚಾರಗಳಿಗಿಂತಲೂ ಮುಂಚಿತವಾಗಿ ತೆಗೆದುಕೊಳ್ಳಬೇಕು ಎಂಬುದು ಇರತಕ್ಕ ಒಂದು ಸಂಪ್ರದಾಯ. ತಾವು ನಮ್ಮನ್ನೆಲ್ಲಾ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಕರೆಸಿ ಇದಕ್ಕೆ ಸಾಕಷ್ಟು ಮಹತ್ವ ಇದೆ. ಇದನ್ನು ರೂಲ್ ೬೦ರಲ್ಲಿ ತೆಗೆದುಕೊಂಡು ಯಾರು ಯಾರಿಗೆ ಮಾತನಾಡಲಿಕ್ಕೆ ಅವಕಾಶ ಬೇಕೋ ಕೊಡುತ್ತೇನೆಂದು ಮಾತು ಕೊಟ್ಟಿದ್ದಿರಿ. ಕೊಶ್ಚನ್ಸ್ ಎಲ್ಲಾ ಆದಮೇಲೆ ಚಿಕ್ಕ ಬಿಲ್ಸ್‌ಗಳಿವೆ, ಅವು ಮುಗಿದನಂತರ ತೆಗೆದುಕೊಳ್ಳುತ್ತೇನೆಂದು ಮಾತು ಕೊಟ್ಟಿದ್ದು ಈಗ ನಾಲ್ಕು ಗಂಟೆ ಆಗುತ್ತಿದೆ. ಈಗ ಇದನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೀರಿ. ಅದೇನೇ ಇರಲಿ, ಈಗ ತಾವು ನಮಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ನಾವು ಕೃತಜ್ಞರಾಗಿದ್ದೇವೆ. ನಮ್ಮೆಲ್ಲರ ಅಡ್ಜರ್ನ್‌ಮೆಂಟ್ ಮೋಷನ್ ಏನು ಅಂದರೆ, ದಿನಾಂಕ ೧೧ನೇ ಅಕ್ಟೋಬರ್ ೧೯೮೮ರಂದು ಬೆಂಗಳೂರು ಅರಮನೆ ಆವರಣದಲ್ಲಿ ಜರುಗಿದ ಜನತಾ ಮೇಳಕ್ಕೆ ಸರಕಾರಿ ಯಂತ್ರದ ದುರುಪಯೋಗವಾಗಿರುವ ಬಗ್ಗೆ ಮತ್ತು ಜನತಾದಳದ ಉದಯದಿಂದ ಸರ್ಕಾರದ ಮೇಲೆ ಆದ ಪರಿಣಾಮದ ಬಗ್ಗೆ ಚರ್ಚಿಸು ವಂತಾದ್ದು, ಇದು ಸಬ್ಜೆಕ್ಟ್ ಮ್ಯಾಟರ್. ಮಾನ್ಯ ಅಧ್ಯಕ್ಷರೇ, ೧೧-೧೦-೮೮ ಲೋಕಮಾನ್ಯ ಜಯ ಪ್ರಕಾಶ್‌ರವರ ಹುಟ್ಟುಹಬ್ಬದ ದಿವಸ ಈ ಒಂದು ಜನತಾದಳ ಹುಟ್ಟಿತು. ಜನತಾದಳ ಹುಟ್ಟಿದ್ದು ಇದನ್ನು ನೋಡುತ್ತಾ ಇದ್ದವರು.

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ.

(ಗೊಂದಲ)

ಅಧ್ಯಕ್ಷರು.—ಅವರು ಏನು ಹೇಳುತ್ತಾರೆ ಕೇಳಿ.

ಶ್ರೀ ವೇದಾಂತ ಹೆಮ್ಮಿಗೆ.—ತಾಯಿಯವರೇ, ನೀವು ಹೇಳಿದ್ದನ್ನು ನಾವು ಕೇಳುತ್ತೇವೆ ಅಷ್ಟೇ ಸಹನೆ ದೊಡ್ಡವರಾದ ತಮಗೆ ಇರಬೇಕಲ್ಲಾ ನಾಯಕರಾದ ತಮಗೆ ಇರಬೇಕಲ್ಲಾ ಸ್ವಾಮಿ, ನನ್ನ ಕ್ರಿಯಾ ಲೋಪವಿಷ್ಟೇ. ರಾಜಕೀಯ ಪಕ್ಷಗಳ ರಚನೆ.

ಒಬ್ಬ ಸದಸ್ಯರು.—ಮಾನ್ಯ ಸದಸ್ಯರು ನಿಯಮ ಯಾವುದರ ಪ್ರಕಾರ ಹೇಳುತ್ತಾರೆ ಅದನ್ನು ಹೇಳಲಿ.

ಶ್ರೀ ವೇದಾಂತ ಹೆಮ್ಮಿಗೆ.—ಸ್ವಾಮಿ, ರಾಜಕೀಯ ಪಕ್ಷಗಳ ರಚನೆ ವಿಲೀನ ಈ ಸದನದ ವ್ಯಾಪ್ತಿಗೆ ಬರುವುದಿಲ್ಲ.

(ಗೊಂದಲ)

ಶ್ರೀ ವೇದಾಂತ ಹೆಮ್ಮಿಗೆ.—ಇದು ಈ ಸದನದ ಹೊರಗಡೆ ವ್ಯಾಪ್ತಿಗೆ ಸೇರಿದ್ದು. ಒಂದನೇ ಪಾಯಿಂಟ್ ಇನ್ನು ಎರಡನೇ ಪಾಯಿಂಟ್ ಏನೆಂದರೆ, ಯಾವುದೇ ರಾಜಕೀಯ ಪಕ್ಷಗಳು ರಚನೆಯಾಗ ಬೇಕಾದರೆ ಈ ದೇಶದಲ್ಲಿ ಎಲೆಕ್ಷನ್ ಕಮಿಷನ್ ಎಂದು ಒಂದು ಕಮಿಷನ್ ಇದೆ. ಆ ಎಲೆಕ್ಷನ್ ಕಮಿಷನರ್‌ರವರು ಹಾಕಿರುವ ರೂಪು ನಿಯಮಗಳನ್ನು ಪೂರೈಸಿ, ರಾಜಕೀಯ ಪಕ್ಷಗಳು ತಮ್ಮ ರಚನೆ ಮಾಡಿಕೊಳ್ಳಬೇಕು. ಅದು ಜನತಾದಳವಾಗಲಿ ಯಾವುದೇ ದಳವಾಗಲಿ, ಈಗ ಇಲ್ಲಿ ಜನತಾ ಪಕ್ಷದ ಸರ್ಕಾರ ಅಸ್ತಿತ್ವದಲ್ಲಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹೀಗೆ ನನ್ನ ಟೈಮೆಲ್ಲಾ ತೆಗೆದುಕೊಳ್ಳಲು ಯಾವ ರೂಲ್ ಮೇಲೆ ಎಲ್ಲಿ......

(ಗೊಂದಲ)

ಅಧ್ಯಕ್ಷರು.—ನೋಡಿ ಕ್ರಿಯಾ ಲೋಪ ಎತ್ತಲಿಕ್ಕೆ ಈ ಸದನದ ಎಲ್ಲಾ ಸದಸ್ಯರಿಗೂ ಹಕ್ಕಿದೆ. ಮಾನ್ಯ ವೇದಾಂತ ಹೆಮ್ಮಿಗೆಯವರು ಏನು ಕ್ರಿಯಾಲೋಪವೆತ್ತಿದ್ದಾರೆ, ಅದರ ಬಗ್ಗೆ ಅವರು ಏನು ಹೇಳುತ್ತಾರೋ ಹೇಳಲಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಯಾವ ರೂಲ್ ಮೇಲೆ ಕ್ರಿಯಾಲೋಪವೆತ್ತಿದ್ದಾರೆ ಅದನ್ನು ಮೊದಲು ಅವರು ಹೇಳಲಿ.

ಅಧ್ಯಕ್ಷರು.—ಅವರು ಕ್ರಿಯಾಲೋಪವೆತ್ತಿದ್ದಾರೆ, ಅವರು ಏನು ಹೇಳುತ್ತಾರೋ ಹೇಳಲಿ, ಕ್ರಿಯಾಲೋಪಕ್ಕೆ ಉತ್ತರ ಹೇಳಲು ಅವಕಾಶ ಕೊಡುತ್ತೇನೆ. ಅದಕ್ಕೆ ನೀವು ಏನು ಹೇಳುತ್ತೀರೊ ಅದನ್ನು ಹೇಳಿ.

(ಗೊಂದಲ)

ಈರೀತಿ ಅವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡುವುದಿಲ್ಲ ಇಂಟರ್‌ವೆನ್‌ಷನ್ ಮಾಡುತ್ತೇವೆಂದು ಹೇಳಿದರೆ ಸರಿಯಲ್ಲ. ಅವರು ಉತ್ತರ ಹೇಳುತ್ತಾರೆ, ಪಾಯಿಂಟ್ ಆಫ್ ಆರ್ಡರ್ ಏನು ಎಂಬುದನ್ನು ಕೇಳುತ್ತೇನೆ. ಏತಕ್ಕೆಂದರೆ ನೀವು ಬರೀ ಗದ್ದಲ ಮಾಡುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ವೇದಾಂತ ಹೆಮ್ಮಿಗೆ.—ಜನತಾ ಪಕ್ಷದ ಸರಕಾರ ಇಲ್ಲಿ ಆಡಳಿತ ನಡೆಸುತ್ತಿರುವಾಗ ಜನತಾ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ ಇದು ಮೂರನೆ ಪ್ರಶ್ನೆ ರಾಜಕೀಯ ಪಕ್ಷಗಳ......

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ......

ಅಧ್ಯಕ್ಷರು.—ಮಾನ್ಯ ಭೂಪತಿಯವರೇ, ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ರಾಜಕೀಯ ಪಕ್ಷಗಳು ಅವುಗಳದೇ ಆದ ಅಂಗ ರಚನೆಯನ್ನು ಹೊಂದಿರುತ್ತವೆ. ಆ ಅಂಗರಚನೆಯ ಪ್ರಕಾರ ಯಾವ ಯಾವ ಹಂತದಲ್ಲಿ ವಿಲೀನವಾಗಬೇಕು ಆ ರೀತಿ ವಿಲೀನವಾಗುತ್ತವೆ. ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ......

ಶ್ರೀ ಯು. ಭೂಪತಿ.—ಇದು ಇರ್‌ರೆಲವೆಂಟ್ ಸಬ್ಜೆಕ್ಟ್.

ಅಧ್ಯಕ್ಷರು.—ಅವರು ಏನು ಹೇಳುತ್ತಾರೋ ಹೇಳಲಿ.

೪-೦೦ ಪಿ. ಎಂ.

ಶ್ರೀ ವೇದಾಂತ ಹೆಮ್ಮಿಗೆ.—ರಾಜಕೀಯ ಪಕ್ಷಗಳ ರಚನೆ ಬಗ್ಗೆ ಇಲ್ಲಿ ಚರ್ಚಿಸಲು ಬಾರದೆ ಇರುವುದರಿಂದ ತಾವು ಚರ್ಚೆಗೆ ಅವಕಾಶ ಕೊಡುವುದು ಈ ಸದನದ ವಿಧಿ ವಿಧಾನಗಳಿಗೆ ವಿರೋಧ ವಾಗುತ್ತದೆಂದು ನನ್ನ ಕ್ರಿಯಾ ಲೋಪ. ದಯವಿಟ್ಟು ನನ್ನ ಕ್ರಿಯಾಲೋಪವನ್ನು ಎತ್ತಿಹಿಡಿಯ ಬೇಕೆಂದು ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು.—ಅವರೇನು ಕ್ರಿಯಾಲೋಪ ಎತ್ತಿದ್ದಾರೆ ಅದಕ್ಕೆ ಉತ್ತರಿಸಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ದಿನಾಂಕ ೧೧ನೇ ಅಕ್ಟೋಬರ್ ೧೯೮೮ರಂದು ಬೆಂಗಳೂರು ಅರಮನೆ ಆವರಣದಲ್ಲಿ ಜರುಗಿದ ಜನತಾ ದಳ ಮೇಳಕ್ಕೆ ಸರ್ಕಾರಿ ಯಂತ್ರದ ದುರುಪಯೋಗದ ಬಗ್ಗೆ ಮತ್ತು ಜನತಾ ದಳದ ಉದಯದಿಂದ ಸರ್ಕಾರದ ಮೇಲೆ ಆದ ಪರಿಣಾಮದ ಬಗ್ಗೆ ಚರ್ಚಿಸಲಿಕ್ಕೆ ನಾವು ಸೂಚನೆ ಕೊಟ್ಟಿದ್ದೇವೆ. ಇದರಲ್ಲಿ ಏನು ರಾಜಕೀಯ ಇದೆ? ಇವರು ಮೊನ್ನೆ ಏನು ಸಮ್ಮೇಳನ ಮಾಡಿದರು ಅದಕ್ಕೆ ಸರ್ಕಾರಿ ಮೆಷಿನರಿಯನ್ನು ಏತಕ್ಕೆ ಮಿಸ ಯೂಸ್ ಮಾಡಿದ್ದಾರೆ ಮತ್ತು ಅಲ್ಲಿ ಏನು ಜನತಾ ದಳವನ್ನು ಫಾರಂ ಮಾಡಿದ್ದಾರೆ ಅದರ ಪರಿಣಾಮ ಸರ್ಕಾರದ ಮೇಲೆ ಮತ್ತು ಆಡಳಿತದ ಮೇಲೆ ಏನಾಗಿದೆ ಎಂಬ ವಿಷಯವನ್ನು ಪೂರ್ಣವಾಗಿ ಇನ್ನೂ ಪ್ರಸ್ತಾಪ ಮಾಡಿಯೇ ಇಲ್ಲ, ನೋಟೀಸ್ ಓದಿದ್ದಾರೆ, ಅಷ್ಟರಲ್ಲೇ ಅವರು ಕ್ರಿಯಾಲೋಪ ಎತ್ತಿದ್ದಾರೆ.

ಅಧ್ಯಕ್ಷರು.—ಅವರು ಪ್ರಾರಂಭ ಮಾಡಿದಾಗ ಕ್ರಿಯಾಲೋಪ ಎತ್ತಿದ್ದಾರೆ.

(ಗೊಂದಲ)

ಶ್ರೀ ವೇದಾಂತ ಹೆಮ್ಮಿಗೆ.—ಜನತಾ ದಳದ ಉದಯ...

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇವರಿಗೆ ಏತಕ್ಕೆ ಹೊಟ್ಟೆನೋವು? ಕುಳಿತುಕೊಂಡು ಕೇಳುವುದಕ್ಕೆ ನಾಚಿಕೆಯೇ? ಮೈಸೂರಿನವರಿಗೆ ೩೫ ವರ್ಷಗಳಿಂದ ತಾಳ ಕುಟ್ಟಿ ಅಭ್ಯಾಸ...

ಅಧ್ಯಕ್ಷರು.—ನೀವೂ ಮೈಸೂರಿನವರಲ್ಲವೇ ? ಈಗ ಮಾನ್ಯ ಭೂಪತಿಯವರು ಹೇಳಲಿ.

ಶ್ರೀ ಯಂ. ಭೂಪತಿ.—ವಿರೋಧ ಪಕ್ಷದ ನಾಯಕರು ಪ್ರಸ್ತಾಪಿಸಿರತಕ್ಕ ವಿಷಯ ಜನತಾ ದಳದ ಸಮಾವೇಶಕ್ಕೆ ಅಥವಾ ಸಮ್ಮೇಳನಕ್ಕೆ ಸರ್ಕಾರಿ ಯಂತ್ರದ ದುರುಪಯೋಗ ಎಂಬುದು ಸ್ಪಷ್ಟವಾಗಿದೆ. ಎರಡನೆಯದು, ಅದರಿಂದ ಸರ್ಕಾರದ ಮೇಲೆ ಆದ ಪರಿಣಾಮ. ಹಾಗೆಂದ ಮಾತ್ರಕ್ಕೆ ಜನತಾ ದಳದ ರಚನೆಯ ಬಗ್ಗೆಯಾಗಲಿ ಅಥವಾ ಇಲ್ಲಿ ಚರ್ಚಿಸುವುದಕ್ಕೆ ಸಂವಿಧಾನದಲ್ಲಿ ಹಕ್ಕು ಇದೆಯೇ ಎಂಬ ಬಗ್ಗೆ ಮಾನ್ಯ ವೇದಾಂತ ಹೆಮ್ಮಿಗೆಯವರು ಏನು ಕ್ರಿಯಾಲೋಪ ಎತ್ತಿದ್ದಾರೆ ಅದು ವಿರೋಧ ಪಕ್ಷದ ನಾಯಕರ ವಿಷಯಕ್ಕೆ ಇರ್‌ರೆಲವೆಂಟ್ ಆಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆದ್ದರಿಂದ ಆ ಬಗ್ಗೆ ದಯವಿಟ್ಟು ರೂಲಿಂಗ್ ಕೊಟ್ಟು ಕಾರ್ಯಕ್ರಮವನ್ನು ಮುಂದುವರಿಸಿದರೆ ಒಳ್ಳೆಯದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮೊದಲನೇ ವಾದ ಏನಿದೆ ಸರ್ಕಾರಿ ಯಂತ್ರದ...

(ಗೊಂದಲ)

ಅಧ್ಯಕ್ಷರು.—ಅವರು ಉತ್ತರ ಹೇಳಿದ ಮೇಲೆ ರೂಲಿಂಗ್ ಕೊಡುತ್ತೇನೆ, ಕ್ರಿಯಾಲೋಪಕ್ಕೆ ಸರ್ಕಾರದ ಅಭಿಪ್ರಾಯವನ್ನು ಕೇಳಬೇಕಾಗುತ್ತದೆ.

ಶ್ರೀ ಧರ್ಮಸಿಂಗ್.—ಇನ್ನೂ ಅವರು ಪ್ರಸ್ತಾಪ ಮಾಡಿಲ್ಲ, ವಿಚಾರವನ್ನು ಹೇಳಿಯೇ ಇಲ್ಲ. ಅವರು ಹೇಳುವುದಕ್ಕೆ ಮೊದಲು ಅವಕಾಶ ಕೊಡಿ. ನಾಯಕರು ಏನು ಹೇಳುತ್ತಾರೋ ಹೇಳಲಿ. ಅವರಿಗೆ ಹೇಳುವುದಕ್ಕೆ ಅವಕಾಶ ಕೊಟ್ಟಮೇಲೆ...

ಅಧ್ಯಕ್ಷರು.—ಅವರು ಹೇಳಲಿ ಆಮೇಲೆ ರೂಲಿಂಗ್ ಕೊಡುತ್ತೇನೆ.

ಶ್ರೀಮತಿ ಕೆ. ಎಸ್, ನಾಗರತ್ನಮ್ಮ.—ಮುಖ್ಯ ಮಂತ್ರಿಗಳಿಗೆ ಈಗ ಹೇಳುವುದಕ್ಕೆ, ಅವಕಾಶ ಇಲ್ಲ. ಅವರು ಇಲ್ಲಿ ಕುಳಿತು ಕೆಲಸ ಮಾಡಿದ್ದಾರೆ, ನಾನು ಅಲ್ಲಿ ಕುಳಿತು ಕೆಲಸ ಮಾಡಿದ್ದೇನೆ. ತಾವು ಅವರಿಗೆ ಹೇಳಬೇಕು...

ಅಧ್ಯಕ್ಷರು.—ರೂಲಿಂಗ್ ಕೊಡಬೇಕಾದರೆ ಅವರನ್ನು ಮತ್ತು ನಿಮ್ಮನ್ನು ಕೇಳಬೇಕು.

ಶ್ರೀ ಡಿ.ಟಿ. ಜಯಕುಮಾರ್,—ಮಾನ್ಯ ಭೂಪತಿಯವರಿಗೆ ಏಕೆ ಅವಕಾಶ ಕೊಡಬೇಕು ?

ಅಧ್ಯಕ್ಷರು.—ರೂಲಿಂಗ್ ಕೊಡುವಾಗ ಇಬ್ಬರನ್ನು ಕೇಳಿ ಕೊಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಜನತಾ ದಳ ಹುಟ್ಟಿದ ಕೂಡಲೇ ಏತಕ್ಕೆ ಗಡಿಬಿಡಿ ಮಾಡುತ್ತಿದ್ದಾರೋ ಗೊತ್ತಿಲ್ಲ. ಅದೇನೇ ಇರಲಿ. ಶ್ರೀ ವೇದಾಂತ ಹೆಮ್ಮಿಗೆಯವರು ಎತ್ತಿದ ಪಾಯಿಂಟ್ ಆಫ್ ಆರ್ಡರ್ ಏನಿದೆ ಅದು ನೋಟೀಸಿನ ಎರಡನೇ ಭಾಗಕ್ಕೆ ಅನ್ವಯಿಸುತ್ತದೆ. ಮೊದಲನೆಯದನ್ನು ಹೇಳಲಿ, ಉತ್ತರಿಸುತ್ತೇನೆ. ಆದರೆ ಜನತಾ ದಳ ಹುಟ್ಟಿರುವ ಪರಿಣಾಮ ಜನತಾ ಸರ್ಕಾರದ ಮೇಲೆ ಆಗಿದೆ ಎಂಬುದರ ವಿಷಯವನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ. ನಮ್ಮ ರಾಜ್ಯಾಂಗದ ಒಂದು ನಿಯಮಾವಳಿಯಲ್ಲಾಗಲಿ, ಎಲೆಕ್ಷನ್ ಕಮೀಷನ್ ಆಕ್ಟ್‌ನಲ್ಲಿ...

ಶ್ರೀ ಧರ್ಮಸಿಂಗ್.—ಹೊಸದಾಗಿ ಕೃಷ್ಣ ಹುಟ್ಟಿದ್ದಾನೆ ಎಂಬುದಾಗಿ ಹೇಳಿದ್ದೀರಿ, ಅದರ ಬಗ್ಗೆ ಹೇಳಬೇಕಲ್ಲಾ.

ಶ್ರೀ ಎನ್. ಎಂ, ಅಡ್ಯಂತಾಯ.—ಜನತಾದಳ ಹುಟ್ಟಿದ ಕೂಡಲೇ ವಿರೋಧಪಕ್ಷದವರನ್ನು ಮಾತನಾಡುವುದಕ್ಕೆ ಬಿಡುವುದಿಲ್ಲ. ಅಂದರೆ ನಾಳೆ ಏನಾಗಬಹುದು ?

SRI S R. BOMMAIAH.—The question of new party, marger or a split can only be considered by the Election Commission or the President of India or the Governor in the State. This House cannot discuss these matters. Other matters, they can discuse.

ಶ್ರೀ ಬಿ. ಬಸವಲಿಂಗಪ್ಪ.—ಇವತ್ತು ಈ ಸಭೆಯ ಮುಂದಿರತಕ್ಕ ವಿಷಯವನ್ನು ನಮ್ಮ ನಾಯಕರು ಓದಿದ್ದಾರೆ. ಈಗ ಅದರ ಬಗ್ಗೆ ವ್ಯಾಖ್ಯಾನ ಮಾಡಲೇಬೇಕು. ಅವರು ಯಾವ ಉದ್ದೇಶದಿಂದ ಕೊಟ್ಟಿದ್ದಾರೆಂಬುದನ್ನು ಅವರು ವ್ಯಾಖ್ಯಾನ ಮಾಡುವುದುನ್ನು ಬಿಟ್ಟು ಬಿಟ್ಟು ಬೇರೆಯವರು ವ್ಯಾಖ್ಯಾನ ಮಾಡುವುದು ಅದಕ್ಕೊಂದು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡುವುದ ಸರಿಯೇ? ಇದರಲ್ಲಿ ಯಾವ ಭಾಗಸರಿ, ಯಾವ ಭಾಗ ಸರಿಯಲ್ಲ. ಎಂಬುದು ಎಲ್ಲಿ ಬಂತು? ಅವರು ಇನ್ನೂ ವ್ಯಾಖ್ಯಾನ ಮಾಡೇ ಇಲ್ಲ. ಸರಿ ಅಥವಾ ಸರಿಯಲ್ಲ ಎಂದು ಹೇಳುವುದಕ್ಕೆ ಅವರಿಗೆ ಎಲ್ಲಿ ಹಕ್ಕು ಉಂಟು! ಅದಕ್ಕೋಸ್ಕರ ಹೇಳುತ್ತಿದ್ದೇನೆ. ನೀವು ಅಧ್ಯಕ್ಷರಿದ್ದೀರಿ. ದಯಮಾಡಿ ಅವರಿಗೆ ಮೊದಲು ಅವಕಾಶ ಮಾಡಿಕೊಡಿ. ಅವರು ಏನು ಹೇಳುತ್ತಾರೋ ಕೇಳಿ. ಸಾವಧಾನದಿಂದ ಕೇಳಿ. ನಂತರ ನೀವು ಏನು ಬೇಕೊ ಆ ರೂಲಿಂಗ್‌ನ್ನು ಕೊಡಿ.

(ಗೊಂದಲ)

ಶ್ರೀ ಗುರುಪಾದಪ್ಪ (ನಾಗರಪಲ್ಲಿ).—ಜನತಾ ದಳ ಹುಟ್ಟಿದೆ ಅಂದ ಕೂಡಲೇ ಇವರಿಗೆ ಮುಂದಿನ ಚುನಾವಣೆಯಲ್ಲಿ ಬರುವುದಿಲ್ಲ ಎಂಬುದಾಗಿ ಭಯ ಬಂದು ಬಿಟ್ಟಿದೆ. ಆ ರೀತಿಯ ಭಯಪಟ್ಟುಕೊಳ್ಳಬೇಡಿ ಅಂತ ಹೇಳುತ್ತಿದ್ದೇನೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ವಿರೋಧಪಕ್ಷದ ನಾಯಕರು ಏನೊಂದು ಪ್ರಶ್ನೆಯನ್ನು ಜನತಾ ದಳದ ಬಗ್ಗೆ ಎತ್ತಿದ್ದಾರೆ, ಅದು ನಿಜವಾಗಿಯೂ ಇಲ್ಲಿ ಎತ್ತಲೇಬಾರದಂತಹ ವಿಷಯ.

(ಗೊಂದಲ)

ಅವರಿಗೆ ಪಕ್ಷದ ಹೆಸರೇ ಇಲ್ಲ...

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇದು ಪಾಯಿಂಟ್ ಆಫ್ ಆರ್ಡರೇ ? ಪಾಯಿಂಟ್ ಆಫ್ ಆರ್ಡರ್ ನೆಪದಲ್ಲಿ ಏನು ಬೇಕಾದರೂ ಮಾತನಾಡಬಹುದೇ ?

ಅಧ್ಯಕ್ಷರು.—ಅವರು ಕ್ರಿಯಾಲೋಪ ಎತ್ತಿದ್ದಾರೆ...

ಶ್ರೀ ಬಿ. ಆರ್. ನೀಲಕಂಠಪ್ಪ.—ಕ್ರಿಯಾಲೋಪದ ಬಗ್ಗೆ ಎರಡು ಮಾತುಗಳನ್ನಾಡುತ್ತಿದ್ದೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಏನು ಕ್ರಿಯಾಲೋಪ ?

ಅಧ್ಯಕ್ಷರು.—ಅವರು ಕ್ರಿಯಾಲೋಪ ಎತ್ತಿದ್ದಾರೆ.

(ಗೊಂದಲ)

SMT. K. S. NAGARATHNAMMA.—I just want to know whether you want us to discuss this or not? What is your intention ?

MR. SPEAKER.—You have no right to ask my intention.

SMT. K.S. NAGARATHNAMMA.—I can ask you. ತಾವು ರೂಲಿಂಗ್ ಕೊಡಬೇಕಾಗುತ್ತದೆ.

ಅಧ್ಯಕ್ಷರು.—ಅವರು ಕ್ರಿಯಾಲೋಪ ಎತ್ತಿದ್ದಾರೆ...ಮಾನ್ಯ ಉಮರಬ್ಬರವರೂ ಕೇಳುತ್ತಿದ್ದಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರು ಯಾವ ಕ್ರಿಯಾಲೋಪ ಎತ್ತಿದ್ದಾರೆ ?

ಅಧ್ಯಕ್ಷರು.—ಮಾನ್ಯ ಉಮರಬ್ಬನವರು ಮಾತನಾಡಬೇಕೆಂದು ಕೇಳುತ್ತಿದ್ದಾರೆ, ಅವರಿಗೂ ಅವಕಾಶ ಕೊಡುತ್ತೇನೆ,

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅದು ಹೇಗೆ ?

ಅಧ್ಯಕ್ಷರು.—ಹಾಗಾದರೆ ಉಮರಬ್ಬನವರಿಗೆ ಹೇಳಿ. ನಿಮ್ಮ ಮುಂದಿಗೆ ಮಾತನಾಡುವುದು ಬೇಡ ಅಂತ ಹೇಳಿ.

(ಗೊಂದಲ)

ಶ್ರೀಮಂತಿ ಕೆ. ಎಸ್. ನಾಗರತ್ನಮ್ಮ.—ತಮಗೆ ಇಷ್ಟ ಇಲ್ಲ ಅಂತ ಹೇಳಿಬಿಟ್ಟರೆ ನಾವು ಹೊರಟು ಹೋಗುತ್ತೇವೆ. ಸ್ಪೀಕರ್ ಡಿಸಿಷನ್ ಅಂತಿಮವಾದುದು. ನಿಮಗೆ ಇಷ್ಟ ಇಲ್ಲ ಅಂತ ಹೇಳಿಬಿಡಿ. ನಾವು ಹೊರಟು ಹೋಗುತ್ತೇವೆ. ನಿಮ್ಮನ್ನು ಬಲವಂತ ಮಾಡುವುದಿಲ್ಲ. ನನಗೆ ಇಷ್ಟ ಇಲ್ಲ, ಈ ಸಬ್ಜೆಕ್ಟ್ ಬೇಡ, ಅವರಿಗೆ ಹೊಟ್ಟೇ ನೋವು ಬರುತ್ತದೆ, ಇದು ಬೇಡ ಅಂತ ಹೇಳಿಬಿಡಿ ನಾವು ಹೊರಟು ಹೋಗುತ್ತೇವೆ.

(ಗೊಂದಲ)

ಅಧ್ಯಕ್ಷರು.—೬ ವರ್ಷಗಳಿಂದ ನಾನು ಕೆಲಸ ಮಾಡಿದ್ದೇನೆ.

(ಗೊಂದಲ)

ನಾನು ಇನ್ನೂ ರೂಲಿಂಗ್ ಕೊಟ್ಟಿಲ್ಲ. ರೂಲಿಂಗ್ ಕೊಡುವುದಕ್ಕಿಂತಾ ಮುಂಚೆ ನಿಮ್ಮನ್ನು ಕೇಳ ಬೇಕಾಗುತ್ತದೆ,

(ಗೊಂದಲ)

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ತಾವು ರೂಲಿಂಗ್ ಕೊಡುವುದು ಬಿಟ್ಟು ಊರಿನವರೆಲ್ಲರಿಗೂ ಕೇಳುತ್ತಾ ಹೋದರೆ...

((ಗೊಂದಲ)

ಅಧ್ಯಕ್ಷರು.—ಹಾಗಿದ್ದರೆ ನೀವು ಅವರಿಗೆಲ್ಲಾ ಹೇಳಿ ಕಂಟ್ರೋಲ್ ಮಾಡಿ.

ಶ್ರೀ ಡಿ. ಟಿ. ಜಯಕುಮಾರ್.—ಪದೇ ಪದೇ ವಿರೋಧ ಪಕ್ಷದ ನಾಯಕಿಯರು ಇವರು ಯಾರು ಇವರು ಯಾರು ಎನ್ನುತ್ತಿದ್ದಾರೆ. ಇವರೆಲ್ಲರೂ ಸದಸ್ಯರೇ.

(ಗೊಂದಲ)

ಅಧ್ಯಕ್ಷರು.—ಈಗ ಎರಡೂ ಕಡೆಯವರಿಗೂ ನಾನು ಅವಕಾಶ ಕೊಡುವುದಿಲ್ಲ. ಸ್ಪೀಕರ್ ಎಲ್ಲಾ ಹೇಳಿದ್ದಾರೆ. ತಾವೆಲ್ಲರೂ ಕೇಳಿತುಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಿಲುವಳಿ ಸೂಚನೆ ಕೊಟ್ಟಮೇಲೆ ನೀವು ಚರ್ಚೆಗೆ ತೆಗೆದು ಕೊಳ್ಳಬೇಕೆಂದು ಮಾಡಿದ್ದೀರಿ. ಅವಕಾಶ ಇದ್ದ ಮೇಲೆ ಚರ್ಚೆ ನಡೆಯಲಿ.

(ಗೊಂದಲ)

ಅಧ್ಯಕ್ಷರು.—ಮಾನ್ಯ ನೀಲಕಂಠಪ್ಪ ಹಾಗೂ ಮಾನ್ಯ ಉಮರಬ್ಬ ಅವರು ಮಾತನಾಡುತ್ತಾರಂತೆ. ಅವರು ಮಾತನಾಡಲಿ.

ಶ್ರೀ ಬಿ. ಆರ್. ನೀಲಕಂಠಪ್ಪ.—ವಿರೋಧ ಪಕ್ಷದ ನಾಯಕರು ಏನೋ ಒಂದು ವಿಚಿತ್ರವಾದ ಇದನ್ನು ಎತ್ತಿದ್ದಾರೆ. ಈ ಒಂದು ಲೋಕದಳ... (ಸಭೆಯಲ್ಲಿ ನಗು) ಜನತಾ ದಳದ ಬಗ್ಗೆ ಇವರು...

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಈಗ ಅದು ಜನತಾ ದಳ ಅಲ್ಲ, ಶೋಕದಳ ಆಗಿದೆ.

(ಗೊಂದಲ)

ಶ್ರೀ ಬಿ. ಆರ್. ನಿಲಕಂಠಪ್ಪ.—ಕಾನೂನು ದುರುಪಯೋಗ ಮಾಡಿಕೊಂಡು ಎಂದು ಏನು ಇವರು ಹೇಳುತ್ತಿದ್ದಾರೆ...

ಶ್ರೀ ಬಿ.ಎ, ಉಮರಬ್ಬ.—ಹೀಗಾದರೆ ಅವರಿಗೆ ತಾವು ಅರ್ಧ ಗಂಟೆ ಅವಕಾಶ ಕೊಡಬೇಕು.

ಶ್ರೀ ಬಿ.ಆರ್. ನೀಲಕಂಠಪ್ಪ.—ಈ ರೀತಿ ಅವರು ಮಾತನಾಡಿದರೆ ನಾನು ಏನು ಮಾಡಲಿ? ಕಾನೂನು ದುರುಪಯೋಗ ಮಾಡಿ ಈ ಪಕ್ಷವನ್ನು ಕಟ್ಟಿದ್ದಾರೆ, ೧೨ ಲಕ್ಷ ಜನರನ್ನು ಸೇರಿಸಿದ್ದಾರೆ

ಎಂದು ಅವರು ಹೇಳುತ್ತಿದ್ದಾರೆ. ಅದಕ್ಕೆ ನಾನು ಹೇಳುತ್ತೇನೆ. ವಿದೇಶದಿಂದ ಮದ್ದು ಗುಂಡುಗಳನ್ನು ತರಿಸಿ ದುಡ್ಡನ್ನು ತಾವು ತೆಗೆದುಕೊಂಡಿಲ್ಲ. ನಮ್ಮ ಹಣದಿಂದ (ತಮ್ಮ ಕೈಯಲ್ಲಿ ಒಂದು ನೋಟನ್ನು ಎತ್ತಿ ಹಿಡಿದು ಎಲ್ಲರಿಗೂ ತೋರಿಸುತ್ತಾ) ೧೦ ಲಕ್ಷ ಜನರನ್ನು ಸೇರಿಸಿದ್ದೇವೆ, ನಾವು ಕಾನೂನು ದುರುಪಯೋಗ ಮಾಡಿಕೊಂಡಿಲ್ಲ. ಈ ಒಂದು ವಿಷಯವನ್ನು ಕಾಲ ವ್ಯಯ ಮಾಡುವುದಕ್ಕೆ ತಂದಿದ್ದಾರೆ. ದಯಾಮಾಡಿ ಕ್ರಿಯಾಲೋಪ ಎರಡನ್ನೂ ಕೂಡಾ...೬೦ ಕೋಟಿ ರೂಪಾಯಿ...

(ಗೊಂದಲ)

ಅಧ್ಯಕ್ಷರು.—ಮಾನ್ಯ ನೀಲಕಂಠಪ್ಪನವರೇ, ನಿಮ್ಮದು ಮುಗಿಯಿತೇ ?

ಶ್ರೀ ಯಂ. ಭೂಪತಿ.—ಮಾನ್ಯ ನೀಲಕಂಠಪ್ಪನವರು ಒಂದು ನೋಟನ್ನು ತೋರಿಸಿ ನಮ್ಮದು ಎಂದು ಹೇಳಿದರು. ಅದು ರಿಸರ್ವ್ ಬ್ಯಾಂಕ್‌ದೋ ಅಥವಾ ಖೋಟಾ ನೋಟೋ ಏನೋ ಎಂದು ನೋಡಬೇಕಾಗುತ್ತದೆ.

(ಗೊಂದಲ)

ಶ್ರೀ ಬಿ, ಆರ್. ನೀಲಕಂಠಪ್ಪ.—ಬರೀ ನಾಚಿಕೆಯಿಂದ...

(ಗೊಂದಲ)

ಶ್ರೀ ಕೆ, ಎಚ್. ಶ್ರೀನಿವಾಸ್.—ಬೆಳಿಗ್ಗೆ ತಾವೇ ಮಾನ್ಯ ನೀಲಕಂಠಪ್ಪನವರು ಎತ್ತಿದ ವಿಷಯದ ಬಗ್ಗೆ ರೂಲಿಂಗ್ ಕೊಟ್ಟಿದ್ದೀರಿ. We are bound by the ruling of the Speaker. This House is bound by the ruling of the Speaker. ಬೆಳಿಗ್ಗೆ ನೀವೇ ನೀಲಕಂಠಪ್ಪನವರಿಗೆ ಮೂರು ನಾಲ್ಕು ಸಾರಿ ಶುದ್ಧ ತರಲೇ ಎಂದು ಹೇಳಿದ್ದಿರಿ. It has become a part and parcel of this House. ಆದ್ದರಿಂದ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಬಿ. ಆರ್. ನೀಲಕಂಠಪ್ಪ.—ಇವರು ಸಖತ್ ತರಲೆಗಳು. ಈ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು. ಇವರು ಇಂತಹ ತರಲೆಗಳು ಎಂದು ನನಗೆ ಗೊತ್ತಿದೆ, ಈ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ.

ಶ್ರೀ ಯಂ. ಭೂಪತಿ.—ಅವರು ನಿಮಗೆ ಗೌರವ ಕೊಟ್ಟು ಮಾತನಾಡಿದ್ದಾರೆ. ಅಧ್ಯಕ್ಷರು ತರಲೆ ಎಂದು ಏನು ಹೇಳಿದ್ದಾರೆ ಅದು ಇರಲಿ, ಆದರೆ ಶ್ರೀ ಶ್ರೀನಿವಾಸ್ ಅವರು ತರಲೆ ಎಂದು ಹೇಳಿದ್ದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ.

SRI K.H. SRINIVAS.—I wanted him to protest. But. he never protested.

ಅಧ್ಯಕ್ಷರು.—ಶ್ರೀ ಉಮರಬ್ಬನವರೇ, ಮೂರು ನಿಮಿಷಗಳಲ್ಲಿ ನೀವು ನಿಮ್ಮ ಮಾತುಗಳನ್ನು ಮುಗಿಸಬೇಕು, ನೀವು ಮಾತನಾಡಿ.

ಶ್ರೀ ಬಿ.ಆರ್. ನೀಲಕಂಠಪ್ಪ.—ಅವರು ಮಾತನಾಡಿದ್ದನ್ನು ಕಡತದಿಂದ ವಾಪಸ್ಸು ತೆಗೆಸಿ.

ಶ್ರೀ ಬಿ.ಎ. ಉಮರಬ್ಬ.—ಅಧ್ಯಕ್ಷರೆ...

ಅಧ್ಯಕ್ಷರು.—ನಾನು ಹೇಳುತ್ತಿದ್ದೇನೆ, ನೀವಿಬ್ಬರು ಕುಳಿತುಕೊಳ್ಳಿ. ನೀಲಕಂಠಪ್ಪನವರೇ, ಏನ್ರಿ ಇದು? ಕುಳಿತುಕೊಳ್ಳಿ. ಶ್ರೀ ಉಮರಬ್ಬನವರೇ, ತಾವೂ ಕುಳಿತುಕೊಳ್ಳಿ, ಹೇಳುತ್ತೇನೆ. ಇಬ್ಬರೂ ಕುಳಿತುಕೊಂಡು ಬಿಡಿ.

ಶ್ರೀ ಬಿ. ಎ. ಉಮರಬ್ಬ.—ಅಧ್ಯಕ್ಷರೇ...

ಶ್ರೀ ಬಿ. ಆರ್. ನೀಲಕಂಠಪ್ಪ.—ಅವರು ಹೇಳಿದ್ದ ಮಾತನ್ನು ವಾಪಸ್ಸು ತೆಗೆಸಿ.

ಶ್ರೀ ಬಿ.ಎ. ಉಮರಬ್ಬ.—ಅಧ್ಯಕ್ಷರೇ. ತಾವು ಏನು ಅಪ್ಪಣೆ ಕೊಡುತ್ತೀರೋ ಅದಕ್ಕೆ ವಿರೋಧ ಮಾಡುವ ಸ್ವಭಾವ ನಮ್ಮದಲ್ಲ. ಮಾನ್ಯ ನೀಲಕಂಠಪ್ಪನವರಿಗೆ ಬೇಸರ ಏನು ಎಂದರೆ ಅವರನ್ನು

ತರಲಿ ಎಂದು ಹೇಳಿದಾಗ ನಾವು ವಿರೋಧ ಮಾಡಲಿಲ್ಲ. ಅದಕ್ಕೆ ಅವರು ನಮ್ಮ ಬಗ್ಗೆ ಕಿಡಿ ಕಾರುತ್ತಿದ್ದಾರೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಅವರು ನನ್ನ ಬಗ್ಗೆ ಹೇಳಿದನ್ನು ನೀವು ಕಡತದಿಂದ ತೆಗೆಸಲೇ ಬೇಕು.

ಅಧ್ಯಕ್ಷರು.—ಶ್ರೀ ಉಮರಬ್ಬನವರೇ, ನೀವು ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಮಾತ್ರ ಹೇಳಿ.

ಶ್ರೀ ಬಿ. ಎ. ಉಮರಬ್ಬ.—ವಿರೋಧ ಪಕ್ಷದ ನಾಯಕರಾದ ಶ್ರೀಮತಿ ನಾಗರತ್ನಮ್ಮನವರು ನಾವು ಕೊಟ್ಟಂಥ ನೋಟೀಸ್ ವಿಷಯವನ್ನು ಮಂಡಿಸಲು ಪ್ರಯತ್ನಿಸಿದಾಗ ಮಿತ್ರ ಸದಸ್ಯರಾದ ಶ್ರೀ ಹೆಮ್ಮಿಗೆ ಅವರು ತಮ್ಮ ಪಾಯಿಂಟ್ ಆಫ್ ಆರ್ಡರನ್ನು ರೈಸ್ ಮಾಡಿದರು. ನಾನು ಈ ಸದನದ ಕಿರಿಯ ಸದಸ್ಯನಾದರೂ ನನ್ನ ಕಿಂಚಿತ್ ಅನುಭವದ ಮೇಲೆ ಅಥವಾ ಜ್ಞಾನದ ಬಗ್ಗೆ ಹೇಳುವುದಾದರೆ ಯಾವುದೇ ಒಂದು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದಾಗ under what rules the Point of order has been raised ಎನ್ನುವುದನ್ನು ಒಬ್ಬ ಸದಸ್ಯ ಹೇಳುವಂಥಾದ್ದು ಈ ಸದನದಲ್ಲಿ ಪಾಲನೆ ಮಾಡಿದರೆ ತಮಗೆ ಏನೋ ಮಾತನಾಡತಕ್ಕಂಥ ಚಟ ಬಂದಕೂಡಲೇ ಪಾಯಿಂಟ್ ಆಫ್ ಆರ್ಡರ್ ಆಶ್ರಯ ಪಡೆದುಕೊಳ್ಳುವ ಕ್ರಮ ನಿಂತೀತು ಎಂದು ನಾನು ಭಾವಿಸಿದ್ದೇನೆ. ಶ್ರೀಮತಿ ನಾಗರತ್ನಮ್ಮನವರು ನಮ್ಮ ಪಕ್ಷದ ಪರಿಯಿಂದ ಕೊಟ್ಟಿರುವ ನೋಟೀಸ್‌ನಲ್ಲಿ ಸ್ವಾಭಾವಿಕವಾಗಿ ಮೊನ್ನೆ ನಡೆದಂಥ ಸಮ್ಮೇಳನದ ಸಂದರ್ಭದಲ್ಲಿ ಸರ್ಕಾರಿ ವ್ಯವಸ್ಥೆಯನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಹೇಳಿದಾಗ ಯಾವುದೇ ಸರ್ಕಾರ ತನ್ನ ವ್ಯವಸ್ಥೆಯನ್ನು ದುರುಪಯೋಗಪಡಿಸಿಕೊಂಡಂಥ ಸಂದರ್ಭದಲ್ಲಿ ಪ್ರಶ್ನೆ ಮಾಡುವಂಥ ಸಂಪೂರ್ಣ ಹಕ್ಕು ಈ ಸದನಕ್ಕೆ ಇದೆ ಎನ್ನುವ ಆಧಾರದಮೇಲೆ ಪೂರ್ಣ ಪ್ರಮಾಣದ ಚರ್ಚೆ ಆಗುವುದರಲ್ಲಿ ಯಾವುದೇ ತಪ್ಪು ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಅಂದರೆ ಯಾವುದೇ ಸರ್ಕಾರವನ್ನು ನಡೆಸತಕ್ಕಂಥ ಪಕ್ಷ ನೇರವಾಗಿ ಸರ್ಕಾರದ ನಡವಳಿಕೆಗಳಲ್ಲಿ ಯಾವುದೇ ಪರಿಣಾಮವನ್ನು ತರುವುದಾದರೂ ಸಹ ಅಂತಹ ಸಂದರ್ಭದಲ್ಲಿ ಇಲ್ಲಿ ಚರ್ಚೆ ಮಾಡಬಹುದು ಎಂದು ನಾವು ಭಾವಿಸಿದ್ದೇನೆ ಅಧ್ಯಕ್ಷರೇ ಮಾನ್ಯ ಮುಖ್ಯ ಮಂತ್ರಿಗಳು ಈ ಸಂದರ್ಭದಲ್ಲಿ ನಿಂತು ಒಂದು ಮಾತನ್ನು ಹೇಳಿದರು ಜನತಾದಳ ಆಗುತ್ತದೆ ಎಂದು ಹೇಳಿದರು ಇವರಿಗೆ ಏಕೆ ಗಡಿ ಬಿಡಿ ಎಂದು ಇದು ಸಹಜ ನಮಗೆ ಗಡಿಬಿಡಿಯಾಗಿದೆ ಸಮುದ್ರ ಮಥನದಲ್ಲಿ ವಿಷ ಬಂದಕೂಡಲೇ ದೇವತೆಗಳಿಗೆ ಹೇಗೆ ಗಡಿಬಿಡಿಯಾಯಿತೋ ಹಾಗೆ ಜನತಾದಳದ ವಿಷ ಉದ್ಭವವಾದಾಗ ದೇವತೆಗಳಿಗೆ ಗಡಿಬಿಡಿಯಾಗಿದೆ. ಆದ್ದರಿಂದ ಇದರಲ್ಲಿ ತಪ್ಪು ಏನೂ ಆಗಲಿಲ್ಲ. ಯಾವ ಪಕ್ಷ ಒಂದು ಸ್ಥಾನದಲ್ಲಿದ್ದು ಅಧಿಕಾರವನ್ನು ನಡೆಸಿತ್ತೋ ಅದೇ ಸ್ಥಾನದಲ್ಲಿ ಅದೇ ಸಂದರ್ಭದಲ್ಲಿ ಕೇವಲ one time one place ಹಾಗೆ ಇನ್ನೊಂದು ಪಕ್ಷ ಹುಟ್ಟಿತು ಎಂದರೆ ಅಷ್ಟರವರೆಗೆ ಅಧಿಕಾರ ನಡೆಸಿದ ಹಿಂದಿನ ಪಕ್ಷ ಈಗ ಎಲ್ಲಿದೆ ?

ಜನತಾ ಪಕ್ಷ ಸತ್ತಿದೆ ಎಂದು ಘೋಷಣೆ ಮಾಡಿದ ನಂತರವೇ, ಇನ್ನೊಂದು ಪಕ್ಷ ಇಲ್ಲಿ ಉದಯವಾಗಬೇಕು. ಸತ್ತ ಪಕ್ಷಗಳ ವಿಚಾರಗಳನ್ನು ಈ ಸದನದಲ್ಲಿ ಚರ್ಚೆ ಮಾಡುವಂತೆ, ಹುಟ್ಟಿದ ಪಕ್ಷಗಳ ವಿಚಾರವನ್ನು ಚರ್ಚೆ ಮಾಡುವುದರಿಂದ ತಪ್ಪಾಗುವುದಿಲ್ಲ. ಆದ್ದರಿಂದ ತಾವು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಬೆಳಿಗ್ಗೆ ಬಿಸಿನೆಸ್ ಅಡ್ವೈಸರಿ ಕಮಿಟಿ ಸಭೆ ಇತ್ತು. ಇವರು ಅಡ್ಜರ್ನ್‌ಮೆಂಟ್ ಮೋಷನ್ ನೋಟೀಸನ್ನು ಸರ್ಕಾರಕ್ಕೂ ಕೊಟ್ಟರು, ಸಂಬಂಧಪಟ್ಟ ಮಂತ್ರಿಗಳಿಗೂ ಕೊಟ್ಟರು ಹಾಗೆಯೇ ನನಗೂ ಕೊಟ್ಟಿರುತ್ತಾರೆ. ಬೆಳಿಗ್ಗೆ ಅಮಿಕಬಲ್ ಸೆಟಲ್‌ಮೆಂಟ್ ಆಗಿದೆ. ಎರಡೂ ಕಡೆಯವರನ್ನೂ ಕರೆಸಿ ಕೇಳಿದ್ದೇನೆ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಏನಾಗಿದೆ ಎಂದರೆ, ಇವರ ಅಡ್ಜರ್ನ್‌ಮೆಂಟ್ ಮೋಷನ್‌ಗೆ ಏನಿತ್ತು, ಇದು ಬೇಡ, ನಿಯಮ ೬೮ರ ಪ್ರಕಾರ ಚರ್ಚೆ ಮಾಡೋಣ ಇದಕ್ಕೆ ನಾವು ಉತ್ತರ ಕೊಡುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬೊಮ್ಮಾಯಿಯವರು ಹೇಳಿದ್ದಾರೆ. ಈ ದೃಷ್ಟಿಯಿಂದ ನಾನು ಏನು ಮಾಡಿದ್ದೇನೆಂದರೆ, ಅಡ್ಜರ್ನ್‌ಮೆಂಟ್ ಮೋಷನ್‌ಗೆ ಕೊಟ್ಟಿದ್ದನ್ನು ಕನ್‌ವರ್ಟ್ ಮಾಡಿ ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ. ಅವರು ಏನೇ ಹೇಳಿದರೂ ಉತ್ತರ ಕೊಡುವಂಥ ಹಕ್ಕು ಮಾನ್ಯ ಮುಖ್ಯಮಂತ್ರಿಗಳಿಗೆ ಇದೆ. ಜನತಾ ದಳ ಎಂದ್ಕ

ಏನು, ಜನತಾ ದಳದಲ್ಲಿ ಏನೇನು ಆಗಿದೆ, ಎಂಬ ಬಗ್ಗೆ ನಿನ್ನೆ ಕೌನ್ಸಿಲ್‌ನಲ್ಲೂ ಹೇಳಿದ್ದಾರೆ, ಇಲ್ಲಿಯೂ ಸಮರ್ಪಕವಾಗಿ ಸಮಂಜಸವಾಗಿ ಉತ್ತರ ಕೊಡುತ್ತಾರೆ. ಆದರೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಅಮಿಕೆಬಲ್ ಸೆಟಲ್‌ಮೆಂಟ್ ಆಗಿದೆ. ಇವತ್ತು ಅವರು ಎಲ್ಲಾ ಬಿಲ್ ಪಾಸ್ ಮಾಡಿಕೊಡಬೇಕು. ಬಿಲ್ ಮುಗಿದ ನಂತರ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಆಗಿದೆ. ಅದೇ ಪ್ರಕಾರ, ಅವರು ಕೊಟ್ಟ ವಚನದ ಪ್ರಕಾರ ಈ ನಾಲ್ಕು ಬಿಲ್ಲುಗಳನ್ನೂ ಪಾಸ್ ಮಾಡಿ ಕೊಟ್ಟಿದ್ದಾರೆ. ಚರ್ಚೆ ಅನಂತರ ತೆಗೆದುಕೊಳ್ಳಬೇಕೆಂದು ಬಿ. ಎ. ಸಿ. ನಲ್ಲಿ ಆಗಿದೆ.

ಈ ವಿಷಯ ಜನತಾ ದಳದ ಉದಯದಿಂದ ಸರ್ಕಾರದ ಮೇಲೆ ದುಷ್ಪರಿಣಾಮ ಬೀರಿದೆ ಎಂದು ಅವರು ಹೇಳಬಹುದು, ಒಳ್ಳೆಯ ಪರಿಣಾಮ ಬೀರಿದೆ ಎಂದು ನೀವು ಹೇಳಬಹುದು. ಸಣ್ಣ ಪಾರ್ಟಿ ಹೋಗಿ ದೊಡ್ಡ ಪಾರ್ಟಿಯಾಗಿದೆ. ಮುಂದೆ ಎಲೆಕ್ಷನ್ ಕಮಿಷನ್‌ಗೆ ತಿಳಿಸುತ್ತೇವೆ ಎನ್ನುವ ಮಾತನ್ನು ಹೇಳುವುದಕ್ಕೆ ನಿಮಗೂ ಅಧಿಕಾರ ಇದೆ. ಅವರು ಏನೇನು ಹೇಳುತ್ತಾರೆ ಹೇಳಲಿ. ನೀವು ಅವರಿಗೆ ಸಮಂಜಸವಾದ ಉತ್ತರ ಹೇಳಿ.

(ಗೊಂದಲ)

ಅಧ್ಯಕ್ಷರು — ಬೆಳಿಗ್ಗೆ ಬಿ.ಎ.ಸಿ.ನಲ್ಲಿ ತೀರ್ಮಾನವಾಗಿದೆ. ಕನವರ್ಟ್ ಮಾಡಬಹುದು ಎಂಬುದಕ್ಕೆ ಒಪ್ಪಿದ್ದರಿಂದ, ನಿಯಮ ೬೮ರ ಪ್ರಕಾರ ನಿಮಗೆ ಮಾತನಾಡುವುದಕ್ಕೆ ಹಕ್ಕಿದೆ. ನೀವು ಜನತಾ ದಳದ ಬಗ್ಗೆ ಸಬ್‌ಸ್ಟ್ಯಾನ್ಸಿಯೇಟ್ ಮಾಡಿ ಮಾತನಾಡಿ...

(ಗೊಂದಲ)

ಅಧ್ಯಕ್ಷರು.—ನಾನು ರೂಲಿಂಗ್ ಕೊಡುವಾಗ ಈ ರೀತಿ ಎದ್ದು ಎದ್ದು ಮಾತನಾಡುವುದು ಪದ್ಧತಿಯಲ್ಲ. ನೀವೂ ಕೂಡಿ, ಅವರೂ ಕೂಡಿ ನಿಯಮ ೬೮ರ ಪ್ರಕಾರ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ನಿಮಗೂ ಅಧಿಕಾರ ಇದೆ, ನಿಮಗೂ ಅವಕಾಶ ಕೊಡುತ್ತೇನೆ. ಜನತಾ ದಳದ ಬಗ್ಗೆ ಸಬ್‌ಸ್ಟ್ಯಾನ್ಸಿಯೇಟ್ ಮಾಡಿ, ವಿರೋಧ ಮಾಡಿ ಹೇಳಿ. ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ. ನಿಮ್ಮ ಕ್ರಿಯಾಲೋಪ ತಳ್ಳಿಹಾಕಿದ್ದೇನೆ...

(ಗೊಂದಲ)

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೇ, ಒಂದೇ ಒಂದು ಕ್ಲಾರಿಫಿಕೇಷನ್‌ಗೆ ಅವಕಾಶ ಕೊಡಿ. ವಿರೋಧ ಪಕ್ಷದವರು ಏನು ವಿಷಯ ಎತ್ತಿದ್ದಾರೆ, ಅದರ ಬಗ್ಗೆ ನನ್ನ ಆಕ್ಷೇಪಣೆ ಇಲ್ಲ, ಆದರೆ ಅವರು ಸರ್ಕಾರಿ ಅಧಿಕಾರದ ದುರುಪಯೋಗವಾಗಿದೆ ಎಂದು ಹಿರಿಯ ಸದಸ್ಯರಾದ ಶ್ರೀಮತಿ ನಾಗರತ್ನಮ್ಮನವರು ಹೇಳಿದರು. ಈ ಸದನದಲ್ಲಿ ಇತರೇ ರಾಜಕೀಯ ಪಕ್ಷಗಳು ಉದಯವಾದ ಬಗ್ಗೆ ಒಂದು ಪ್ರಿಸಿಡೆಂಟ್ ಹಾಕುತ್ತೀರಾ ? ಬಿ.ಎ.ಸಿ.ನಲ್ಲಿ ತೀರ್ಮಾನ ಮಾಡಿದ್ದೇವೆಂದು ಹೇಳಿ, ಇಲ್ಲಿ ಅವಕಾಶ ಕೊಡುತ್ತೀರಾ ? Is it your ruling ?

ಅಧ್ಯಕ್ಷರು.—ಈ ಕಡೆಯವರಿಗೂ ಅವಕಾಶ ಕೊಡುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಅವರು ನಿಮ್ಮ ರೂಲಿಂಗ್‌ನ್ನೇ ಪ್ರಶ್ನೆ ಮಾಡುತ್ತಿದ್ದಾರೆ...

(ಗೊಂದಲ)

ಅಧ್ಯಕ್ಷರು.—ನಾನು ರೂಲಿಂಗ್ ಕೊಟ್ಟಾಗಿದೆ. ಅವರಿಗೆ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೇನೆ, ನೀವು ಮಾತನಾಡಿ.

(ಗೊಂದಲ)

ಅಧ್ಯಕ್ಷರು.—ತಾವು ಕೂಡಿ, ನಾನು ಹೇಳಿದ್ದೇನೆ. ನೀವು ಮಾತನಾಡಿ, ಅವರಿಗೂ ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ. ಶ್ರೀಮತಿ ನಾಗರತ್ನಮ್ಮನವರೇ, ನೀವು ಮಾತನಾಡಿ...

ಎರಡೂ ಕಡೆ ನನ್ನ ರಿಕ್ವೆಸ್ಟ್ ಏನು ಎಂದರೆ, ಇವರು ಆಡಳಿತ ಪಕ್ಷದವರು ಮಾತನಾಡುವಾಗ ನೀವು ಇಂಟರ್‌ಫಿಯರ್ ಮಾಡಬಾರದು, ಮತ್ತು ವಿರೋಧ ಪಕ್ಷದವರು ಮಾತನಾಡುವಾಗ ನೀವು ಇಂಟರ್‌ಫಿಯರ್ ಮಾಡಬಾರದು.

ಶ್ರೀ ಕೆ. ಮಲ್ಲಪ್ಪ.—ಪಾಯಿಂಟ್ ಆಫ್ ಆರ್ಡರ್

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಪಾಯಿಂಟೂ ಇಲ್ಲ ಆರ್ಡರೂ ಇಲ್ಲ. ಇಷ್ಟು ಹೊತ್ತಿಗೆ ನನ್ನ ಭಾಷಣ ಮುಗಿದು ಹೋಗುತ್ತಿತ್ತು.

ಅಧ್ಯಕ್ಷರು.—ಈಗ ಶ್ರೀಮತಿ ನಾಗರತ್ನಮ್ಮನವರು, ಮಾನ್ಯ ಖರ್ಗೆಯವರು, ಮಾನ್ಯ ವೀರಪ್ಪ ಮೊಯಿಲಿಯವರು ಮಾನ್ಯ ವೇದಾಂತ ಹೆಮ್ಮಿಗೆಯವರು, ಮಾನ್ಯ ಯಡಿಯೂರಪ್ಪನವರು, ಮಾನ್ಯ ಬಸವಲಿಂಗಪ್ಪನವರು, ಹಾಗೂ ಮಾನ್ಯ ಜಯಕುಮಾರ್‌ರವರು ಮಾತನಾಡಬಹುದು.

ಶ್ರೀ ಐ.ಬಿ. ಶಂಕರ್.—ಅಧ್ಯಕ್ಷರೇ, ನಾನೂ ಮಾತನಾಡುತ್ತೇನೆ.

ಅಧ್ಯಕ್ಷರೇ.— ಶ್ರೀ ಶಂಕರ್‌ರವರೇ, ತಮ್ಮನ್ನೂ ಕರೆಯುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಅಧ್ಯಕ್ಷರೇ, ನಾನು ಮಾತನಾಡಲೇ...

ಅಧ್ಯಕ್ಷರು.—ನೀವು ಮಾತನಾಡಿ. ಯಾರು ಯಾರು ಮಾತನಾಡುತ್ತೀರಿ ಅವರೆಲ್ಲರೂ ಕೈ ಎತ್ತಿ ನಾನು ಬರೆದುಕೊಳ್ಳುತ್ತೇನೆ. ನೀವು ಮಾತನಾಡಿ, ಶ್ರೀಮತಿ ನಾಗರತ್ನಮ್ಮನವರೇ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಅಧ್ಯಕ್ಷರೇ, ಇಷ್ಟು ಹೊತ್ತು ಗಲಾಟೆಯಾದುದು ತಮ್ಮ ನಜರಿಗೆ ಬಂತು. ನಾನು ಎಂತಹವಳು ಎಂಬುದು ತಮಗೆ ಗೊತ್ತು. ನೀವು ಎಷ್ಟೇ ಗಲಾಟೆ ಮಾಡಿದರೂ ಕೂಡಾ ನನ್ನ ಗಮನ ಒಂದು ಚೂರೂ ಬೇರೆ ಕಡೆಗೆ ಹೋಗುವುದಿಲ್ಲ. ಪಾಪ ಅವರು ತಕತಕ ಎಂದು ಕುಣಿಯುತ್ತಾರೆ. ಏನೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಕೆ. ಮಲ್ಲಪ್ಪ.—ಹಾರ್ಡ್ ಪ್ರೂಫ್ ಎಲ್ಲೂ ಹೋಗುವುದಿಲ್ಲ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಉಚ್ಚರಿಸುವುದನ್ನು ಸರಿಯಾಗಿ ಉಚ್ಚರಿಸಿ. ಮಾನ್ಯ ಅಧ್ಯಕ್ಷರೇ, ಈ ಹೊಸ ಪಕ್ಷ ಹುಟ್ಟಿರುವುದು, ಲೋಕ ಮಾನ್ಯ ಜಯಪ್ರಕಾಶ್ ನಾರಾಯಣರು ಹುಟ್ಟಿದ ದಿವಸ. ನಾನು ಅಲ್ಲಿಗೆ ಹೋಗಿರಲಿಲ್ಲ. ಜನ ಹೇಳುತ್ತಿದ್ದನ್ನು ಕೇಳಿದೆ. ಅಲ್ಲಿ ಜಯಪ್ರಕಾಶ್ ನಾರಾಯಣ್, ಮಹಾತ್ಮಗಾಂಧಿ ಇವರ ದೊಡ್ಡ ಕಟ್‌ಔಟ್ ಹಾಕಿದ್ದಾರೆ ಎಂದು ಜನ ಹೇಳಿ ಕೊಳ್ಳುತ್ತಿದ್ದರು. ಗಾಂಧೀ ಚಿತ್ರದ ಎದುರುಗಡೆ ಇದು ನಡೆಯಿತು. ಅವರಿಬ್ಬರ ಕನಸನ್ನು ನನಸಾಗಿಸತಕ್ಕಂಥ ಒಂದು ಪಾರ್ಟಿ ಉದಯ ಆಯಿತು. ಇದರ ಖರ್ಚು ಯಾರದ್ದು ಎಂದರೆ, ಪೇಪರ್‌ನಲ್ಲಿ ಕೊಟ್ಟಿರುವ ಹಾಗೆ ಹೆಂಡದ ದೊರೆಗಳ ಕಾಂಟ್ರಿಬ್ಯೂಷನ್ ಅಂತೆ, ಹೆಂಡದ ದೊರೆಗಳು ಸೆಕೆಂಡ್ಸ್‌ನ್ನು ಮಾರಾಟ ಮಾಡುವುದಕ್ಕೆ ಒಂದು ವಾರ, ಹದಿನೈದು ದಿವಸದಿಂದ ಫ್ರೀ ಬಿಟ್ಟುಬಿಟ್ಟಿದ್ದರಂತೆ ಎಂದು ಪೇಪರ್‌ನಲ್ಲೇ ಬಂದಿದೆ. ಇದು ಹುಟ್ಟಿರುವ ಕಾರಣ ಏನು ಎಂದರೆ emancipation of Daliths, Women and Weaker Sections. ಪಾರ್ಟಿ ಉದಯ ಇದಕ್ಕೋಸ್ಕರ ಆಗಿದೆ. ಇದು ವಿರೋಧಾಭಾಸ. ಹೆಂಡದ ಹಣ ಗಾಂಧಿ ಕಂಡ ಕನಸು. ಟೀಚರ್ ಹೊಟ್ಟೆಗಿಲ್ಲದೆ ಉಪವಾಸ ಸಾಯುತ್ತಿರುವುದು, ಹೆಣ್ಣು ಮಕ್ಕಳ ಮಾನ ಮರ್ಯಾದೆ ಎಲ್ಲಾ ಹರಾಜಾಗುತ್ತಿರುವುದು ನೋಡುತ್ತಿದ್ದೇವೆ. ಇಂತಹ ಪಾರ್ಟಿಗೆ ಉತ್ತಮವಾದ ಭವಿಷ್ಯ ಇದೆ ಎಂದು ಒಬ್ಬರಿಗಿಂತ ಒಬ್ಬರು ಹೇಳಿದ್ದೂ ಹೇಳಿದ್ದೆ. ಇದು ಏನು ಕೃಷ್ಣ ಅಂತೆ. ಕೃಷ್ಣ ರಸಿಕ, ಕೃಷ್ಣ ಸಾಧು, ಹಾಗೂ ಕೃಷ್ಣ ಡ್ಯಾಷ್ ಡ್ಯಾಷ್ ಇನ್ನೂ ಏನೇನೋ ಇದೆ. ಅಂತಹ ಕೃಷ್ಣ ಹುಟ್ಟಿದ್ದಾನಂತೆ. ಅಂತಹ ಕೃಷ್ಣ ಕಂಸನ ವಧೆಗೆ ತಯಾರಾಗಿದ್ದಾನಂತೆ. ಇವರು ಹೇಳುವ ಕೃಷ್ಣ ನಂಬಿದವರಿಗೆ ದ್ರೋಹ ಮಾಡಿ, ತನ್ನ ಜವಾಬ್ದಾರಿಯನ್ನು ಮರೆತು, ಮಾಡುವುದೆಲ್ಲಾ ಮಾಡಿ, ಇನ್ನೊಬ್ಬರನ್ನು ಬಾವಿಗೆ ತಳ್ಳಿದ ಇವರು ಲೀಡರ್ ಯಾರು ಎಂದರೆ ಚಂಬಲ್ ಕಣಿವೆ ಲೀಡರ್. ಜನ ಏನೋ ಹುಚ್ಚು ಬೆಪ್ಪೇ ಮಾತನಾಡಿದರೆ ನಂಬಿಕೊಳ್ತಾರೆ. ಎಂದು ಇವರು ಜನರೆಲ್ಲರನ್ನೂ ಹುಚ್ಚರನ್ನಾಗಿ ಮಾಡಿದರು. ಇದು ನಾಲ್ಕು ಪಾರ್ಟೀಸ್‌ನ ನಾಲ್ಕು ಜನ ಸೇರಿಕೊಂಡು ಒಂದು ಪಾರ್ಟಿ ಆಗಿ ಹೋಯಿತು. ಇದು ಹುಟ್ಟಿದಾಗಲೇ ಒಂದು ಕುಂಟು ಒಂದು ಕುರುಡು ಹೀಗಾಗಿ ಬಿಟ್ಟು ಲಿಂಬ್‌ಲೆಸ್ ಆಗಿದೆ. ನಾಲ್ಕು ಪಾರ್ಟಿಯಲ್ಲಿ ಒಬ್ಬರಂತೂ ಇತ್ತಲಾಗಿ ತಿರುಗಿ ನೋಡಲೇ ಇಲ್ಲ. ಅಲ್ಲೇ ಬರುವುದಿಲ್ಲ ಬೈಬೈ ಟಾಟಾ ಎಂದು ಹೇಳಿಬಿಟ್ಟರು.

ಶ್ರೀ ಬಿ.ಆರ್. ಯಾವಗಲ್ (ಉಪಾಧ್ಯಕ್ಷರು) ಪೀಠವನ್ನು ಅಲಂಕರಿಸಿದರು)

೪-೩೦ ಪಿ.ಎಂ.

ಆಮೇಲೆ ಇಲ್ಲಿಗೆ ಬಂದವರೊಬ್ಬರು ನಾವು ಹೊರಗಡೆಯೇ ಇರುತ್ತೇವೆ ನಮಗೂ ಇದಕ್ಕೂ ಸಂಬಂಧವಿಲ್ಲ ಅಂತ ಹೇಳಿದರು. ನಮ್ಮ ರಾಜ್ಯದಲ್ಲಿ ನಮ್ಮ ಮುಖ್ಯಮಂತ್ರಿಗಳ ಪಾರ್ಟಿಗೆ ಜನ ಮ್ಯಾನ್‌ಡೇಟ್ ಕೊಟ್ಟಿರುವುದು ಜನತಾ ಪಾರ್ಟಿ ಎಂದು ಆದ್ದರಿಂದ ಈಗ ರಾಜ್ಯದಲ್ಲಿ ಜನತಾ ಪಾರ್ಟಿ ಇರುವುದು ಜನತಾ ದಳ ಅಲ್ಲ, ಆದರೂ ಜನತಾ ದಳ ಅಸ್ತಿತ್ವಕ್ಕೆ ಬಂದಿದೆ, ಎಂದು ಹೇಳುತ್ತಾರೆ ಜನತಾ ದಳ ಅಸ್ತಿತ್ವಕ್ಕೆ ಬಂದಿರುವುದು ಒಂದೇ ಪಕ್ಷ ಅಲ್ಲ. ಜನತಾ ಪಾರ್ಟಿ ಜೊತೆಗೆ ಇನ್ನು ಮೂರು ಪಾರ್ಟಿಗಳು ಸೇರಿ ಜನತಾ ದಳ ಆಗಿದೆ. ಒಬ್ಬ ದೊಡ್ಡ ಮಹಾಶಯರು ಹೇಳುತ್ತಾರೆ. To-day we have planted a new tree. Let the younger generation flourish it and eat the fruit. ಈ ವಿಷ ವೃಕ್ಷದಿಂದ ವಿಷದ ಹಣ್ಣು ತಿಂದು ನಮ್ಮ ಯುವ ಜನಾಂಗ ದಷ್ಟಪುಷ್ಟವಾಗಿ ಬೆಳೆಯುವುದಕ್ಕಾಗುತ್ತದೆಯೆ ? ಇದು ನನಗೆ ಅರ್ಥವಾಗುವುದಿಲ್ಲ. ಇಂತಹ ವಿಷ ಪ್ಲಾಂಟ್ ಬೆಳೆಸಿದ್ದಾರೆ. ಅಲ್ಲಿರುವವರೇ ಇನ್ನೊಬ್ಬರು ಹೇಳಿದರು Congress (I) Government at the Centre was a cesspool of corruption. favouritism and nepotism. ಯಾರು ಹೇಳಿದರು ? ಇವರಿಗೆ ಹೆಂಡದ ದೊರೆಗಳು ಸಾಕಷ್ಟು ಹಣ ಕೊಟ್ಟರು. ಇಂತಹ ಹಣದಿಂದ ಹುಟ್ಟಿದ ಪಾರ್ಟಿಯ ಗತಿ ಮುಂದೇನು ? ಇವರುಗಳು ಮಾತನಾಡುವ ಮಾತು ಇದು. ಇದು ಲಕ್ಷಣವೇ ? ಇದು ಎಷ್ಟೊಂದು ಅಪಹಾಸ್ಯ ತುಂಬಾ ಸುಂದರವಾಗಿದೆ.

ಶ್ರೀ ಹೆಚ್.ಡಿ. ದೇವೇಗೌಡ.—ತಾವು ಒಂದು ನಿಮಿಷ್ ಈಲ್ಡ್ ಆದರೆ ನಾನು ಒಂದು ಮಾತು ಹೇಳುತ್ತೇನೆ. ಮಾನ್ಯ ಅಧ್ಯಕ್ಷರು ಈಗ ತಾನೆ ಒಂದು ರೂಲಿಂಗ್ ಕೊಟ್ಟರು ರೂಲಿಂಗ್ ಕೊಡುವುದಕ್ಕೆ ಕಾರಣ ಬೆಳಿಗ್ಗೆ ಬಿ.ಎ.ಸಿ.ಯಲ್ಲಿ ಈ ವಿಷಯವನ್ನು ಅಲ್ಪಾವಧಿ ಕಾಲದ ಚರ್ಚೆಗೆ ಅವಕಾಶ ಮಾಡಿ ಕೊಡುತ್ತೇನೆಂದು ಹೇಳಿದರು. ಅದು ನನಗೆ ಗೊತ್ತಿಲ್ಲ. ಈಗ ಸಾರ್ವಜನಿಕ ಸಭೆಯಲ್ಲಿ ಮಾಡುವ ಭಾಷಣ, ಸರಕಾರ ಅಧಿಕಾರ ಯಂತ್ರ ದುರುಪಯೋಗದ ಬಗ್ಗೆ ತಾವು ಎಷ್ಟು ಕಟುವಾದ ಕಾಠಿಣ್ಯವಾದ ಪದ ಪ್ರಯೋಗ ಮಾಡಿ ತಮ್ಮಲ್ಲಿರುವ ಅಂಕಿ ಅಂಶಗಳಿಂದ, ಹಾಗೂ ಆಧಾರಗಳಿಂದ ಏನೇನು ದುರುಪಯೋಗವಾಗಿದೆ ಅದನ್ನೆಲ್ಲಾ ಹೇಳಿ. ಬೇಡವೆಂದು ನಾನು ಹೇಳುವುದಿಲ್ಲ. ಆದರೆ ಒಂದು ರಾಜಕೀಯ ಪಕ್ಷದ ಮೇಲೆ ಮಾತಮಾತನಾಡಿದರೆ ಅದು ಸುಬ್ಬರಾಯನ ಕೆರೆ ಭಾಷಣವಾಗುತ್ತದೆ. ಈ ದೇಶದಲ್ಲಿ ಕಾಂಗ್ರೆಸ್ ಪಕ್ಷದ ಮೇಲೆ ಮಾತನಾಡುವುದಾದರೆ ನಾನೂ ಸಹ ಗಂಟೆಗಟ್ಟಲೆ ಮಾತನಾಡಬಹುದು. ನೀವು ಮಾತನಾಡುವ ಪದ ಶಬ್ದ ಪ್ರಯೋಗ ಹೊರಗಡೆ ಬೇರೆ ಕಡೆ ಹೇಳಿ. ಅದಕ್ಕೆ ತಮಗೆ ಅಧಿಕಾರ ಇದೆ. ನೀವು ಯಾವ ಒಂದು ಭಾಷೆಯಲ್ಲಿ ಬೇಕಾದರೂ ಉತ್ತರ ಕೊಡಿ. ಆದರೆ ಈ ಸದನದಲ್ಲಿ ಒಂದು ರಾಜಕೀಯ ಪಕ್ಷದ ಬಗ್ಗೆ ಅಥವಾ ಒಂದು ಪಕ್ಷದ ಮುಖಂಡರ ಬಗ್ಗೆ ಆಗಲಿ. ಅವರು ಚಂಬಲ್ ಕಣಿವೆಯಲ್ಲಿದ್ದವರು ಇದನ್ನೆಲ್ಲಾ ತಾವು ಬೇಕಾದರೆ ಹೊರಗಡೆ ಹೇಳಿ ಅಲ್ಲಿ ತಮ್ಮ ಖುಷಿ ಬಂದ ಹಾಗೆ ಹೇಳಿ. ತಾವು ಯಾವ ಪದ ಪ್ರಯೋಗ ಮಾಡಿ ಹೇಳಿದರೂ ಸಹ ಯಾರು ಚಂಬಲ್ ಕಣಿವೆ ಜನ ಎನ್ನುವುದನ್ನು ಜನ ತೀರ್ಮಾನ ಮಾಡುತ್ತಾರೆ. ಆದರೆ ಈ ಸದನದಲ್ಲಿ ಒಂದು ರಾಜಕೀಯ ಪಕ್ಷದ ಮೇಲೆ ಚರ್ಚೆ ಮಾಡುವುದಾದರೆ ಒಂದು ಡಿಬೇಟ್ ಮಾಡೋಣ. ನಾವು ಸಹ ಕಾಂಗ್ರೆಸ್ ಪಕ್ಷ ಹುಟ್ಟಿದಾಗಿನಿಂದಲೂ ಚರ್ಚೆ ಮಾಡಬಹುದು. ಅದು ಬೇಡ. ತಾವು ದಯಮಾಡಿ ಅಧಿಕಾರ ದುರುಪಯೋಗ ಏನಾಗಿದೆ ಅದು ಮಾತ್ರ ಮಾತನಾಡಿ. ಒಂದು ರಾಜಕೀಯ ಪಕ್ಷ ಹುಟ್ಟುವುದು ಅದು ಸಾಯುವುದು ಅದನ್ನು ಬದುಕಿಸುವುದು ಜನ ತೀರ್ಮಾನ ಮಾಡುತ್ತಾರೆ. ನೀವು ನಿಮ್ಮ ಅನಿಸಿಕೆಯನ್ನು ಪ್ರೆಸ್ ಕಾನ್ಫರೆನ್ಸ್ ಕರೆದು ಹೇಳಬಹುದು, ಇಲ್ಲವೇ ಬಹಿರಂಗ ಸಭೆ. ಕರೆದು ಹೇಳಿ ಆದರೆ ಈ ಸದನದಲ್ಲಿ ಅಲ್ಲ. ಇಂಥದ್ದನ್ನು ಈ ಸದನದಲ್ಲಿ ಮಾಡಬಾರದು

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ನಾನು ಹೇಳಿದ್ದರಲ್ಲಿ ಯಾವುದಾದರೊಂದು ಅನ್ ಪಾರ್ಲಿಮೆಂಟರಿ ಶಬ್ದ ಇದೆಯೇ ?

(ಗೊಂದಲ)

ಶ್ರೀ ಎಚ್.ಡಿ. ದೇವೇಗೌಡ.—ನಾನು ಇಲ್ಲಿ ಯಾರ ಪರ ವಕೀಲಿ ಮಾಡುತ್ತಿಲ್ಲ. ಇದು ಸರಿಯಾದ ತೀರ್ಮಾನವಲ್ಲ. ಮಾನ್ಯ ಸ್ಪೀಕರ್‌ರವರು ಸಹ ಈ ಸದನದ ಘನತೆಯನ್ನು ಎತ್ತಿ ಹಿಡಿಯಬೇಕಾಗುತ್ತದೆ.

(ಗೊಂದಲ)

This is not the way the debate should go on here.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇವರಲ್ಲಿ ಏನಾದರೂ ಅನ್‌ಪಾರ್ಲಿಮೆಂಟರಿ ವರ್ಡ್ ಇದೆಯಾ ?

(ಈ ಸಮಯದಲ್ಲಿ ಅನೇಕ ಜನ ಮಾನ್ಯ ಸದಸ್ಯರುಗಳು ಎದ್ದು ನಿಂತು ಮಾತನಾಡುತ್ತಿದ್ದು ಗೊಂದಲಮಯ ವಾತಾವರಣ ಉಂಟಾಗಿತ್ತು.)

ಶ್ರೀ ಹೆಚ್. ಡಿ. ದೇವೇಗೌಡ.—ಯಾರೂ ಬಾಯಿಗೆ ಬಂದ ಹಾಗೆ ಮಾತನಾಡಬಾರದು. ಅವರು ಏನು ಮಾಡಿದ್ದಾರೆ, ನಾವು ಏನು ಮಾಡಿದ್ದೇವೆ ಎನ್ನುವ ಬಗ್ಗೆ ತೀರ್ಮಾನ ಮಾಡುವ ಶಕ್ತಿ ಜನರಿಗಿದೆ. ಈ ಸದನದ ಹೊರಗಡೆ ಬಹಿರಂಗವಾಗಿ ಏನು ಬೇಕಾದರೂ ಮಾತನಾಡಿ. ಕಠಿಣ ಪದಗಳನ್ನು ಉಪಯೋಗಿಸಿ ಏನು ಬೇಕಾದರೂ ಮಾತನಾಡಿ. ಆದರೆ ಈ ಸಭೆಯಲ್ಲಿ ಒಂದು ರಾಜಕೀಯ ಪಕ್ಷದ ಹುಟ್ಟಿನ ಬಗ್ಗೆ ಮಾತನಾಡಬಾರದು. This is not the forum to discuss. I will tell you that I am not going to allow this.

(ಗೊಂದಲ)

ಉಪಾಧ್ಯಕ್ಷರು.—ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಉಪಾಧ್ಯಕ್ಷರು.—ದಯವಿಟ್ಟು ನೀವು ಅರ್ಥ ಮಾಡಿಕೊಳ್ಳಬೇಕು. ವಿರೋಧ ಪಕ್ಷದ ನಾಯಕಿಯವರು ದಯವಿಟ್ಟು ಕೂಡಬೇಕು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ಕುಳಿತುಕೊಳ್ಳಬೇಕೆ ?

ಉಪಾಧ್ಯಕ್ಷರು.—ತಮ್ಮ ಕಡೆಯಿಂದ ಏನು ನೋಟೀಸ್ ಬಂದಿದೆ ಎಂದರೆ, ದಿನಾಂಕ ೧೧–೧೦–೯೮ ರಂದು ಬೆಂಗಳೂರಿನಲ್ಲಿ ಜನತಾದಳ ಉದ್ಘಾಟನೆ ಸಮಾರಂಭಕ್ಕೆ ಸರ್ಕಾರಿ ಯಂತ್ರದ ದುರುಪಯೋಗ ಆಗಿರುವ ಬಗ್ಗೆ ಚರ್ಚೆ ಮಾಡುವುದೆಂದು ಇದೆ. ತಾವು ಆ ವಿಷಯಕ್ಕೆ ಮಾತ್ರ ಸೀಮಿತವಾಗಿರುವಂತೆ ಮಾತನಾಡಬೇಕು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ನಮ್ಮ ಮನೆಯ ವಿಷಯ ಮಾತನಾಡುತ್ತಿದ್ದೇನೆಯೇ ?

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನೀವು ಮಾಡಿರುವುದೆಲ್ಲಾ ಪೇಪರ್‌ನಲ್ಲಿ ಜಗಜ್ಜಾಹೀರಾಗಿದೆ. ಅದನ್ನೇ ನಾನು ಹೇಳುತ್ತಿರುವುದು. ಇದು ನನ್ನ ಸ್ವಂತ ಕವನ ಅಲ್ಲ. ನಿಮಗೆ ಇಷ್ಟ ಆಗುವ ರೀತಿಯಲ್ಲಿ ನಾನು ಮಾತನಾಡುವುದಕ್ಕಾಗುವುದಿಲ್ಲ. ನಾನು ಮಾತನಾಡುವ ಧಾಟಿಯೇ ಬೇರೆ.

ಶ್ರೀ ಹೆಚ್. ಡಿ ದೇವೇಗೌಡ.—ಸರ್ಕಾರದ ಯಂತ್ರದ ದುರುಪಯೋಗದ ಬಗ್ಗೆ ತಾವು ಮಾತನಾಡಿ ಅದಕ್ಕೆ ನಾನು ಬೇಡ ಎನ್ನುವುದಕ್ಕಾಗುವುದಿಲ್ಲ. ಆದರೆ ಒಂದು ರಾಜಕೀಯ ಪಕ್ಷ ಹುಟ್ಟುವುದು ಬೆಳೆಯುವುದರ ಬಗ್ಗೆ ಮಾತನಾಡುವ ಅವಶ್ಯಕತೆ ಇಲ್ಲ. ಅವರು ಟೇಬಲ್ ಕಣಿವೆಯಲ್ಲಿದ್ದರು, ಇವರು ಅಲ್ಲಿದ್ದರು ಎಂದು ಮಾತನಾಡಬಾರದು. ಮಾನ್ಯ ರಾಜೀವ್ ಗಾಂಧಿಯವರ ಬಗ್ಗೆ ನಾನು ಎಂದೂ ಲಘುವಾಗಿ ಮಾತನಾಡಿಲ್ಲ. ಅದಕ್ಕೂ ನಮಗೂ ಯಾವ ಸಂಬಂಧವೂ ಇಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಸರ್ಕಾರಿ ಯಂತ್ರ ಯಾವ ರೀತಿ ದುರುಪಯೋಗ ಆಗಿದೆ ಎಂಬ ಬಗ್ಗೆಯೇ ನಾನು ಮಾತನಾಡುತ್ತಿರುವುದು.

ಶ್ರೀ ಹೆಚ್. ಡಿ. ದೇವೇಗೌಡ.—ಒಬ್ಬ ಮಂತ್ರಿಗೆ ಯಾವ ಸ್ಥಾನ ಮಾನ ಇರುತ್ತದೆಯೋ ಅಷ್ಟೇ ಸ್ಥಾನಮಾನ ವಿರೋಧಪಕ್ಷದ ನಾಯಕರಿಗೂ ಇರುತ್ತದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಪತ್ರಿಕೆಗಳಲ್ಲಿ ಜಗಜ್ಜಾಹೀರಾಗಿರುವ ವಿಷಯವನ್ನು ಕೋಟ್ ಮಾಡಬಾರದೆಂದು ಹೇಳಿದರೆ ಹೇಗೆ ?

ಶ್ರೀ ಎಚ್. ಡಿ. ದೇವೇಗೌಡ.—ಅವೊತ್ತಿನ ದಿವಸ ಬೆಳಿಗ್ಗೆ ಪ್ರೆಸ್‌ಕಾನ್‌ಫರೆನ್ಸ್ ಕರೆದು ಹೇಳ ಬಹುದಿತ್ತು. ಈ ಸದನದಲ್ಲಿ......

ಉಪಾಧ್ಯಕ್ಷರು.—ಮಾನ್ಯ ವಿರೋಧ ಪಕ್ಷದ ನಾಯಕರವರು ಅನುಮತಿ ನೀಡಿರುವ ವಿಷಯಕ್ಕೆ ಮಾತ್ರ ಸೀಮಿತವಾಗಿ ಮಾತನಾಡಬೇಕು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ತಾವುಗಳು ಅನುಮತಿ ನೀಡಿರುವ ವಿಷಯಕ್ಕೆ ಸೀಮಿತ ವಾಗಿಯೇ ನಾನು ಮಾತನಾಡುತ್ತಿರುವುದು. ಅದನ್ನು ಬಿಟ್ಟು ನನ್ನ ಮನೆಯ ಗೃಹಕೃತ್ಯದ ವಿಷಯ ದಲ್ಲಿ ನಾನು ಇಲ್ಲಿ ಮಾತನಾಡುತ್ತಾ ಇಲ್ಲ......

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಉಪಾಧ್ಯಕ್ಷರೇ ಈ ಮನೆಯ ಹಿರಿಯ ಸದಸ್ಯರಾದ ಮಾನ್ಯ ದೇವೇಗೌಡರ ಬಗ್ಗೆ ಅವರ ನಿಲುವಿನ ಬಗ್ಗೆ ನಮಗೆ ಅಪಾರ ಗೌರವವಿದೆ. ಅದರಂತೆ ತಾವು ಕೂಡ ನಮ್ಮ ಬಗ್ಗೆ ಗೌರವ ಇಟ್ಟುಕೊಳ್ಳಬೇಕು. ರಾಜಕೀಯ ಪಕ್ಷಗಳಾಗಿ ನಾವುಗಳು ಇಲ್ಲಿ ಕೆಲಸವನ್ನು ಮಾಡುತ್ತಾ ಇದ್ದೇವೆ. ಯಾವುದೇ ರಾಜಕೀಯ ಪಕ್ಷವು ಈ ದೇಶದಲ್ಲಿ, ರಾಜ್ಯದಲ್ಲಿ ಉದಯವಾಯಿತು, ಉದಯವಾಗಿಲ್ಲ ಎಂಬ ವಿಚಾರ ಬೇರೆ. ಆದರೆ ನಮಗೆ ಒಂದು ರಾಜಕೀಯ ಪಕ್ಷವಾಗಿ ಇಲ್ಲಿ ಕೆಲಸ ಮಾಡುತ್ತಿರುವಾಗ ಟೀಕೆ ಮಾಡಬಾರದು ಎಂದು ತಾವುಗಳು ಏನು ಹೇಳುತ್ತೀರಿ ಅದು ಸರಿಯಲ್ಲ. ನಾವು ಯಾವ ರೂಪದಲ್ಲಿ ಮಾತನಾಡುತ್ತಿದ್ದೇವೋ ಅದನ್ನು ತಿದ್ದಲಿಕ್ಕೆ ತಮಗ ಹಕ್ಕು ಇಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ನಿಮಗೆ ಟೀಕೆ ಮಾಡಬಾರದು ಎಂದು ಯಾರೂ ಹೇಳಲಿಲ್ಲ. ಆದರೆ ಈ ರೀತಿಯಾದ ಟೀಕೆ ಮಾಡುವುದಿದ್ದಲ್ಲಿ ಹೊರಗಡೆ ಹೋಗಿ ಮಾಡಬಹುದು ಎಂದು ಹೇಳಿದ್ದಾರೆ......

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೆ......

(ಗೊಂದಲ)

ಶ್ರೀ ಎಚ್. ಡಿ. ದೇವೇಗೌಡ.—ಯಾವುದೇ ರಾಜಕೀಯ ಪಕ್ಷದ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡತಕ್ಕಂಥಾದ್ದರ ಬಗ್ಗೆ ನಾನು ಇವೊತ್ತು ಅಬ್‌ಜಕ್ಷನ್ ತೆಗೆದುಕೊಂಡಿದ್ದೇನೆ ಎಂಬುದು ತಪ್ಪು. ವಾದದ ಸರಣಿ ಒಂದು ರಾಜಕೀಯ ಪಕ್ಷದ ನೀತಿಯ ಬಗ್ಗೆ, ಅದರ ಕಾರ್ಯಕ್ರಮದ ಬಗ್ಗೆ ಚರ್ಚೆ ಮಾಡ ತಕ್ಕಂಥ, ತಮ್ಮ ಅನಿಸಿಕೆಗಳನ್ನು ಹೇಳತಕ್ಕಂಥ ಕಾಲಾವಕಾಶ ಇದೆ, ಅದರ ಬಗ್ಗೆ ವಿವಾದ ಇಲ್ಲ ಒಂದು ರಾಜಕೀಯ ಪಕ್ಷದ ಬಗ್ಗೆ ಈ ಸದನದಲ್ಲಿ ಎಷ್ಟು ಸೀಮಿತವಾಗಿ ಮಾತನಾಡಬೇಕು ಮತ್ತು ಯಾವ ಪದ ಗಳನ್ನು ಪ್ರಯೋಗಿಸಬೇಕೆಂದು ನಾವೆಲ್ಲರೂ ತಿಳಿದುಕೊಂಡಿರಬೇಕು. ಬಹಿರಂಗ ಸಭೆಯಲ್ಲಿ ಯಾವ ಶಬ್ದವನ್ನು ಬೇಕಾದರೂ ಯಾರಾದರೂ ಪ್ರಯೋಗಿಸಿದರೆ ಅದಕ್ಕೆ ಯಾರೂ ಅಡ್ಡಿ ಬರುವುದಿಲ್ಲ. ಆದರೆ ಈ ಘನ ಸಭೆಯಲ್ಲಿ ಮಾತ್ರ ಯಾರೂ ಅಂಥ ಶಬ್ದಗಳನ್ನು ಉಪಯೋಗಿಸಬಾರದು. ಅವರು ಬೇಕಾದರೆ ಎಷ್ಟೇ ಎತ್ತರದ ವ್ಯಕ್ತಿಯಾಗಿದ್ದರೂ ಕೂಡ ಅಂತಹವರು ಅಂಥ ಶಬ್ದಗಳನ್ನು ಪ್ರಯೋಗಿ ಸಿದರೆ ಅದಕ್ಕೆ ನಾನು ಯಾವತ್ತೂ ಅಬ್‌ಜಕ್ಷನ್ ತೆಗೆದುಕೊಳ್ಳುತ್ತೇನೆ. ನಮ್ಮ ಮಾತುಗಳು ಸದನಕ್ಕೆ ಗೌರವ ತರುವಂತಿರಬೇಕು. ಅದನ್ನು ಬಿಟ್ಟು ಯಾರೇ ಆಗಿರಲಿ, ಎಷ್ಟು ದೊಡ್ಡವರೇ ಆಗಿರಲಿ ಇಲ್ಲಿ ಅಂಥ ಶಬ್ದಗಳನ್ನು ಯಾವುದೇ ರಾಜಕೀಯ ಪಕ್ಷದ ಬಗ್ಗೆ ಉಪಯೋಗಿಸಿದ್ದಾದಲ್ಲಿ ನಾನು ಮೊದಲು ಅದರಲ್ಲಿ ಭಾಗಿಯಾಗುವುದಕ್ಕೆ ತಯಾರಾಗಿಲ್ಲ. ಅದೇ ರೀತಿಯಲ್ಲಿ ಈ ಸದನದ ಹೊರಗಡೆ ಇರತಕ್ಕಂಥ ಇನ್ನೊಬ್ಬ ವ್ಯಕ್ತಿಯ ಬಗ್ಗೆ ಚರ್ಚೆ ಮಾಡುವುದಕ್ಕೆ ಈ ವೇದಿಕೆಯನ್ನು ಬಳಸುವುದು ಖಂಡಿತವಾಗಿ ಈ ಸದನದ ಪ್ರತಿಷ್ಠೆಗೆ ಬರತಕ್ಕಂಥಾದ್ದು ಅಲ್ಲ. ಆದುದರಿಂದ ನಾನು ಮಾನ್ಯ ವಿರೋಧಪಕ್ಷದ ನಾಯಕರವರಲ್ಲಿ ಕೈಜೋಡಿಸಿ ಕೇಳಿಕೊಳ್ಳುತ್ತೇನೆ. ರಾಜ್ಯದಲ್ಲಿ ಅಧಿಕಾರದ ದುರುಪಯೋಗದ ಬಗ್ಗೆ ಎಷ್ಟೇ ಕಾಠಿಣ್ಯವಾಗಿ ಶಬ್ದಗಳನ್ನು ಬೇಕಾದರೂ ಹೇಳಲಿ ನಮ್ಮ ಅಭ್ಯಂತರವಿಲ್ಲ. ಆದರೆ ಯಾವುದೇ ರಾಜಕೀಯ ಪಕ್ಷದ ಬಗ್ಗೆ ಅದರ ನಾಯಕತ್ವದ ಬಗ್ಗೆ ಇಲ್ಲಿ ಚರ್ಚೆ ಮಾಡಿದರೆ ಅದು ಸರಿಯಲ್ಲ ಮತ್ತು

ಅದರ ವ್ಯಾಪ್ತಿ ನಂತರ ಬಹಳ ದೂರ ಹೋಗುತ್ತದೆ. ಅನಕ್ಕೆ ನಾವು ಕೂಡ ಉತ್ತರ ಕೊಡಬೇಕಾಗುತ್ತದೆ. ಅಂತಹ ಸಂರ್ಭಗಳು ಈ ಸದನದ ಗೌರವಕ್ಕೆ ಲೋಪವಾಗಬಹುದು. ಆದುದರಿಂದ ಹೊರಗಡೆ ತಾವುಗಳು ಏನು ಬೇಕಾದರೂ ಮಾತನಾಡಿ ಯಾರೂ ತಮಗೆ ಬೇಡ ಎಂದು ಹೇಳುವುದಿಲ್ಲ.

ಉಪಾಧ್ಯಕ್ಷರು.—ದಯುವಿಟ್ಟು ವಿಷಯಕ್ಕೆ ಸೀಮಿತವಾಗಿ ಮಾತನಾಡಿ...

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಉಪಾಧ್ಯಕ್ಷರೇ, ನಾನು ಮಾತನಾಡುವ ಧಾಟಿ ಬೇರೆ, ಮಾನ್ಯ ದೇವೇಗೌಡರು ಮಾತನಾಡುವ ಧಾಟಿ ಬೇರೆ. ಒಂದು ವೇಳೆ ನನಗೆ ಹೀಗೇ ಮಾತನಾಡಿ ಎಂದು ಹೇಳುವುದಾದರೆ ಅವರೇ ನನಗೆ ಬರೆದುಕೊಡಬೇಕು, ಅದನ್ನು ನಾನು ಇಲ್ಲಿ ಓದಿ ಬಿಡಬೇಕು...

ಶ್ರೀ ಎಚ್. ಡಿ. ದೇವೇಗೌಡ.—ನಾನು ಇಲ್ಲಿ ಯಾರಿಗೂ ಭಾಷಣ ಬರೆದುಕೊಡುವುದಕ್ಕೆ ಬಂದಿಲ್ಲ ತಾವುಗಳು ತುಂಬಾ ಅನುಭವಸ್ಥರು. ಆದರೆ ನಾವುಗಳು ಈ ಸ್ಥಾನದಲ್ಲಿ ಕುಳಿತುಕೊಂಡಾಗ ಸಭೆಯ ಚರ್ಚೆಯು ನಿಯಮಗಳ ವ್ಯಾಪ್ತಿಯಲ್ಲಿ ಆಗಲಿ ಎಂದು ನಾನು ಆಶಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ತಮಗೆ ಏನು ಮಾತನಾಡಬೇಕೆಂದು ಮಾನ್ಯ ದೇವೇಗೌಡರು ಬರೆದುಕೊಡಬೇಕಾಗಿಲ್ಲ. ತಮ್ಮ ಹತ್ತಿರ ಬೇಕಾದಷ್ಟು ಬುದ್ಧಿವಂತರಾದ ಜನರು ಇದ್ದಾರೆ. ಅವರ ಹತ್ತಿರ ಬರೆಸಿಕೊಳ್ಳಿ......

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಎಲ್ಲರಿಗಿಂತಲೂ ನೀವೇ ಹೆಚ್ಚು ಬುದ್ಧಿವಂತರು. ನೀವೇ ಬರೆದುಕೊಟ್ಟುಬಿಡಿ...

ಶ್ರೀ ಆರ್. ಎಲ್. ಜಾಲಪ್ಪ.— ನನಗಿಂತಲೂ ಹೆಚ್ಚು ಬುದ್ಧಿವಂತರು ಬೇಕಾದಷ್ಟು ಜನರು ಇದ್ದಾರೆ....

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಅವರೆಲ್ಲರಿಗಿಂತಲೂ ನೀವೇ ಹೆಚ್ಚು ಬುದ್ಧಿವಂತರು.

ಉಪಾಧ್ಯಕ್ಷರು.— ದಯುವಿಟ್ಟು ಆದಷ್ಟು ಜಾಗ್ರತೆಯಾಗಿ ಮುಗಿಸಿ, ವಿಷಯಕ್ಕೆ ಸೀಮಿತವಾಗಿ ಮಾತನಾಡಿ...

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ನಾನು ಮುಗಿಸಲಿಕ್ಕೇ ನಿಂತಿದ್ದೇನೆ...

ಶ್ರೀ ಕೆ. ಎಚ್. ಶ್ರೀನಿವಾಸ್.— ಮಾನ್ಯ ಜಾಲಪ್ಪನವರೆ, ನಿಮ್ಮ ಕೈಯಲ್ಲಿ ಬರೆದುಕೊಡಿ ಎಂದು ಅವರು ಹೇಳಿದರು. ಆದರೆ ನಿಮ್ಮ ಕೇಸೇ ನಿಮಗೆ ಬರೆದುಕೊಳ್ಳುವುದಕ್ಕೆ ಬರುವುದಿಲ್ಲ, ಇನ್ನು ಅವರಿಗೆ ಬರೆದುಕೊಟ್ಟು ಅವರು ಎಲ್ಲಾದರೂ ಜೈಲಿಗೆ ಹೋದಾರು...

ಶ್ರೀ ಆರ್. ಎಲ್. ಜಾಲಪ್ಪ.— ಹೇಡಿಗಳು. ಹೇಡಿಗಳು, ಎದುರಿಗೆ ನಿಂತುಕೊಂಡು ಕೇಳಲಾರದೇ ತೆಗೆದುಕೊಂಡು ಹೋಗಿ ಸುಳ್ಳು ಕೇಸ್ ಹಾಕಿ... ಅದರ ಬಗ್ಗೆ ವ್ಯಾಖ್ಯಾನ ಇಲ್ಲಿ ಮಾಡುವುದು ಬೇಡ.

ಶ್ರೀ ಧರ್ಮಸಿಂಗ್.— ನಾವು ಒಪ್ಪಲಿಲ್ಲ, ನಿಮ್ಮ ಹೆಗಡೆಯವರೇ ಸಿಬಿಐ ತನಿಖೆಗೆ ಒಪ್ಪಿದ್ದು.

ಶ್ರೀ ಆರ್. ಎಲ್. ಜಾಲಪ್ಪ.— ೪೦ ವರ್ಷದಿಂದ ಈ ರೀತಿ ಮಾಡಿಕೊಂಡು ಬಂದೇ ಸರ್ಕಾರ ನಡೆಸಿದ್ದು ಸ್ವಾಮಿ ಇವರು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಹಿಂದಿನ ಮುಖ್ಯಮಂತ್ರಿಗಳು ಏನು ಹೇಳಿದರೋ ಅದಕ್ಕೆ ನಾವೂನೂ ಹೇಳಬೇಕಾಗುತ್ತದೆ, ಈ ದೇಶದಲ್ಲಿ ಏನಾದರೂ ಸರ್ವಸ್ವವನ್ನೂ ದೇಶಕ್ಕಾಗಿ ಅರ್ಪಿಸಿದವರಿದ್ದರೆ ಅದು ನಮ್ಮ ಪ್ರಧಾನ ಮಂತ್ರಿಗಳ ವಂಶ. ಇವರ ಪ್ರಕಾರ ಅವರ ಮುತ್ತಾತ ಏನು ಮಾಡಲಿಲ್ಲ, ಅವರ ತಾತ ಏನು ಮಾಡಲಿಲ್ಲ ಅವರ ತಾಯಿ ಏನೂ ಮಾಡಲಿಲ್ಲ, ಎಲ್ಲಾ ಇವರೇ ಮಾಡಿರುವುದು.

(ಗೊಂದಲ)

ಅವರನ್ನು ಚೋರ್ ಅನ್ನುವವರು ಇವರು. ಇವರೆಂಥಾ ಮಹಾ ಚೋರರಿಬಹುದು ಇವರುಗಳಿಗೆ ಯಾವಾಗ ಬುದ್ಧಿ ಬರುತ್ತದೋ ಗೊತ್ತಿಲ್ಲ. ಇಷ್ಟೆಲ್ಲದರ ಜೊತೆಗೆ ಇವರುಗಳು ನನಗೆ

ತಿಳಿದ ಹಾಗೆ ಇವರೆಲ್ಲಾ ಬೇರೆ ಪಾರ್ಟಿಗೆ ಸೇರಿದರು. ಅಂದ ಮೇಲೆ ಇವರೆಲ್ಲಾ ಹೋಗಿ ಗವರ್ನರ್ ಹತ್ತಿರ ಹೋಗಿ ಪರ್ಮಿಷನ್ ತೆಗೆದುಕೊಂಡು ಆಮೇಲೆ ಸರ್ಕಾರ ನಡೆಸುವುದಕ್ಕೆ ಪ್ರೋಥ್ ತೆಗೆದು ಕೊಂಡು ಬರಬೇಕಾಗಿತ್ತು ಎಂಬುದು ನನ್ನ ಭಾವನೆ. ಇವರು ರಾಜ್ಯ ಆಳುವುದಕ್ಕೆ ಇರಬೇಕೆಂದು ಜನ ಕನಸಿನಲ್ಲೂ ಹೇಳುವುದಿಲ್ಲ.

ಶ್ರೀ ಡಿ. ಟಿ. ಜಯಕುಮಾರ್. - ಸರ್ಕಾರಕ್ಕೆ ಅಪಾಯ ಬಂದಿಲ್ಲವಲ್ಲಾ ಗವರ್ನರ್ ಹತ್ತಿರ ಹೋಗುವುದಕ್ಕೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಹಾಗೆಂದು ಹೇಳಿ ಹೇಳಿ ಕಲ್ಲಿನಂತೆ ಕೂತಿದ್ದೀರಿ, ಸರ್ಕಾರ ಹೋಯಿತು ಅಂತ ನಾನು ಹೇಳಿದೆನೇ? ನಿಮ್ಮದನ್ನು ನನ್ನ ಬಾಯಲ್ಲೇಕೆ ತುರುಕುತ್ತೀರಿ? ಅದಕ್ಕೇ ಇನ್ನೂ ಎಳಸು ಅನ್ನುವುದು.

ಶ್ರೀ ಡಿ. ಟಿ. ಜಯಕುಮಾರ್.— ಶ್ರೀಮತಿ ಇಂದಿರಾಗಾಂಧಿ ಸಹ ಸೋತರು. ರಾಜಕೀಯ ಇತಿಹಾಸದಲ್ಲಿ ಪ್ರಧಾನ ಮಂತ್ರಿಗಳೊಬ್ಬರು ಸೋತಿದ್ದು ಭಾರತದಲ್ಲಿ ಮಾತ್ರ.

ಶ್ರೀ ಹೆಚ್, ಡಿ. ದೇವೇಗೌಡ. — ನನ್ನದು ಒಂದೇ ಮಾತು. ವಿರೋಧ ಪಕ್ಷದ ನಾಯಕಿಯವರ ನಮ್ಮೆಲ್ಲರಿಗಿಂತ ಹಿರಿಯರು, ಅನುಭವಸ್ಥರು, ತಾವು ಹೇಳಿ, ಇದು ಜನತಾ ದಳ ಆದ ತಕ್ಷಣ ಗವರ್ನರ್ ಮುಂದೆ ಹೋಗಬೇಕೆಂದು ಹೇಳಿದಿರಿ. ಹಿಂದೆ ದೇವರಾಜ ಅರಸು ಹೊಸ ಪಕ್ಷ ಕಟ್ಟಿದರು. ಆಗ ಗವರ್ನರ್ ಮುಂದೆ ಹೋಗಿ ಪ್ರೋಥ್ ತೆಗೆದುಕೊಂಡು ಬಂದು ರಾಜ್ಯಭಾರ ಮುಂದುವರಿಸಿದರಾ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಆಗ ಆ್ಯಂಟಿ ಡಿಫೆಕ್ಷನ್ ಬಿಲ್ ಇರಲಿಲ್ಲ.

ಶ್ರೀ ಹೆಚ್, ಡಿ. ದೇವೇಗೌಡ.— ಏಕೆ ಮಾತನಾಡುತ್ತೀರಿ? ಮಾತಿಗೋಸ್ಕರ ಮಾತಾಡ ಬೇಕೆಂದರೆ ನನ್ನ ತಕರಾರಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಆಗಿದ್ದ ರೂಲ್ಸೇ ಬೇರೆ. ತಿಳಿದುಕೊಳ್ಳದಿದ್ದರೆ ನಾನೇನು ಮಾಡಲಿ.

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ.— ಸನ್ಮಾನ್ಯ ಅಧ್ಯಕ್ಷರೇ, ನಮ್ಮ ವಿರೋಧ ಪಕ್ಷದ ನಾಯಕಿ ಯವರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈ ಮನೆಯ ಅತ್ಯಂತ ಹಿರಿಯರೂ ಲೋಕೋಪಯೋಗಿ ಸಚಿವರು ಆದ ಮಾನ್ಯ ದೇವೇಗೌಡರು ಈ ಮನೆಯ ಫೋರಂನಲ್ಲಿ ಅದೆಲ್ಲವನ್ನೂ ಡಿಸ್ಕಷನ್ ಮಾಡುವಂಥಾದ್ದು ಸಮಂಜಸವಲ್ಲ. ಕೇವಲ ಈ ಒಂದು ಸದನದಲ್ಲಿ ಸರ್ಕಾರಿ ಯಂತ್ರವನ್ನು ಹೇಗೆ ದುರುಪಯೋಗಪಡಿಸಿಕೊಂಡರು ಎಂಬುದರ ಬಗ್ಗೆ ಮಾತ್ರ ಮಾತನಾಡಬೇಕೆಂದು ಪದೇ ಪದೇ ಪಾಯಿಂಟ್ಔಟ್ ಮಾಡಿದ್ದಾರೆ. ಒಂದು ಮಾತನ್ನು ನಾವು ನೆನಪಿನಲ್ಲಿಟ್ಟುಕೊಳ್ಳ ಬೇಕಾಗುತ್ತದೆ. ಯಾವುದೇ ಒಂದು ಸರಕಾರ ಅಸ್ತಿತ್ವದಲ್ಲಿ ಇರಬೇಕಾದರೆ ಅವರ ಒಂದು ಪ್ರಣಾಳಿಕೆಯ ಮೇಲೆ ಮತ್ತು ಜನ ಬೆಂಬಲದ ಮೇಲೆ ಚುನಾವಣೆ ನಡೆದು ಆರಿಸಿ ಬಂದ ಮೇಲೆ ಸರಕಾರವನ್ನು ಸ್ಥಾಪನೆ ಮಾಡಿಕೊಳ್ಳುತ್ತಾರೆ. ಈ ಪಕ್ಷದ ಬಗ್ಗೆ ಚರ್ಚೆ ಮಾಡತಕ್ಕಂಥಾದ್ದಾಗಲೀ ಅಥವಾ ಅದರ ಬಗ್ಗೆ ಈ ಸದನದಲ್ಲಿ ಹೆಚ್ಚಿನ ಚರ್ಚೆ ನಡೆಸ ತಕ್ಕಂಥಾದ್ದು ಹಿಂದೆ ಇರಲಿಲ್ಲ ಅದನ್ನು ನಾನು ಒಪ್ಪುತ್ತೇನೆ. ಹಿಂದೆ ದೇವರಾಜ್ ಅರಸ್‌ರವರು ಕಾಂಗ್ರೆಸ್ ಪಕ್ಷವನ್ನು ಬಿಟ್ಟು ಕರ್ನಾಟಕ ಕಾಂಗ್ರೆಸ್ ಎಂದು ಮಾಡಿದ ಮೇಲೆ ಪುನಃ ಓಥ್ ತೆಗೆದು ಕೊಂಡರೇ ಎಂದು ಮಾನ್ಯ ಸಚಿವರು ಕೇಳಿದರು. ಆಗ ಆ್ಯಂಟಿ ಡಿಫೆಕ್ಷನ್ ಬಿಲ್ ಇರಲಿಲ್ಲ ಹಾಗೂ ರಾಜಕೀಯ ಪಕ್ಷಗಳು ಯಾವ ರೀತಿಯಾಗಿ ಈ ಸದನದಲ್ಲಿ ನಡೆದುಕೊಳ್ಳಬೇಕೆಂಬುದರ ಬಗ್ಗೆ ಕಾನೂನುಗಳು ಇರಲಿಲ್ಲ. ಇವತ್ತು ಒಂದು ಕಾನೂನನ್ನು ಅಸ್ತಿತ್ವದಲ್ಲಿ ತಂದಿದ್ದೀರಿ ಅದು ಅಸ್ತಿತ್ವದಲ್ಲಿದ್ದಾಗ ಮತ್ತು ಅದರ ಜೊತೆಯಲ್ಲಿ ಸಭಾಧ್ಯಕ್ಷರು ಕೆಲವು ನಿಯಮಾವಳಿಗಳನ್ನು ಮಾಡಿದ್ದಾರೆ. ಯಾವುದೇ ಒಂದು ಪಕ್ಷದ ಉದಯವಾದ ಮೇಲೆ ಸದನದಲ್ಲಿ ಅಧಿಕಾರದಲ್ಲಿರತಕ್ಕಂತಹ ಪಾರ್ಟಿ ಯಾವುದು ಇದೆ ಅವರು ತಮ್ಮ ಪಾರ್ಟಿಯನ್ನು ಬದಲಾವಣೆ ಮಾಡಿಕೊಂಡರೆ ಕಾನೂನು ಪ್ರಕಾರ ೩೦ ದಿವಸದ ಒಳಗಾಗಿ ಅಧ್ಯಕ್ಷರಿಗೆ ಪಟ್ಟಿಯನ್ನು ನೀಡಿ ಪಾರ್ಟಿಯನ್ನು ಬದಲಾವಣೆ ಮಾಡಿ ಕೊಂಡಿರುವುದನ್ನು ತಿಳಿಸಬೇಕಾಗುತ್ತದೆ, ಜನತಾ ದಳವನ್ನು ನಾವು ಮಾಡಿಲ್ಲ, ಹೊಸ ಪಕ್ಷವನ್ನು ಕಟ್ಟಿಲ್ಲ ಅದರ ಸದಸ್ಯರು ನಾವಲ್ಲ ಮತ್ತು ಪುನಃ ರಾಜ್ಯಪಾಲರ ಹತ್ತಿರ ಹೋಗಿ ಮಂತ್ರಿ ಮಂಡಲ

ರಚನೆ ಮಾಡತಕ್ಕಂಥಾದ್ದಾಗಲೀ ಇಲ್ಲವೇ ಓಥ್ ತೆಗೆದುಕೊಳ್ಳತಕ್ಕಂತಹ ಅವಶ್ಯಕತೆಯಾಗಲೀ ಇಲ್ಲವೆಂದು ಹೇಳಿದರೆ ಅದು ಬೇರೆ ವಿಚಾರ. ಜನತಾ ಪಕ್ಷ ಇವತ್ತು ಒಂದು ವಿಶಿಷ್ಟವಾದಂತಹ ಚುನಾವಣೆಯನ್ನು ಎದುರಿಸಿ ಆ ಚುನಾವಣೆಯಲ್ಲಿ ನಿಮ್ಮದೇ ಆದಂತಹ ವಿಶಿಷ್ಟವಾದಂತಹ ಪ್ರಣಾಳಿಕೆಯನ್ನು ಜನರಿಗೆ ಕೊಟ್ಟು. ಕರ್ನಾಟಕ ರಾಜ್ಯಕ್ಕೆ ಸೀಮಿತವಾದಂತಹ ಅನೇಕ ವಿಷಯಗಳ ಬಗ್ಗೆ ಜನರಿಗೆ ತಿಳಿಸಿ ತಾವು ಅಧಿಕಾರಕ್ಕೆ ಬಂದಿದ್ದೀರಿ. ಆದರೆ ಇವತ್ತು ಹೊಸದಾಗಿ ನಾಲ್ಕು ಪಕ್ಷ ಕೂಡಿ ಒಂದು ಪಕ್ಷವೆಂದು ಮಾಡಿಕೊಂಡಿದ್ದೀರಿ ಅದರಲ್ಲಿ ಒಂದು ಅಲ್ಲೇ ಕುಂಟು ಆಗಿದೆ ಆ ಪರಿಸ್ಥಿತಿಯಲ್ಲಿದ್ದಾಗ ಹೊಸ ಪಕ್ಷದ ಮ್ಯಾನಿಫೆಸ್ಟೋವನ್ನು ಕೂಡ ಡಿಕ್ಲೇರ್ ಮಾಡಿದ್ದೀರಿ ಆದರಲ್ಲಿ ಮುಂದಿನ ಯೋಜನೆ ಏನು ಎಂಬುದನ್ನು ಕೂಡ ನೀಡಿದ್ದೀರಿ. ಫ್ಲಾಗ್ ಸಿಂಬಲ್ ಏನು ಇರಬೇಕು, ಯಾವುದಕ್ಕೆ ಪ್ರಯಾರಿಟಿ ಕೊಡಬೇಕು ಇನ್ನಿತರ ಅಂಶಗಳನ್ನೊಳಗೊಂಡಂತೆ ೨೦ ಅಂಶದ ಕಾರ್ಯಕ್ರಮವನ್ನು ರೂಪಿಸಿ ಅದರ ಪಟ್ಟಿಯನ್ನು ಕೊಟ್ಟಿದ್ದೀರಿ. ಆದರಲ್ಲಿ ಮುಖ್ಯವಾಗಿ ಏನು ಹೇಳಿದ್ದೀರಿ ಎಂದರೆ ಕೇಂದ್ರ ಸರಕಾರದಲ್ಲಿನ ಆಡಳಿತವನ್ನು ಬದಲಾವಣೆ ಮಾಡುವುದು, ರಾಜೀವ್ ಗಾಂಧಿಯವರನ್ನು ಕೆಳಗೆ ಇಳಿಸುವುದು. ಇದೂ ಕೂಡ ಒಂದು ಪಾಯಿಂಟ್ ಇದ. ಇದರ ಜೊತೆಯಲ್ಲಿ ೨೦ ಅಂಶದ ಕಾರ್ಯಕ್ರಮ ಎಂದು ಬೇರೆ ಕೊಟ್ಟಿದ್ದೀರಿ. ಒಂದು ವಿಶಿಷ್ಟವಾದಂತಹ ಪ್ರಣಾಳಿಕೆಯ ಮೇಲೆ ಜನ ಬೆಂಬಲ ನೀಡಿದ್ದು ಅದನ್ನು ಬದಲಾಯಿಸಿ ತಾವು ಬೇರೆ ಪಕ್ಷಗಳ ಜೊತೆಯಲ್ಲಿ ಸೇರಿ ಬೇರೆ ಒಂದು ಪ್ರಣಾಳಿಕೆಯನ್ನು ತಯಾರು ಮಾಡಿದ್ದೀರಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.— ನನ್ನದು ಒಂದು ಕ್ರಿಯಾ ಲೋಪ ಇದೆ.

SRI M. MALLIKARJUNA KHARGE.— He has to raise it from his seat. He is not in his seat. ಅವರು ಅವರ ಜಾಗಕ್ಕೆ ಹೋಗಿ ಹೇಳಿ ಇದ್ದರೆ ಪರವಾಗಿಲ್ಲ. ಯಾವುದೇ ಒಂದು ಪಕ್ಷಕ್ಕೆ ಆಲ್ ಇಂಡಿಯಾ ಎಲೆಕ್ಷನ್ ಕಮಿಷನ್‌ನ ರೆಕಮೆಂಡೇಷನ್ ಇರುತ್ತದೆ.

MR. DEPUTY SPEAKER.— I have rejected. There is no point of order.

ಶ್ರೀ ಗುರುಪಾದಪ್ಪ (ನಾಗಮಾರಪಲ್ಲಿ) —ನನ್ನ ಕ್ರಿಯಾಲೋಪ ಏನೆಂದರೆ ಮಾನ್ಯ ದೇವೇಗೌಡರು ಜನತಾ ದಳದ ಬಗ್ಗೆ ಮಾತನಾಡುತ್ತಾ ರಾಜಕೀಯ ಭಾಷಣ ಮಾಡಬಾರದು ಎಂದು ಹೇಳಿದ್ದಾಗ್ಯೂ ಕೂಡಾ ಪದೇ ಪದೇ ಅದೇ ಮಾತನ್ನು ಸನ್ಮಾನ್ಯ ಉಪನಾಯಕರು ಹೇಳುತ್ತಿದ್ದಾರೆ. ಅವರು ರಾಜಕೀಯ ಭಾಷಣವನ್ನು ಮಾಡುತ್ತಿದ್ದಾರೆ. ಆದುದರಿಂದ ರಾಜಕೀಯ ಭಾಷಣ ಬೇಡ. ಅಲ್ಲಿ ಏನೇನು ದುರುಪಯೋಗವಾಗಿದೆ ಆದರ ಬಗ್ಗೆ ಮಾತನಾಡುತ್ತಿಲ್ಲ. ನೋಟೀಸ್ ಕೊಟ್ಟಿದ್ದೇ ಬೇರೆ, ಮಾತನಾಡುತ್ತಿರುವುದೇ ಬೇರೆ. ಆದುದರಿಂದ ಇಲ್ಲಿ ರಾಜಕೀಯ ಭಾಷಣವನ್ನು ಮಾಡುವುದು ಬೇಡ.

ಉಪಾಧ್ಯಕ್ಷರು.—ನೀವು ಪೂರ್ತಿಯಾಗಿ ವಿಷಯವನ್ನು ಓದಿಲ್ಲ. ದಯವಿಟ್ಟು ಕೂತ್ಕೊ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ಎಲೆಕ್ಷನ್ ಮ್ಯಾನಿಫೆಸ್ಟೋನಲ್ಲಿ ವಿಶಿಷ್ಟವಾದಂಥ ವಚನಗಳನ್ನು ಜನರಿಗೆ ಕೊಟ್ಟಿದ್ದರಿಂದ ಜನ ನಿಮಗೆ ಆರಿಸಿ ತಂದಿದ್ದಾರೆ, ಆ ರೀತಿ ಆದಾಗ ಅವನ್ನೇ ನೀವು ಮರೆತು ಇವತ್ತು ಒಂದು ಹೊಸ ಪಕ್ಷವನ್ನು ಕಟ್ಟಿ ಅದರಲ್ಲಿ ನೀವು ಮರ್ಜ್ ಆಗಿದ್ದೀರಿ. ನೀವು ಹೊಸ ಪ್ರಣಾಳಿಕೆಯನ್ನು ಘೋಷಣೆ ಮಾಡಿದ್ದೀರಿ. ಅಂದರೆ ನೀವು ಅದನು ಅಕ್ಸೆಫ್ಟ್ ಮಾಡಿಕೊಂಡ ಹಾಗೆ ಆಗಿದೆ. ಆದ್ದರಿಂದ ಜನರ ಮುಂದೆ ಈಗ ನೀವು ಹೋಗಬೇಕಾಗುತ್ತದೆ. ನಮಗೆ ಮೆಜಾರಿಟಿ ಇದೆ, ನೀವು ಏನು ಹೇಳಿದರೂ ಅದನ್ನು ಮಾಡಿಯೇ ಮಾಡುತ್ತೇವೆ ಎಂದು ಹೇಳುವುದು ಇದ್ದರೆ ಹೇಳಿ, ಆ ಮಾತು ಬೇರೆ. ವಿಶೇಷವಾಗಿ ಈ ಮಾತನ್ನು ಸದನದಲ್ಲಿ ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಸದನದ ಮುಖಂಡರು, ಲೀಡರ್ ಮತ್ತು ಮಾನ್ಯ ಮುಖ್ಯಮಂತ್ರಿಗಳು ಒಂದು ಸಮ್ಮೇಳದಲ್ಲಿ ಅಟೆಂಡ್ ಮಾಡಿ ಅಲ್ಲಿ ಅವರು ಪ್ರಿಸೈಡ್ ಮಾಡಿ ಮತ್ತೆ ಅಲ್ಲಿ ಬೇಕಾದಷ್ಟು ಹಲವಾರು ವಿಷಯಗಳನ್ನು ಮಾತನಾಡಿದ್ದಾರೆ. He is a part and parcel of that party and he said under any circumstances we are going to form and this is our party. ೧೧ನೇ ತಾರೀಖು ಅವತ್ತಿನದಿವಸ ಈ ಹೊಸ ಪಕ್ಷ ಉದಯವಾಗಿದೆ. ಅವರ ಪಕ್ಕದಲ್ಲಿ ಇನ್ನೊಂದು ಹಾಕಿದರೆ ಏನು ಆಗುತ್ತದೋ ಗೊತ್ತಿಲ್ಲ, ಈ ರೀತಿಯಾಗಿ ಪಾರ್ಟಿಸಿಪೇಟ್ ಮಾಡಿದ್ದು ಒಂದು ಕಡೆ.

ಎರಡನೆಯದಾಗಿ ಫಾರ್ಮರ್ ಚೀಫ್ ಮಿನಿಸ್ಟರ್ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಅವರು ಕೂಡಾ ಸ್ಪಷ್ಟವಾಗಿ ಹೇಳಿದ್ದಾರೆ, ಪಕ್ಷ ಉದಯವಾಗಿಯೇ ಆಗುತ್ತದೆ. ಇವತ್ತಿನಿಂದ ಕೆಲಸ ಪ್ರಾರಂಭ ವಾಗುತ್ತದೆ ಎಂದು ಅವರು ಘಂಟಾಘೋಷವಾಗಿ ಹೇಳಿದ್ದಾರೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಫಾರ್ಮರ್ ಚೀಫ್ ಮಿನಿಸ್ಟರ್, ಪ್ರೆಸೆಂಟ್ ಚೀಫ್ ಮಿನಿಸ್ಟರ್ ಇದರಲ್ಲಿ ಇನ್‌ವಾಲ್ವ್ ಆದಕಾರಣ ಮತ್ತು ಇದರಲ್ಲಿ ಅನೇಕ ಮಂತ್ರಿಮಂಡಲದಲ್ಲಿರತಕ್ಕಂಥ ಸದಸ್ಯರೂ ಕೂಡಾ ಭಾಗಿಯಾದ ಕಾರಣ ಇವತ್ತು ನಾವು ಇದನ್ನು ಕೇಳಬೇಕಾಗಿದೆಯೇ ಹೊರತಾಗಿ ಇನ್ನೇನೂ ಇಲ್ಲ. ಹಾಸನದಲ್ಲಿ ಮಾತನಾಡಿದರೆ ಕೇಳುತ್ತಾರೆಯೇ ? ಇಲ್ಲ. ರಾಜಕೀಯವಾಗಿ ಈ ಬದಲಾವಣೆಯ ಪರಿಣಾಮಗಳು ಏನಾಗುತ್ತದೆ ? ಈ ಬದಲಾವಣೆಗೋಸ್ಕರವಾಗಿ ನಾವು ಕೇಳುತ್ತಿದ್ದೇವೆಯೇ ಹೊರತಾಗಿ ಏನು ಕೇವಲ ಪಬ್ಲಿಕ್ ಪ್ಲಾಟ್‌ಫಾರಂನಲ್ಲಿ ಮಾತನಾಡಿದ್ದಾರೆ, ಅದನ್ನು ಇಲ್ಲಿ ತಂದು ಪ್ರಸ್ತಾಪ ಮಾಡಬೇಕು ಎನ್ನತಕ್ಕಂಥ ದೃಷ್ಟಿಯಿಂದ ಅಲ್ಲ. ಅದಲ್ಲದೇ ಇನ್ನೊಂದು ಮಾತನ್ನು ಕೇಳಿದ್ದೇವೆ. ಇದು ರಾಜಕೀಯ ಮೇಲೆ. ಅಡ್ಮಿನಿಸ್ಟ್ರೇಷನ್ ಮೇಲೆ ಯಾವ ರೀತಿಯಾಗಿ ಇದರ ಪರಿಣಾಮ ಆಗುತ್ತದೆ ಎನ್ನತಕ್ಕಂಥದ್ದು ಬಹಳ ಮುಖ್ಯ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಸುಮಾರು ೬೦ ಜನ ಶಾಸಕರು ಆ ಜನತಾದಳ ಮೀಟಿಂಗ್‌ಗೆ ಅಟೆಂಡ್ ಆಗಿಲ್ಲ ಎನ್ನುವ ವರ್ತಮಾನವೂ ಕೂಡಾ ನನಗೆ ಬಂದಿದೆ.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ಪಾರ್ಟಿ ಮೀಟಿಂಗ್‌ಗೆ ನೀವು ಯಾರಾದರೂ ಬಂದಿದ್ದಿರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಶಾಸಕರುಗಳು ಆ ಮೀಟಿಂಗ್‌ಗೆ ಹೋಗಿಲ್ಲ. ಇಷ್ಟಲ್ಲದೇ ಅವರು ಹಿಂದೆ ಸುಮಾರು ಆರೂವರೆ ವರ್ಷಗಳ ಕಾಲ ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ, ಜನತಾ ಪಕ್ಷ ಪುನಃ ಅಧಿಕಾರಕ್ಕೆ ಬರಬೇಕಾದರೆ ನಾನೇ ಕಾರಣ ಎಂದು ಹೇಳಿಕೊಳ್ಳುವಂಥ ವ್ಯಕ್ತಿ ಕೂಡಾ ಕೆಲವು ಮಾತನ್ನು ಹೇಳಿದ್ದಾರೆ. ಅದನ್ನು ಕೂಡಾ ತಮ್ಮ ಗಮನಕ್ಕೆ ತರುತ್ತೇನೆ. ಏಕೆಂದರೆ ಇದು ಇರ್ರೆಲೆವೆಂಟ್ ಎಂದು ಪದೇ ಪದೇ ಹೇಳುತ್ತೀರಲ್ಲಾ How it is relevant to the administration. I am telling you.

ಶ್ರೀ ಡಿ. ಟಿ. ಜಯಕುಮಾರ್.—ದುರುಪಯೋಗದ ಬಗ್ಗೆ ಹೇಳಿ.

೫-೦೦ ಪಿ.ಎಂ.

ಹಿಂದೆ ಕಾಂಗ್ರೆಸ್ ಸರ್ಕಾರ ಇದ್ದಾಗ ಚಿಕ್ಕಮಗಳೂರಿನ ಒಂದು ಬಸ್ ಅನ್ನು ಉಪಯೋಗ ಮಾಡಿಕೊಂಡಿದ್ದರು, ಅದರ ದುಡ್ಡು ಬರಲಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಹಿಂದೆ ಕಾಂಗ್ರೆಸ್‌ನಲ್ಲಿ ಇದ್ದಿರೇನು ?

ಶ್ರೀ ಡಿ, ಟಿ. ಜಯಕುಮಾರ್.—ನಾನು ಯಾವತ್ತೂ ಕಾಂಗ್ರೆಸ್‌ನಲ್ಲಿ ಇರಲಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನೀವು ಎಲ್ಲಿ ಇದ್ದಿರಿ, ಗೊತ್ತಿದೆ ಮಾನ್ಯ ಅಧ್ಯಕ್ಷರೇ, ಒಂದು ಮಾತನ್ನು ಹಿಂದಿನ ಚೀಫ್ ಮಿನಿಸ್ಟರ್ ಸ್ಪಷ್ಟವಾಗಿ ಹೇಳಿದ್ದಾರೆ.

> "Former Chief Minister speaking on the occasion, Mr. Hegde said under the present circumstance, there was nobody else who enjoyed as much popularity as Mr. Singh did.
>
> Mr. Hegde said the selection of Mr. Singh was only a formality. He reminded the gathering that Mr. Chandra Shekar had recommended the name of Mr. Singh to the post at the Janata Parliamentary Board meeting held on September 22nd. The resolution had also empowered Mr. Singh to constitute the national executive of the new

> party. Mr. Hegde said all the leaders attending the foundatious conference should pledge that under no ciroumstances would they allow the Janata Dal to break up''

ಆದರೆ ಈಗಾಗಲೇ ಇದು ಘಾರಂ ಆಗಿದೆ. ನಾವು ಜನತಾ ದಳನಲ್ಲಿ ಇದ್ದೇವೆ. ಜನತಾ ಪಾರ್ಟಿ ಎಂಬ ಪ್ರಶ್ನೆ ಇಲ್ಲ. ಯಾವ ಸಂದರ್ಭದಲ್ಲಿಯೂ ಇದನ್ನು ಬ್ರೇಕ್ ಮಾಡುವುದಕ್ಕೆ ಸಾಧ್ಯ ಇಲ್ಲ ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಅವರು ಈ ಮನೆಯ ಸದಸ್ಯರು, ಮುಖ್ಯಮಂತ್ರಿಗಳಾಗಿದ್ದವರು. ಮತ್ತು ಮುಖಂಡರು ಕೂಡ. ಇವೊತ್ತು ಅನೇಕ ಸಲ ನಮ್ಮ ಮುಖ್ಯಮಂತ್ರಿಗಳಾದ ಮಾನ್ಯ ಬೊಮ್ಮಾಯಿಯವರು ಹೇಳಿದ್ದಾರೆ. ಅವರು ನಮ್ಮ ನ್ಯಾಷನಲ್ ಲೀಡರ್ ಎಂದು ಪದೇ ಪದೇ ಹೇಳಿದ್ದಾರೆ. ನಾನು ಹೇಳುವುದು ಈ ಮಾತನ್ನು ಅವರು ಸ್ಪಷ್ಟಪಡಿಸಿದ ಮೇಲೆ ನಾವು ಜನತಾ ದಳ್ ಅಲ್ಲ, ಜನತಾ ಪಕ್ಷವನ್ನು ಇಟ್ಟುಕೊಂಡಿದ್ದೇವೆ ಎನ್ನುವ ಪ್ರಶ್ನೆ ಎಲ್ಲಿ ಬರುತ್ತದೆ ? ಇವೊತ್ತು ಇದರ ಪ್ರಭಾವ ಅಡ್ಮಿನಿಸ್ಟ್ರೇಷನ್‌ನ ಮೇಲೆ ಆಗಿದೆ. ನಿಮ್ಮಲ್ಲಿರತಕ್ಕ ಒಡಕು, ನಿಮ್ಮಲ್ಲಿರತಕ್ಕ ಭಿನ್ನಾಭಿಪ್ರಾಯ ಇವೊತ್ತು ಅಡ್ಮಿನಿಸ್ಟ್ರೇಷನ್ ಮೇಲೆ ಪ್ರಭಾವಿತವಾಗಿದೆ. ಯಾಕೆಂದರೆ ಕೆಲವು ಜನ ಅಟೆಂಡ್ ಮಾಡದೇ ಇರುವುದು. ಕೆಲವು ಜನ ಇದು ಒಡೆಯುವುದಿಲ್ಲ ಎನ್ನುವುದು, ಕೆಲವು ಜನ ಕಂಟಿನ್ಯೂ ಮಾಡುತ್ತೇವೆಂದು ಹೇಳುವುದು, ಇದನ್ನು ನೋಡಿದರೆ ಜನರಲ್ಲಿ ಕೂಡ ಏನು ಒಂದು ಅಭಿಪ್ರಾಯ ಬಂದಿದೆ ಎಂದರೆ ಸರ್ಕಾರ ಇರುತ್ತದೆಯೋ ಅಥವಾ ಹೋಗುತ್ತದೆಯೋ ಎಂದು. ಈ ಸರ್ಕಾರವನ್ನು ನಮ್ಮ ಮುಖಂಡರು ಜನತಾ ದಳ್ ಎಂದು ಖಾಯಂ ಮಾಡಿ ಅದರ ಹೆಸರಿನ ನೇತೃತ್ವದಲ್ಲಿ ನಡೆಸಿಕೊಂಡು ಹೋಗುತ್ತಾರೋ ಅಥವಾ ಜನತಾ ಪಾರ್ಟಿಯ ಹೆಸರಿನಲ್ಲಿ ಸರ್ಕಾರವನ್ನು ನಡೆಸಿಕೊಂಡು ಹೋಗುತ್ತಾರೋ ಎನ್ನುವ ವಾತಾವರಣ ಇಡೀ ರಾಜ್ಯದಲ್ಲಿ ಹರಡಿದೆ. ಇದನ್ನು ತಾವು ಮರೆಯಬಾರದು. ತಾವು ಹೇಳಬಹುದು, ನಿಮಗೆ ಇದರಿಂದ ಏನು ಆಗಿದೆ, ಅಡ್ಮಿನಿಸ್ಟ್ರೇಷನ್‌ನಲ್ಲಿ ಬಿಗಿ....

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಆಫೀಸರ್ಸ್ ಗ್ಯಾಲರಿಯಲ್ಲಿ ಕೌನ್ಸಿಲ್‌ನ ಒಬ್ಬರು ಸದಸ್ಯರು ಬಂದು ಕೂಡಬಹುದೇ, ಇದು ಸರಿಯಲ್ಲ.

ಉಪಾಧ್ಯಕ್ಷರು.—ಇವೊತ್ತು ಅವರಿಗೆ ಅಪ್ಲೈ ಆದುದು ನಾಳೆ ನಿಮ್ಮವರಿಗೂ ಅಪ್ಲೈ ಆಗುತ್ತದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಇವೊತ್ತು ಏನು ಆಗಿದೆ ಅಂದರೆ ದುರ್ದೈವಕ್ಕೆ ೩೦ ವರ್ಷಗಳಿಂದ, ೪೦ ವರ್ಷಗಳಿಂದ ಕಾಂಗ್ರೆಸ್ ಸರ್ಕಾರ ಪಾಪ ಮಾಡಿದ್ದು ಎಂಬ ಮಾತನ್ನು ಒಂದು ಕಡೆ ಹೇಳುತ್ತೀರಿ. ಇನ್ನೊಂದು ಕಡೆ ಕಾಂಗ್ರೆಸ್‌ನಿಂದ ಹೊರ ಬಂದಂತಹ ವ್ಯಕ್ತಿಗಳನ್ನು ನಿಮ್ಮ ಮುಖಂಡರು ಎಂದು ದೊಡ್ಡ ದೊಡ್ಡ ಹಾರ ಹಾಕಿ ಪೇಟ ಹಾಕಿ ಕೂಡಿಸಿ, ಮೆರೆಸುತ್ತೀರಿ. ಇನ್ನೂ ಒಂದು ಇಂತಹ ವಿಚಿತ್ರ ಎಂದು ನೋಡಿದರೆ ಯಾರನ್ನ ನೀವು ಸರಿಯಿಲ್ಲ, ಸರಿಯಿಲ್ಲ ಎಂದು ಬೈಯ್ದು ನಮ್ಮ ಜೊತೆಯಲ್ಲಿ ೨೦ ವರ್ಷ ೩೦ ವರ್ಷ ಮಂತ್ರಿಗಳಾಗಿದ್ದರು, ಫೈನಾನ್ಸ್ ಮಿನಿಸ್ಟರ್‌ಗಳು ಆಗಿದ್ದವರು, ಅವರು ಜೊತೆಯಲ್ಲಿ ಬಂದ ತಕ್ಷಣ ಅವರು ಪವಿತ್ರರಾದರಾ ?

ಶ್ರೀ ಬಿ. ಟಿ. ಜಯಕುಮಾರ್.—ಒಳ್ಳೆಯವರು ಕೆಟ್ಟವರು ಎರಡೂ ಪಕ್ಷದಲ್ಲಿ ಇರುತ್ತಾರೆ. ನಿಮ್ಮ ಪಕ್ಷದಲ್ಲಿದ್ದ ಒಳ್ಳೆಯವರು ನಮ್ಮ ಪಕ್ಷಕ್ಕೆ ಬಂದಿದ್ದಾರೆ. ಅಷ್ಟೇ...

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಮ್ಮ ಪಕ್ಷದಲ್ಲಿದ್ದವರನ್ನು ಕರೆದುಕೊಂಡು ಬಂದು ಯೋಗ್ಯರು, ಒಳ್ಳೆಯವರು ಎಂದು...

(ಗೊಂದಲ)

ಶ್ರೀ ಹೆಚ್. ಡಿ. ದೇವೇಗೌಡ.—ಇಂದಿರಾಗಾಂಧಿಯವರ ವಿರುದ್ಧ ಸ್ಪರ್ಧಿಸಿದವರನ್ನು ನೀವು ಕರೆದುಕೊಂಡು ಹೋಗಿ ಮಂತ್ರಿಗಳಾಗಿ ಮಾಡಬಹುದು, ಅದು ಮಾತ್ರ ನಿಮಗೆ ಸಂತೋಷ ವಾಗುತ್ತದೆ. ಯಾಕೆ ಇದನ್ನು ಹೇಳುತ್ತೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾವು ಮಾಡಿದ್ದು ಏನು ಅಂದರೆ even worst enemy can be tolerated in the democracy. ನಮ್ಮದು ಆ ಪಾಲಿಸಿ, ನಿಮ್ಮದು ಹಾಗೆ ಅಲ್ಲ. ನೀವು ನಿಮ್ಮಲ್ಲಿ ಯಾರೂ ಲೀಡರ್ ಇಲ್ಲ ಎಂದು ನೀವೇ ಲೀಡರ್ ಆಗಿ ಎಂದು ಅವರನ್ನು

ಕರೆದುಕೊಂಡು ಬಂದಿದ್ದೀರಿ. ಧೈರ್ಯ ಇದ್ದಿದ್ದರೆ ನಿಮ್ಮಲ್ಲಿ ಯಾರನ್ನಾದರೂ ಲೀಡರ್ ಆಗಿ ಮಾಡ ಬಹುದಿತ್ತು.

ಶ್ರೀ ಬಿ. ಧರ್ಮಪ್ಪ.— ನಿಮ್ಮಿಂದ ವಿಭೀಷಣ ಹೊರಗೆ ಬಂದಿದ್ದಾರೆ.

ಉಪಾಧ್ಯಕ್ಷರು.— ಮಾನ್ಯ ಧರ್ಮಪ್ಪನವರೇ ಕೂಡಿ.

ಶ್ರೀ ಡಿ. ಟಿ. ಜಯಕುಮಾರ್.— ಮಾನ್ಯ ವಿ. ಪಿ. ಸಿಂಗ್ ಎಂದರೆ ಯಾಕೆ ಹೆದರಿಕೆ ಇವರಿಗೆ ? ಇವರ ಬೇಳೆ ಕಾಳುಗಳು ಎಲ್ಲಾ ಈಚೆಗೆ ಬರುತ್ತದೆ ಎಂದು ...

ಶ್ರೀ ಆರ್. ಧರ್ಮಸಿಂಗ್.— ಮಾನ್ಯ ವಿ. ಪಿ. ಸಿಂಗ್ ಅವರು ಎಮರ್ಜೆನ್ಸಿಯಲ್ಲಿ ಇಂದಿರಾ ಗಾಂಧಿ ಅವರಿಗೆ ಸಪೋರ್ಟ್ ಮಾಡಿದರು. ತುರ್ತು ಪರಿಸ್ಥಿತಿಗೆ ಸಪೋರ್ಟ್ ಮಾಡಿದವರನ್ನು ನಾವು ಮುಖಂಡರು ಮಾಡುವುದಿಲ್ಲ ಎಂದು ಚರ್ಚೆ ಆಯಿತು. ನಿಮ್ಮ ಮಾನ್ಯ ಚಂದ್ರಶೇಖರ್ ಕೂಡ ಅಪೋಸ್ ಮಾಡಿದ್ದರು. ಮತ್ತೆ ಅವರನ್ನೇ ಈಗ ಮುಖಂಡರು ಮಾಡಿದ್ದೀರಿ.

SRI M. MALLIKARJUNA KHARGE.— We are not worried. But we pity about your condition. ಅದನ್ನು ಬಿಟ್ಟು ಮತ್ತೆ ಏನೂ ಇಲ್ಲ.

ಶ್ರೀ ಆರ್. ಧರ್ಮಸಿಂಗ್.— ಅಲ್ಲಿಗೆ ಮಾನ್ಯ ದೇವೇಗೌಡರು ಸಹ ಹೋಗುತ್ತಾರೋ ಅಥವಾ ಇಲ್ಲವೋ ಎಂಬ ಬಗ್ಗೆ ಅನುಮಾನವಿತ್ತು.

ಶ್ರೀ ಎಂ. ವೀರಪ್ಪ ಮೊಯಿಲಿ.— ಮಾನ್ಯ ದೇವೇಗೌಡರು ಇವೊತ್ತಿಗೂ ಸಹ ಮೂರು ಪಕ್ಷಗಳ ವಿಲೀನವನ್ನು ಒಪ್ಪಿಲ್ಲ.

ಶ್ರೀ ಬಿ. ಆರ್. ನೀಲಕಂಠಪ್ಪ.— ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ ಇದೆ. ಏನೆಂದರೆ, ನಾವು ಮಾನ್ಯ ವಿ. ಪಿ. ಸಿಂಗ್ ಅವರನ್ನು ಅಧ್ಯಕ್ಷರನ್ನಾಗಿ ಮಾಡಿರುವ ಬಗ್ಗೆ ಅವರು ಹೇಳಿದ್ದಾರೆ. ಆದರೆ ಅವರ ತರಹ ನಾವು ಯಾರನ್ನೋ ಕರೆದುಕೊಂಡು ಬಂದು ಅಧ್ಯಕ್ಷರನ್ನಾಗಿ ಮಾಡಿಲ್ಲ. ನಾವು ಪ್ರಜಾಪ್ರಭುತ್ವ ವ್ಯವಸ್ಥೆಯ ಮೂಲಕವೇ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೇವೆ.

ಉಪಾಧ್ಯಕ್ಷರು.— ಇದರಲ್ಲಿ ಯಾವ ಕ್ರಿಯಾಲೋಪವೂ ಇಲ್ಲ. ಮಾನ್ಯ ಖರ್ಗೆಯವರು ತಮ್ಮ ಭಾಷಣವನ್ನು ಮುಂದುವರೆಸಬಹುದು.

ಶ್ರೀ ಆರ್. ಧರ್ಮಸಿಂಗ್.— ಇದರ ಪರಿಣಾಮವೇನಾಗುತ್ತದೆಂಬುದು ಇನ್ನು ಒಂದು ತಿಂಗಳಲ್ಲಿಯೇ ತಮಗೆ ತಿಳಿಯುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಈಗ ಒಂದು ಹೊಸ ಪಕ್ಷವನ್ನು ಸ್ಥಾಪನೆ ಮಾಡಿದ್ದಾರೆ. ಅದು ಬ್ರೇಕ್ ಆಗುವುದಿಲ್ಲವೆಂದು ಸ್ಪಷ್ಟವಾದ ಸೂಚನೆಯನ್ನು ಕೊಟ್ಟಿದ್ದಾರೆ. ಈ ಹೊಸ ಪಕ್ಷ ಕಟ್ಟಲು ಮುಖ್ಯ ಮಂತ್ರಿಗಳು ಸಹ ಭಾಗಿಯಾಗಿದ್ದಾರೆ. ಈ ಕಾರಣದಿಂದ ಇವರು ಜನರ ಬಳಿ ಹೋಗಿ ಹೊಸದಾಗಿ ಮ್ಯಾಂಡೇಟ್ ಪಡೆಯುವ ಅವಶ್ಯಕತೆ ಇದೆ. ಹೊಸ ಸ್ಲೋಗನ್ ಮತ್ತು ಹೊಸ ಚುನಾವಣಾ ಪ್ರಣಾಳಿಕೆ ಮೂಲಕ ತಾವು ಹೊಸದಾಗಿ ಜನರಿಂದ ಚುನಾಯಿತರಾಗಿ ಬರಬೇಕು. ಮಾನ್ಯ ಮುಖ್ಯ ಮಂತ್ರಿಗಳು ಶ್ರೀ ಕೃಷ್ಣನ ಬಗ್ಗೆ ವ್ಯಾಖ್ಯಾನ ಮಾಡಿದ್ದಾರೆ. ಆದರೆ ನಿಜವಾದ ಕೃಷ್ಣ ಜೈಲಿನಲ್ಲಿ ಹುಟ್ಟಿದ್ದರೆ, ಇವರ ಕೃಷ್ಣ ಮಾತ್ರ ಬೆಂಗಳೂರಿನ ಅರಮನೆಯಲ್ಲಿ ಹುಟ್ಟಿದ್ದಾನೆ. ಇವರು ಹೊಸ ಪಕ್ಷ ಕಟ್ಟಿರುವುದರಿಂದ ಅಧಿಕಾರದಲ್ಲಿ ಮುಂದುವರಿಯುವುದು ಕಷ್ಟವಾಗುತ್ತದೆ. ಇದನ್ನು ಸಮರ್ಥನೆ ಮಾಡಿಕೊಳ್ಳಲು ತಾವು ಏನಾದರೂ ಹೇಳಿಕೊಳ್ಳಿ. ಆದರೆ ನೀವು ಅಧಿಕಾರಕ್ಕೆ ಜನತಾ ಪಕ್ಷದ ಚುನಾವಣಾ ಪ್ರಣಾಳಿಕೆಯ ಆಧಾರದ ಮೇಲೆ ಬಂದಿದ್ದೀರಿ. ಈಗ ನೀವು ಯಾವ ಪಕ್ಷಕ್ಕೆ ಸೇರಿದ್ದೀರಿ. ಈ ಹೊಸ ಪಕ್ಷದ ಧ್ಯೇಯ ಧೋರಣೆಯೇ ಬೇರೆ ಆಗಿದೆ. ಆದ್ದರಿಂದ ನೀವು ಈಗ ಜನತಾಪಕ್ಷದ ಹೆಸರಿನ ಮೇಲೆ ಸರ್ಕಾರ ನಡೆಸುವುದು ಅಷ್ಟು ಸಮಂಜಸವಲ್ಲ, ಅದಕ್ಕಾಗಿ ನೀವು ಜನತಾದಳದ ಹೆಸರಿನ ಮೇಲೆ ಮತ್ತೆ ಜನರ ಬೆಂಬಲ ಪಡೆಯಬೇಕಾಗಿದೆ. ಚುನಾವಣೆಯಲ್ಲಿ ನೀವೇ ಗೆದ್ದು ಬೇಕಾದರೆ ಪುನಃ ಅಧಿಕಾರಕ್ಕೆ ಬನ್ನಿ. ಅದಕ್ಕೆ ನಮ್ಮ ಅಬ್ಜೆಕ್ಷನ್ ಏನೂ ಇಲ್ಲ. ಆಂಟಿ ಡಿಫೆಕ್ಷನ್ ಬಿಲ್ ಜಾರಿಯಲ್ಲಿರುವಾಗ ನೀವು ಹೀಗೆ ಪದೇ ಪದೇ ಪಾರ್ಟಿಯ ಹೆಸರುಗಳನ್ನು ಬದಲಾವಣೆ ಮಾಡು

ವುದು ಸರಿಯಲ್ಲ. ಈ ವಿಚಾರದಲ್ಲಿ ಈಗಾಗಲೇ ಮೇಲ್ಮನೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಅದೇ ರೀತಿಯ ಉತ್ತರವನ್ನು ಇಲ್ಲಿಯೂ ಸಹ ಕೊಡಬಹುದು. ಈ ಸರ್ಕಾರ ಇರುವವರೆಗೆ ನಾವು ಜನತಾ ಪಕ್ಷದಲ್ಲಿರುತ್ತೇವೆ,ನಾವು ಇನ್ನೂ ಜನತಾ ಪಕ್ಷ ಬಿಟ್ಟು ಬೇರೆ ಹೊಸ ಪಕ್ಷಕ್ಕೆ ಹೋಗಿಲ್ಲ ಎಂದು ಅವರು ಅಲ್ಲಿ ಹೇಳಿದ್ದಾರೆ,

ಶ್ರೀ ಎಸ್. ಆರ್. ಬೊಮ್ಮಾಯಿ.— ನಾನು ಏನು ಹೇಳಿದ್ದೇನೆ. ಅದನ್ನು ಮಾತ್ರ ಹೇಳಿ, ಅದನ್ನು ಬಿಟ್ಟು ನಿಮ್ಮ ಬಾಯಲ್ಲಿ ಬೇರೆ ಏನೋ ಹೇಳಬೇಡಿ. ನಿಮ್ಮ ಅಭಿಪ್ರಾಯ ಬೇಕಾದರೆ ಹೇಳಿ. ಆದರೆ ನಾನು ಏನು ಹೇಳಿದ್ದೇನೆ ಎಂಬುದನ್ನು ಮಾತ್ರ ಸರಿಯಾಗಿ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಆ ಮನೆಯಲ್ಲಿ ಹೇಳಿದ್ದನ್ನೇ ಹೇಳಬಹುದು ಎಂದು ನಾನು ಹೇಳಿದೆ. ನೀವು ಇವೊತ್ತು ಜನರಿಂದ ಹೊಸದಾಗಿ ಮ್ಯಾಂಡೇಟ್ ಪಡೆಯಬೇಕೇ ಹೊರತು ಕೇವಲ ಜನತಾ ದಳದ ಹೆಸರಿನಲ್ಲಿ ಆಡಳಿತ ನಡೆಸಿಕೊಂಡು ಹೋಗುವುದು ಸರಿಯಲ್ಲವೆಂದು ಹೇಳುತ್ತೇನೆ. ಜನತಾ ದಳದ ಹೆಸರಿನಲ್ಲಿ ಕಾನ್‌ಫರೆನ್ಸ್ ನಡೆಸಲು ಎಲ್ಲಾ ಕಡೆಯಿಂದ ಜನರನ್ನು ಕರೆಸಲು ಕೆ. ಎಸ್. ಆರ್. ಟಿ. ಸಿ. ಬಸ್‌ಗಳನ್ನು ಇವರು ಬಳಸಿಕೊಂಡಿದ್ದಾರೆ. ಅದಕ್ಕೆ ದುಡ್ಡು ಕೊಟ್ಟಿದ್ದಾರೋ ಅಥವಾ ಇಲ್ಲವೋ ಗೊತ್ತಿಲ್ಲ. ಬಸ್‌ಗಳನ್ನು ಒದಗಿಸಬೇಕೆಂದು ಆರ್. ಟಿ. ಓ. ನವರಿಗೆ ಆದೇಶ ನೀಡಿದ್ದಾರೆ. ಅನೇಕ ಕಡೆಗಳಲ್ಲಿ ಜನರು ನಾವು ಬೆಂಗಳೂರಿಗೆ ಹೋಗಬೇಕು, ಸ್ಪೆಷಲ್ ಬಸ್‌ಗಳನ್ನು ಓಡಿಸಬೇಕೆಂದು ಕೇಳಿದ್ದಾರೆ. ಯಾದ್‌ಗಿರ್‌ನಿಂದ ಎರಡು ಬಸ್‌ಗಳಲ್ಲಿ ಜನರು ಬಂದಿದ್ದರು. ಅಲ್ಲಿನ ಕಂಟ್ರೋಲರ್ ಅವರು ರಸ್ತೆಗಳೆಲ್ಲಾ ಹಾಳಾಗಿರುವ ಕಾರಣ ಬಸ್‌ಗಳನ್ನು ಬೆಂಗಳೂರಿಗೆ ಓಡಿಸುವುದಕ್ಕೆ ಆಗುವುದಿಲ್ಲ ವೆಂದು ಹೇಳಿದ್ದಾರೆ. ಆದರೂ ಬೆಂಗಳೂರಿಗೆ ಹೊಸ ಬಸ್ ನಮಗೆ ಬೇಕು ಎಂದು ಹಠ ಹಿಡಿದು ತೆಗೆದುಕೊಂಡು ಬಂದಂಥ ಅನೇಕ ಉದಾಹರಣೆಗಳಿವೆ. ಆರ್.ಟಿ.ಓ.ಗೆ ಫೋನ್‌ಮಾಡಿ ಒತ್ತಡ ತಂದು ಅನೇಕ ಬಸ್‌ಗಳನ್ನು ನೇರವಾಗಿ ಬೆಂಗಳೂರಿಗೆ ತರತಕ್ಕದ್ದು ನಡೆದಿದೆ. ಮತ್ತು ಜನರಿಗೆ ತೊಂದರೆ ಮಾಡತಕ್ಕ ರೀತಿಯಲ್ಲಿ ಸರ್ಕಾರ ಕೂಡ ಇವತ್ತು ವರ್ತನೆ ಮಾಡಿದೆ.

ಎರಡನೆಯದಾಗಿ, ಇವತ್ತು ಫ್ಲಡ್‌ನಿಂದ ಅನೇಕ ಕಡೆ ಡ್ಯಾಮೇಜಾಗಿದೆ, ಎಲ್ಲೂ ರೋಡ್ಸ್ ಸರಿಯಿಲ್ಲ. ಆದರೆ ಅವರಿಗೆ ಎಲ್ಲೆಲ್ಲಿ ಅನುಕೂಲ ಬೇಕೋ ಅಲ್ಲಿ, ಪ್ಯಾಲೆಸ್ ಮತ್ತಿತರ ಕಡೆ ಮೈನ್ ಗೆಸ್ಟ್ಸ್ ಎಲ್ಲಿ ಬರುತ್ತಾರೋ ಅಲ್ಲೆಲ್ಲಾ ಸುಣ್ಣ ಬಣ್ಣ ಹಚ್ಚಿ, ಹೊರಗಿನವರಿಗೆ ತೋರಿಸುವುದಕ್ಕೆ ವ್ಯವಸ್ಥಿತವಾಗಿ ಮಾಡಿದ್ದಾರೆ. ಫ್ಲಡ್ ಬಂದಿರತಕ್ಕಂಥ ಸಮಯದಲ್ಲಿ ತೊಂದರೆಗೆ ಈಡಾದವರಿಗೆ ಕಾಂಪನ್ಸೇಷನ್ ಕೊಡಲಿಕ್ಕೆ ಹಣ ಇಲ್ಲ ಎಂದು ಹೇಳುತ್ತಾರೆ. ಮತ್ತು ಡ್ಯಾಮೇಜಾಗಿರುವ ರೋಡು ಗಳನ್ನು ರಿಪೇರಿ ಮಾಡುವುದಕ್ಕೆ ದುಡ್ಡಿಲ್ಲ ಎಂದು ಹೇಳುತ್ತಾರೆ, ಕ್ರಾಪ್ ಡ್ಯಾಮೇಜಾಗಿರುವುದಕ್ಕೆ ಕಾಂಪನ್ಸೇಷನ್ ಕೊಡುವುದಕ್ಕೆ ಹಣ ಇಲ್ಲ ಎಂದು ಹೇಳುತ್ತಾರೆ. ಆದರೆ ಈ ಕೆಲಸಗಳಿಗೆ ಡೈರೆಕ್ಟ್ಲೀ ಇನ್‌ಡೈರೆಕ್ಟ್ಲೀ......

ಶ್ರೀ ಡಿ. ಟಿ. ಜಯಕುಮಾರ್.— ಪಾಯಿಂಟ್ ಆಫ್ ಆರ್ಡರ್, ಇದಕ್ಕೆ ಹಣ ದುರುಪಯೋಗ ವಾಗಿದೆ ಎಂದು ಹೇಳುತ್ತಾ ಇದ್ದಾರೆ. ಈ ಮೇಳಕ್ಕೆ ಪಕ್ಷದ ದುಡ್ಡನ್ನು ಖರ್ಚು ಮಾಡಿದ್ದೇ ಹೊರತು ಸರ್ಕಾರದ ದುಡ್ಡನ್ನು ಖರ್ಚು ಮಾಡಿಲ್ಲ.

(ಗೊಂದಲ)

ಉಪಾಧ್ಯಕ್ಷರು.— ದಯವಿಟ್ಟು ಕೂಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಧಿಕಾರಿಗಳನ್ನು ಒತ್ತಾಯಮಾಡಿ ನೀವು ಹೀಗೆ ಮಾಡಲೇ ಬೇಕು, ಇಷ್ಟು ಕಳಿಸಲೇಬೇಕು ಎಂದು ಅನೇಕ ಕಡೆ ಮಾಡಿದ್ದಾರೆ. ಅನೇಕರು ಕಮಿಷನರಿಗೆ ಡೈರೆಕ್ಟಾಗಿ ಫೋನ್ ಮಾಡಿ ತರಿಸಿಕೊಂಡಿದ್ದಾರೆ. ಆದ್ದರಿಂದ ದುರುಪಯೋಗವಾಗಿದೆ ಎಂದು ಹೇಳುವುದು. ಹಾಗಾದರೆ ಇಷ್ಟು ಬಸ್‌ಗಳನ್ನು ತರಿಸುವುದಕ್ಕೆ ಪಾರ್ಟಿ ಹತ್ತಿರ ಕೋಟಿಗಟ್ಟಲೆ ದುಡ್ಡು ಇಟ್ಟುಕೊಂಡಿದ್ದೀರಾ ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇವತ್ತು ಜನ ತೊಂದರೆಯಲ್ಲಿದ್ದಾರೆ, ಫ್ಲಡ್ ಬಂದು ತೊಂದರೆಯಾಗಿದೆ, ರೋಡ್ಸನ್ನು ಸರಿ ಮಾಡುವುದಕ್ಕೆ ಹಣ ಇಲ್ಲ. ಆದರೆ ಇಲ್ಲಿ ಸರ್ಕಾರಿ ಮಿಷನರಿಯನ್ನು ದುರುಪಯೋಗ ಮಾಡಿಕೊಂಡು, ಅಧಿಕಾರಿಗಳನ್ನು ದುರುಪಯೋಗ ಮಾಡಿಕೊಂಡು ನಿಮ್ಮ ಸಮ್ಮೇಳನ ಯಶಸ್ವಿ ಮಾಡಿಕೊಳ್ಳುವುದಕ್ಕೆ ಮಾಡಿದ್ದರೆ ನಿಜವಾಗಲೂ ಇದು......

(ಗೊಂದಲ)

ಶ್ರೀ. ಎಂ. ಮಲ್ಲಿಕಾರ್ಜುನ ಖರ್ಗೆ.— ಬಿಹಾರದಲ್ಲಿ ಹೋಗಿ ಮಾಡಿ, ಇಲ್ಲಿ ಏಕೆ ಮಾಡಿದ್ದು ? ಯಾರ ದುಡ್ಡು ಅದು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಎರಡನೆಯ ಒತ್ತಡ ಏನೆಂದರೆ, ಎಲ್ಲೆಲ್ಲಿ ಮಂಡಲ ಪಂಚಾಯಿತಿ ಇದೆ ಅಲ್ಲಿ ಅವರಿಗೆ ಒತ್ತಾಯಪೂರ್ವಕವಾಗಿ ನೀವೆಲ್ಲಾ ಬೆಂಗಳೂರು ಕಾನ್‌ಫರೆನ್ಸ್‌ಗೆ ಅಟೆಂಡ್ ಮಾಡಲೇಬೇಕು ಎಂದು ಹೇಳಿದ್ದಾರೆ.

ಶ್ರೀ ಡಿ. ಟಿ. ಜಯಕುಮಾರ್.— ಇವರಿಗೆ ಏಕೆ ?

(ಗೊಂದಲ)

ಉಪಾಧ್ಯಕ್ಷರು.— ಅದಕ್ಕೆ ಉತ್ತರ ಕೊಡುವುದಕ್ಕೆ ನಿಯಮಾವಳಿ ಇದೆ, ನೀವು ಕೂಡಿ.

ಶ್ರೀ ಡಿ. ಟಿ. ಜಯಕುಮಾರ್,— ನಾವು ಕರೆದಿರುವುದು ನಮ್ಮ ಪಾರ್ಟಿಯವರನ್ನು, ನಮ್ಮ ಪಾರ್ಟಿಯವರನ್ನು ಕರೆಯುವ ಹಕ್ಕು ನಮಗೆ ಇದೆ. ನಿಮ್ಮ ಪಾರ್ಟಿಯವರನ್ನು ಕರೆದಿಲ್ಲವಲ್ಲಾ.

ಉಪಾಧ್ಯಕ್ಷರು.— ಉತ್ತರ ಹೇಳುವುದಕ್ಕೆ ನಿಯಮಾವಳಿ ಇದೆ, ನೀವು ಕೂಡಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಅಧ್ಯಕ್ಷರೆ, ಮುಖ್ಯ ಮಂತ್ರಿಗಳಿಂದ ಅವರಿಗೆ ಪವರ್ ಆಫ್ ಅಟಾರ್ನಿ ಬರೆಸಿಕೊಟ್ಟುಬಿಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾನು ಹೇಳಿದ್ದು ಏನೆಂದರೆ, ಅನೇಕ ಅಧಿಕಾರಿಗಳನ್ನು ಇದಕ್ಕೆ ಉಪಯೋಗ ಮಾಡಿಕೊಂಡಿರಿ ಎಂದು. ನೀವು ಒತ್ತಾಯಮಾಡಿ, ಪ್ರೈವೇಟ್ ಏಜೆನ್ಸಿ ಹಿಡಿದು ಅನೇಕ ಕಡೆ ಬಸ್‌ಗಳನ್ನು......

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಕೆಲವು ಕಡೆ ಏನೇ ಕೆಲಸ ವಿದ್ದರೂ ಬೆಂಗಳೂರು ಕಾನ್‌ಫರೆನ್ಸ್‌ಗೆ ಹೋಗಿ ಅಟೆಂಡ್‌ಮಾಡಿ ಎಂದು ಮಂಡಲಪಂಚಾಯಿತಿ ಪ್ರಧಾನರಿಗೆ ಮೆಂಬರ್ಸ್ ಡೆಲಿಗೇಟಾಗಿ ಹೋಗಿ ಎಂದು ಕರೆ ಕಳಿಸಿದ್ದರು. ಇದರಲ್ಲಿ ೬ ಸಾವಿರದಲ್ಲಿ ೩ ಸಾವಿರ ಕೂಡ ಬಂದಿಲ್ಲ.

ಶ್ರೀ ಸಿ. ಎಂ. ಉದಾಸಿ.— ಮಾನ್ಯ ಖರ್ಗೆಯವರೇ, ನಮ್ಮ ಪಕ್ಷದವರು ಹಣ ಕೊಟ್ಟು ಬಂದಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದಕ್ಕಾಗಿ ಇವರು,ಹೊಸ ಮ್ಯಾನಿಫೆಸ್ಟೋ ಇಟ್ಟುಕೊಂಡು ಹೊಸ ಪಕ್ಷದ ಮೂಲಕ ಗೆದ್ದು ಬಂದು ಅಧಿಕಾರ ನಡೆಸಲಿ. ಸರ್ಕಾರದ ಯಂತ್ರವನ್ನು ಉಪಯೋಗಿಸಿ ಕೊಂಡು ದುರುಪಯೋಗ ಮಾಡಿರುವುದಕ್ಕೆ ನ್ಯಾಯಾಂಗ ತನಿಖೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.— ಸನ್ಮಾನ್ಯ ಅಧ್ಯಕ್ಷರೆ, ಈಗ ಮೇಲ್ನೋಟಕ್ಕೆ ಯಾವ ವಿಚಾರ ವನ್ನು ನಿಲುವಳಿ ಸೂಚನೆಯೆಂದು ಕೊಟ್ಟಿದ್ದೇವೆ, ಅದು ಒಂದು ರಾಜಕೀಯ ಪಕ್ಷ ಸಹಜವಾಗಿ ತನ್ನ ಸಮಾವೇಶವನ್ನು ಮಾಡಿದೆ, ಅದರ ವಿಚಾರವನ್ನು ನಾವು ಪ್ರಸ್ತಾಪ ಮಾಡುತ್ತೇವೆಂದು ಅನುಮಾನ ಬರಬಹುದು. ಈಗ ಈ ವಿಚಾರ ಅದಲ್ಲ. ಇದು ಸ್ವಲ್ಪ ಗಹನವಾದಂಥ ವಿಚಾರ. ಏಕೆಂದರೆ ಇವತ್ತು ಈ ವಿಚಾರದಲ್ಲಿ ಹೆಚಿನ ಗಮನವನ್ನು ವಿರೋಧ ಪಕ್ಷದವರು ತೆಗೆದುಕೊಳ್ಳಬೇಕೆಂದು ಅಲ್ಲ. ನಮಗಿಂತಲೂ ಹೆಚ್ಚಿಗೆ ನಿಮಗೆ ಜವಾಬ್ದಾರಿ ಇದೆ. ಇದರ ಬಗ್ಗೆ ತಾವು ಆಲೋಚನೆ ಮಾಡಬೇಕು.

ಸಾರ್ವಜನಿಕರಲ್ಲಿ ೧೧ನೇ ತಾರೀಖು ಸಮಾವೇಶ ಏನು ನಡೆಯಿತು, ಅದರ ಬಗ್ಗೆ ಸಾಕಷ್ಟು ಸಂಶಯ, ಅದರ ಬಗ್ಗೆ ಸಾಕಷ್ಟು ಅಪವಾದ ಸರ್ಕಾರದ ಮೇಲೆ ಬಂದಿದೆ. ನೀವು ಹೇಳಬಹುದು. ಚುನಾವಣೆ ಬಂದಾಗ ಜನ ನೋಡಿಕೊಳ್ಳುತ್ತಾರೆ, ನಿಮಗೆ ಏತಕ್ಕೆ ಉಸ್ತುವಾರಿ ಎಂದು ಹೇಳಬಹುದು. ರಾಜಕೀಯವಾಗಿ ಹೇಳಬಹುದು. ಆದರೆ ಸಾರ್ವಜನಿಕರ ದೃಷ್ಟಿಯಲ್ಲಿ ಯಾವ ಪಕ್ಷದ ಸರ್ಕಾರ ಇಲ್ಲಿ ಆಡಳಿತ ನಡೆಸುತ್ತಿದೆ, ಅದರ ನಡೆವಳಿಕೆ ಏನಿದೆ, ಅದು ಸರ್ಕಾರದೊಳಗೆ ಇರಬಹುದು, ಹೊರಗೆ ಇರಬಹುದು for your conduct, you are accountable to the people of Karnataka. ಜನಗಳಿಗೆ ಜವಾಬ್ದಾರರಾಗಿದ್ದೀರಿ. ಜನಗಳ ಮನಸ್ಸಿನಲ್ಲಿರತಕ್ಕ ಸಂಶಯವನ್ನು ಹೋಗಲಾಡಿಸುವಂತಹ ಅವಕಾಶವನ್ನು ನಾವು ಇವತ್ತು ನಿಲುವಳಿ ಸೂಚನೆ ಮೂಲಕ ತಂದು ನಿಮಗೆ ಅನುಕೂಲ ಮಾಡಿ ಕೊಟ್ಟಿದ್ದೇವೆ. ಇದರ ಬಗ್ಗೆ ಚರ್ಚೆ ಮಾಡುವಾಗ, ಸಂಘರ್ಷಣೆ ಏತಕ್ಕೆ ಮಾಡುತ್ತೀರೋ ನಮಗೆ ಅರ್ಥವಾಗುವುದಿಲ್ಲ. ನಮ್ಮ ವಿರೋಧ ಪಕ್ಷದ ನಾಯಕರಾದವರು ಮತ್ತು ಉಪ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ವಿಷಯ ಎತ್ತಿದ್ದಾಗ ನೀವು ಸ್ವಾಗತ ಮಾಡಬೇಕಿತ್ತು. ಇದರಲ್ಲಿ ಏನು ತಪ್ಪಿದೆ ? ಯಾವ ಒಂದು ಪಕ್ಷ ಯಾವುದೇ ಸಂದರ್ಭದಲ್ಲಿ ಕೆಲಸ ಮಾಡಲಿ, ಅದರ ಒಟ್ಟು ಮೊತ್ತದ ಬಗ್ಗೆ ಜನಾಭಿಪ್ರಾಯ ಏನು ಎಂದು, ಎಲ್ಲರೂ ಕೂಡ ಕೊನೆಯವರೆಗೆ ಕಾದು ನಿಂತಿರುವಾಗ, ಇದರಿಂದ ಪಕ್ಷಕ್ಕೆ ನಷ್ಟವಾಗುತ್ತದೆಂದು ಪ್ರಜಾಪ್ರಭುತ್ವವಾದಿಗಳು ಯಾರೂ ಹೇಳುವುದಿಲ್ಲ. When there is a fall of any political party in a progressive democracy in a country like ours, this is a loss to everyone. It is a loss to Congress. It is a loss to Janatha. It is a loss to B. J. P. ಒಂದು ಪಕ್ಷ ಪ್ರಜಾಪ್ರಭುತ್ವದಲ್ಲಿ ನಾಶ ಆಗಬೇಕೆಂದು ಯಾರು ನೆನೆಸುತ್ತಾರೆ ಅವರಷ್ಟು ಅನ್‌ಡೆಮಾಕ್ರೆಟಿಕ್ ಮತ್ತೊಬ್ಬರು ಇಲ್ಲ ಎಂದು ನನ್ನ ಒಂದು ಅನಿಸಿಕೆ. We do not want to be undemocratic. We do not want any other party to extinguish or perish. ಇನ್ನೊಂದು ಪಕ್ಷ ನಾಶವಾಗಬೇಕು, ಇನ್ನೊಂದು ಪಕ್ಷದ ನಾಯಕ ನಾಶವಾಗಬೇಕು, ಪತನವಾಗಬೇಕು ಎಂದು ಹೇಳತಕ್ಕವರದ್ದು ಪ್ರಜಾಪ್ರಭುತ್ವದ ವಿರೋಧಿ ನೀತಿ ಅವರದು ಎಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇವೊತ್ತು ಮುಖ್ಯ ಮಂತ್ರಿಯವರು ಇದ್ದೀರಿ, ಅನೇಕ ಜನ ಸಚಿವರು ಇದ್ದೀರಿ. ಇವೊತ್ತು ತಮಗೆ ಸಂಶಯ ಪರಿಹಾರ ಮಾಡಲಿಕ್ಕೆ ಕಷ್ಟವಾಗಬಹುದು. ಆದರೆ ನಿಮ್ಮ ಮೇಲೆ ಜನರ ಮನಸದಲ್ಲಿ ಸಂಶಯ ಏನಿದೆ, ಅಪವಾದ ಏನಿದೆ ಅಪವಾದ ಎಂದು ಹೇಳಿದರೆ ತಾವು ಒಪ್ಪಲಿಕ್ಕಿಲ್ಲ, ಅಪವಾದದ ಛಾಯೆ ಇರಬಹುದು ಅದನ್ನು ಹೋಗಲಾಡಿಸತಕ್ಕ ಪ್ರಯತ್ನ ಮಾಡಬೇಕಾದವರು ಯಾರು? ಅದನ್ನು ನಾವು ಮಾಬೇಕಾಗಿಲ್ಲ ಎಂದು ನೇರವಾಗಿ ಹೇಳಿಬಿಡತಕ್ಕ ಕೆಲಸವನ್ನು ತಾವು ಮಾಡಬಹುದು. You are at liberty to do it. But, as an Opposition, we will have to bring to the notice of this House certain matters. ಕೆಲವೊಂದು ವಿಚಾರಗಳು ನಡೆದಾಗ ನಾವು ಇದನ್ನು ಈ ಸದನದ ಮೂಲಕ ಜನರ ಗಮನಕ್ಕೆ ತರಬೇಕಾಗುತ್ತದೆ ಹಾಗೂ ಸದನದಲ್ಲಿ ಎತ್ತಬೇಕಾಗುತ್ತದೆ. ಇಲ್ಲದೇ ಹೋದರೆ ನಮ್ಮ ಅವಶ್ಯಕತೆ ಇಲ್ಲಿ ಏನಿದೆ ? ಈ ಕೆಲಸವನ್ನು ನಾವು ಜವಾಬ್ದಾರಿಯಿಂದ ನಿರ್ವಹಿಸುತ್ತಿದ್ದೇವೆ. ಅಧ್ಯಕ್ಷರೇ, ಈಗ ಏನಾಗಿದೆ, ಅಂದರೆ ತಾವು ಕೂಡ ನೋಡಿರಬಹುದು, ಭಾಗವಹಿಸಿರಬಹುದು ಕೆ. ಎಸ್. ಆರ್. ಟಿ. ಸಿ. ಬಸ್ಸುಗಳು ಬೆಂಗಳೂರಿನ ತುಂಬಾ ಓಡಾಡಿದವು. ತಾವು ಪೇಮೆಂಟ್ ಮಾಡಿದ್ದೀರಿ ಇಲ್ಲ ಎಂದು ಹೇಳುವುದಿಲ್ಲ ಏತಕ್ಕೆ ಆತುರ ಮಾಡುತ್ತೀರಿ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.— ಪೇಮೆಂಟ್ ಮಾಡಿದ ಮೇಲೆ ಏತಕ್ಕೆ ಓಡಾಡಬಾರದು ?

ಶ್ರೀ ಎಂ. ವೀರಪ್ಪಮೊಯಿಲಿ.— ಮಾನ್ಯ ಸಚಿವರಾದಂಥ ಚಂದ್ರಶೇಖರ್‌ರವರಿಗೆ ಹೇಳಲಿಕ್ಕೆ ಇಷ್ಟ ಪಡುತ್ತೇನೆ. ಇವರೆಲ್ಲರೂ ಈ ತರಹ ಮಾತನಾಡಿದರೆ ಅದರಿಂದ ನಮಗೆ ನಷ್ಟವಾಗುವುದಿಲ್ಲ ನಿಮಗೆ ನಷ್ಟವಾಗುತ್ತದೆ. ಇವೊತ್ತು ಜನರ ಮನಸ್ಸಿನಲ್ಲಿ ಸಂಶಯ ಜಾಸ್ತಿ ಇದೆ. ಅದನ್ನು ತಾವು ತಿಳಿದುಕೊಳ್ಳಿ. ಆದ್ದರಿಂದ, ಮಾನ್ಯ ಚಂದ್ರಶೇಖರ್‌ರವರು ತಮ್ಮ ಕಡೆ ಜನರಿಗೆ ಕಂಟ್ರೋಲ್ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.— ನಮ್ಮ ಕ್ಷೇತ್ರದಿಂದ ಬಹಳಷ್ಟು ಜನರು ಬಂದಿದ್ದರು.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಸ್ವಲ್ಪ ಬಸ್ಸುಗಳನ್ನು ಬೆಂಗಳೂರು ಸಿಟಿಯಿಂದ ಹೊರಕ್ಕೆ ಇಟ್ಟು ಮೆರವಣಿಗೆಯಿಂದ ಇಲ್ಲಿಗೆ ತಂದಿದ್ದರೆ ಗೊತ್ತಾಗುತ್ತಿತ್ತು. ನಿಮ್ಮ ಬಸ್ಸುಗಳೆಲ್ಲಾ ಪ್ಯಾಲೇಸ್‌ಗೆ ನುಗ್ಗಿದವು. ತಾವು ಕಿಲೋಮೀಟರ್‌ಗೆ ೬–೭ ರೂಪಾಯಿ ಪ್ರಕಾರ ಕೊಟ್ಟಿದ್ದೀರಿ ಅದು ನಮಗೆ ಗೊತ್ತು. ಕೆ. ಎಸ್. ಆರ್. ಟಿ. ಸಿ. ಬಸ್ಸಿನ ಮಟ್ಟಿಗೆ ನೀವು ಕೊಟ್ಟಿದ್ದೀರಿ, ಈ ದೇಶದಲ್ಲಿ ನಿಮ್ಮ ಪಾರ್ಟಿ ಶ್ರೀಮಂತ ಪಕ್ಷ, ನೀವು ಬಡ ಪಕ್ಷದವರು ಎಂದು ಏತಕ್ಕೆ ಹೇಳಲಿ. Here is an instance of a very rich and affluent party and a very poor Government who cannot pay the salary of a Policeman and here is a rich party ruling in Karnataka who cannot conduct a minimum N. C. C. Camp in the Agriculture University Campus. it was to commence on 15th. Now, it has been postponed. ಕಡೂರಿನಲ್ಲಿ ಏನಾಗಿದೆ ಎಂದು ನೆನ್ನೆ ಪತ್ರಿಕೆಯಲ್ಲಿ ನೋಡಿರಬಹುದು. ಅಲ್ಲಿ ಯಾವ ಬಿಲ್ ತೆಗೆದುಕೊಂಡು ಹೋದರು ಟ್ರಜರಿಯಲ್ಲಿ ಹಣ ಇಲ್ಲ. ಆ ಒಂದು ಟ್ರೆಜರಿ ಈ ಪರಿಸ್ಥಿತಿಗೆ ಬಂದಿದೆ ಎಂದು ನೆನ್ನೆ ದಿವಸದ ಪತ್ರಿಕೆಯಲ್ಲಿ ಬಂದಿದೆ. The party is rich but the Government is poor. It is a wonderful contrast. It is a real good case study for any student of Political Science. Perhaps this is a case study for a Ph.D., Student in Bangalore Uuiversity who has taken up Political Science. It is very rich Party and a very poor Government.

ಶ್ರೀ ಆರ್. ವಿ. ದೇಶಪಾಂಡೆ.—ತಾವು ಒಂದು ಮಾತನ್ನು ಹೇಳಿದಿರಿ. ಏನೆಂದರೆ, ನಿಮ್ಮ ಸರ್ಕಾರ ಬಹಳ ಪೂರ್ ಮತ್ತು ನಿಮ್ಮ ಪಾರ್ಟಿ ಬಹಳ ರಿಚ್ ಅಂತ, ತಾವು ತಪ್ಪು ತಿಳಿದುಕೊಳ್ಳದಿದ್ದರೆ ಒಂದು ಮಾತನ್ನು ಹೇಳುತ್ತೇನೆ. ನೀವು ಅನಾಲಿಸಿಸ್ ಮಾಡುವಾಗ how are you going to analyse the Government of India ? ಇವತ್ತು ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯ ಸರ್ಕಾರಕ್ಕೆ ಬರಬೇಕಾದ ಕ್ರಾಪ್ ಇನ್‌ಷ್ಯೂರೆನ್ಸ್ ೮೬-೮೭ರ ರಬಿ ಕ್ಲೈಂಸ್, ೮೬-೮೭ರ ಸಮ್ಮರ್ ಕ್ಲೈಂಸ್, ಖಾರಿಫ್ ಕ್ಲೈಂಸ್, ೮೭-೮೮ರ ಖಾರಿಫ್ ಕ್ಲೈಂಸ್ ಬರಲಿಲ್ಲ. ಏತಕ್ಕೆ ಬರಲಿಲ್ಲ ? ಕೇಂದ್ರ ಸರ್ಕಾರದಲ್ಲಿ ಹಣ ಇಲ್ಲ. ಈ ದೃಷ್ಟಿಯಿಂದ ಅಂದರೆ ಅದರ ಅರ್ಥ I will never say that the Government of India is bankrupt. Every Government has its won difficulties. You cannot say that the Government is poor. The Govt. is not poor but there may be certain difficulties. We are in a death trap. What have you to say about the Government of India ? Please enlighten me.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ದೇಶಪಾಂಡೆಯವರು ಏನು ಒಂದು ಪ್ರಶ್ನೆಯನ್ನು ಎತ್ತಿದ್ದಾರೆ, ಅದು ಸರಿಯಲ್ಲ. ಏಕೆಂದರೆ ಸರ್ಕಾರೀ ನೌಕರರಿಗೆ ಸಂಬಳವನ್ನು ಕೊಡದೇ ಇರುವಷ್ಟು ದಾರಿದ್ರ್ಯ ನಮ್ಮ ಕೇಂದ್ರ ಸರ್ಕಾರಕ್ಕೆ ಬರುವುದಿಲ್ಲ......

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಪ್ರಧಾನ ಮಂತ್ರಿಗಳು ಒಂದು ಕಾನ್‌ಫರೆನ್ಸ್‌ಗೆ ಹೋಗಿಬರಬೇಕಾದರೆ ಅನೇಕ ಕೋಟಿ ರೂಪಾಯಿಗಳು ಖರ್ಚಾಗುತ್ತದೆ. ಏಕೆಂದರೆ ಮಾನ್ಯ ಪ್ರಧಾನ ಮಂತ್ರಿಗಳು ಒಂದು ಕಾನ್‌ಫರೆನ್ಸ್‌ಗೆ ಹೋಗಿ ಬಂದಿದ್ದಕ್ಕೆ ೧೭ ಕೋಟಿ ರೂಪಾಯಿ ಖರ್ಚಾಯಿತು ಎಂದು ಬಂದಿದೆ, ಇದು ಪತ್ರಿಕೆಯಲ್ಲಿ ಬಂದಿದೆ. ೧೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕ ರಾಷ್ಟ್ರದ ಪ್ರಧಾನಿಗಳು ಮೊನ್ನೆ ಹರ್ಯಾಣದಲ್ಲಿ ಫ್ಲಡ್ ಬಂದು ಜನರು ತೊಂದರೆಗೆ ಒಳಗಾದಾಗ ೩ ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟರು. ಆದರೆ ಆ ಚೆಕ್ಕನ್ನು ಹರ್ಯಾಣದ ಮುಖ್ಯ ಮಂತ್ರಿಗಳು ವಾಪಸ್ಸು ಕೊಟ್ಟರು. ಏನಾದರೂ ಮಾತನಾಡುವಾಗ ಸರಿಯಾಗಿ ಮಾತನಾಡುವುದನ್ನು ಕಲಿಯಬೇಕು. ನಿಮ್ಮ ಎಲೆಯಲ್ಲಿ ದೊಡ್ಡ ದೊಡ್ಡ ಆನೆಗಳು ಬಿದ್ದಿವೆ, ಹಾಗಿರುವಾಗ ಸಣ್ಣಪುಟ್ಟ ನೊಣಗಳ ಬಗ್ಗೆ ಏತಕ್ಕೆ ಮಾತನಾಡುತ್ತೀರಿ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಿಮ್ಮ ಪಕ್ಷದವರು ಪಾರ್ಲಿಮೆಂಟ್‌ನಲ್ಲಿದ್ದಾರಲ್ಲಾ. ಅವರಿಗೆ ಹೇಳಿ ಕೇಳುವುದಕ್ಕೆ.

ಶ್ರೀ ಆರ್. ಎಲ್. ಜಾಲಪ್ಪ.—ತಮಗೆ ಪ್ರಪಂಚವೇ ಗೊತ್ತಿದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಯಾರ್ಯಾರ ಎಲೆಯಲ್ಲಿ ಆನೆಗಳು ಬಿದ್ದಿವೆ, ನೊಣಗಳು ಬಿದ್ದಿವೆ ಎಂಬುದನ್ನು ನೋಡೋಣ. ನಾನು ತಮ್ಮನ್ನು ಕಾಂಪ್ಲಿಮೆಂಟ್ ಮಾಡುತ್ತೇನೆ. ಇಲ್ಲಿ ಬಂದಿರತಕ್ಕ ಪ್ರಶ್ನೆ ಏನೆಂದರೆ, ಹಣವನ್ನು ಕೊಡದೇ ಕೆ. ಎಸ್. ಆರ್, ಟಿ, ಸಿ, ಬಸ್‌ನ್ನು ತೆಗೆದುಕೊಂಡಿದ್ದಾರೆ ಎಂದು ಹೇಳುವುದಕ್ಕೆ ತಮಗೆ ಏನು ಆಧಾರ ಇದೆ ? ತಾವು ಹಾಗೆಲ್ಲಾ ಹೇಳಬಾರದು. They are rich now. For a function which is attended to by 80,000 to 1,00,000 people and if they can afford to spend Rs. 5 crores, I can salute to Mr. Bommai and his party. Hats off to them. Now, I am coming to misuse. If a party or a party in Government can block 4000 aiₜtickets, it is really unprecedented. They have actually used 3,300 Air tickets. They have blocked 4000 air tickets. It is really a compliment. If a Party can provide Rs. 1 lakh for each District Janatha president apart from KSRTC bus and in cash for contingency of Rs. 15,000 to 25,000 to each taluka president, you can really compliment their Party.

೫–೩೦ ಪಿ. ಎಂ.

ಇವತ್ತಿನ ದಿವಸ ಕೋಲಾರ ತಾಲ್ಲೂಕಿನ ಉದಾಹರಣೆ ಮಾತ್ರ ತೆಗೆದುಕೊಳ್ಳುತ್ತೇನೆ. ಉಳಿದ ತಾಲ್ಲೂಕಿನ ಲೆಕ್ಕವನ್ನು ಅವರೇ ಹಾಕಿಕೊಳ್ಳಲಿ. ಕೋಲಾರ ತಾಲ್ಲೂಕಿಗೆ ಮಾತ್ರ ೩೫ ಬಸ್‌ಗಳನ್ನು ಉಪಯೋಗಿಸಿರುವ ಉದಾಹರಣೆಯನ್ನು ನೋಡಿದರೆ ಉಳಿದ ಎಲ್ಲಾ ತಾಲ್ಲೂಕುಗಳಲ್ಲಿ ಎಷ್ಟು ಬಸ್‌ಗಳನ್ನು ಉಪಯೋಗ ಮಾಡಿದ್ದಾರೆಂಬುದನ್ನು ತಾವೇ ಲೆಕ್ಕಾಚಾರ ಹಾಕಿಕೊಳ್ಳಬಹುದು. ಅನ್ನ ಬೆಂದಿದೆ ಎಂಬುವನ್ನು ನೋಡಲು ಒಂದು ಅಗಳು ನೋಡಿದರೆ ಸಾಕು. ಒಂದು ತಾಲ್ಲೂಕಿನಿಂದ ಡೆಲಿಗೇಷನ್ ತರಲು ೨೫ ಟ್ರಕ್‌ಗಳನ್ನು ೩೫ ಕಾರುಗಳನ್ನು ತರುವ ಶಕ್ತಿ ಅವರಿಗೆ ಇದೆ. Really we must compliment them. ಬೆಂಗಳೂರು ಡಿಸ್ಟ್ರಿಕ್ಟ್‌ನ ಒಂದು ತಾಲ್ಲೂಕಿನಿಂದ ಡೆಲಿಗೇಷನ್ ತರಲು ೫೦ ಕೆ. ಎಸ್. ಆರ್. ಟಿ. ಸಿ. ಬಸ್‌ಗಳನ್ನು ಮತ್ತು ೭೫ ಟ್ರಕ್‌ಗಳನ್ನು ಕೊಡಬೇಕಾದರೆ. You can just imagine as to what is the dimension of the programme, the capacity and the dynamism of the Janatha Party to organise. Should we not be afraid of their capacity, if they can mobilise this much of massive expenditure of five crores for 80,000 gathering ? ಚುನಾವಣೆಗಳು ಬಂದಾಗ ಏನಾಗುತ್ತದೆಂಬುದನ್ನು ತಾವೇ ಆಲೋಚನೆ ಮಾಡಿ ನೋಡಿ. We must be quite vigilant about it. In a bus of 50 passengers capacity, they have brought 100 passengers. Is it not a mis-use ? You have diverted the spare buses also. According to my information, you have 25% Buses of the total buses available, to be used as spare buses. Normally even these spare buses will be on road, not available for surplus. You have used these spare buses also for your purpose.

ಶ್ರೀ ಎಸ್. ಆರ್. ಬೊಮ್ಮಾಯಿ.—ಉತ್ಪ್ರೇಕ್ಷೆ ಮಾಡತಕ್ಕಂಥವನು ನಾನಲ್ಲ. ತಮಗೆ ಭಯ ಬಂದಿದೆ. ಕೆ.ಎಸ್.ಆರ್.ಟಿ.ಸಿ. ಇಂದ ಬಸ್‌ಗಳನ್ನು ತೆಗೆದುಕೊಂಡಿರುವುದು ೭೫೦. ಅಂಕಿಅಂಶಗಳನ್ನು ತೆಗೆದುಕೊಂಡು ಮಾತನಾಡಿ, ಬಾಯಿಗೆ ಬಂದಹಾಗೆ ಮಾತನಾಡಿದರೆ ಜನರು ನಿಮಗೆ ಪಾಠ

ಕಲಿಸುತ್ತಾರೆ. ತಾವು ಹೇಳುತ್ತೀರಿ ಮೂರು ಸಾವಿರ ಜನರು ಬಂದಿದ್ದರೆಂದು. ಮೂರು ಸಾವಿರ ಜನರು ಬಸ್‌ನಲ್ಲಿ ಬರಲು ಸಾಧ್ಯವೇ ? **ಒಂದೊಂದು ಬಸ್‌ನಲ್ಲಿ ಎಷ್ಟು ಜನರು ಬರಲು ಸಾಧ್ಯವಾಗುತ್ತದೆ ತಾವೇ ಹೇಳಿ ? **

ಶ್ರೀ ಎಂ. ವೀರಪ್ಪ ಮೊಯಿಲಿ.—**ಎಂದು ಹೇಳಬಾರದು. **ಎಂಬ ಪದವನ್ನು ಮಾನ್ಯ ಮುಖ್ಯಮಂತ್ರಿಗಳು ಬಳಸಿದ್ದಾರೆ. ಇದು ಅನ್‌ಪಾರ್ಲಿಮೆಂಟರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸತ್ಯಕ್ಕೆ ದೂರವಾದಂಥ ಮಾತನ್ನು ಮಾನ್ಯ ಮೊಯಿಲಿಯವರು ಹೇಳುವುದರಲ್ಲಿ ಬಹಳ ಪರಿಣತರು.

ಶ್ರೀ ಬಿ. ಬಸವಲಿಂಗಪ್ಪ.—ಆ ಪದವನ್ನು ಬಳಸಿದ್ದರಿಂದ ಹಿಂದೆ ಇದೇ ಸದನದಲ್ಲಿ ಅದರ ಬಗ್ಗೆ ಬಹಳವಾಗಿ ಚರ್ಚೆನಡೆದು ಅದು ಅನ್‌ಪಾರ್ಲಿಮೆಂಟರಿ ವರ್ಡ್ ಎಂದು ಪರಿಗಣಿಸಲಾಗಿದೆ. ಮಾನ್ಯ ಮುಖ್ಯಮಂತ್ರಿಗಳು *ಎಂಬ ಪದವನ್ನು ಬಳಸಿದ್ದಾರೆ. ಅದು ಸರಿಯೋ ಎಂದು ಕೇಳುತ್ತೇನೆ ?

ಅಧ್ಯಕ್ಷರು.—ಸುಳ್ಳು ಎಂಬ ಪದವನ್ನು ಕಡತದಿಂದ ತೆಗೆಯಲು ಆಜ್ಞಾಪಿಸಿರುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಬೊಮ್ಮಾಯಿಯವರು ಬಹಳ ಸತ್ಯವನ್ನೇ ಆಡುವವರು ಎಂದು ಈಗ ಹೇಳಿದ್ದಾರೆ. ನಿಮ್ಮ ಸತ್ಯಾಸತ್ಯತೆಯನ್ನು ಜನ ನಂಬುತ್ತಾರೋ ಬಿಡುತ್ತಾರೋ ಎಂಬುದನ್ನು ಜನರಿಗೆ ಬಿಡೋಣ. ಸನ್ಮಾನ್ಯ ಬೊಮ್ಮಾಯಿಯವರು ಬಹಳ ಸತ್ಯ ಆಡುವವರು ಎಂದು ಈಗತಾನೇ ಹೇಳಿದ್ದಾರೆ, ನೋಡೋಣ. ನಿಮ್ಮ ಸತ್ಯಾಸತ್ಯತೆಯನ್ನು ಎಲ್ಲಿಯವರೆಗೆ ಜನ ನಂಬುತ್ತಾರೆ ಬಿಡುತ್ತಾರೆ ಎಂಬುದನ್ನು ಜನ ನೋಡುತ್ತಾರೆ. ಯಾರು ಸತ್ಯ ಹೇಳುತ್ತಾರೆ, ಯಾರು ಕಪಟ ನಾಟಕ ಆಡುತ್ತಾರೆ ನೋಡೋಣ. ದೇಸಾಯಿ ಕಮಿಷನ ಹೇಳಿದೆಯಲ್ಲ, ಫೋರ್ಜರಿ ಮಾಡಿ ಸರ್ಕಾರ ನಡೆಸುತ್ತಿದ್ದಾರೆ ಎಂದು. ಮಾಯಾ ಮಂತ್ರ ಮಾಡತಕ್ಕದ್ದು ನಿಮಗೆ ಸೀಮಿತ. ಸುಳ್ಳು ಯಾರು ಹೇಳುತ್ತಿದ್ದಾರೆಂಬುದು ಗೊತ್ತಾಗುತ್ತದೆ. ನ್ಯಾಯಾಂಗ ವಿಚಾರಣೆಯಾಗಿ ತೀರ್ಮಾನವಾಗಲಿ ಆಗ ನಾನು ಹೇಳುವುದು ಸುಳ್ಳೇ ಅಥವಾ ನೀವು ಹೇಳುವುದು ಸುಳ್ಳೇ ಎಂಬುದು ಲೋಕಕ್ಕೆ ಗೊತ್ತಾಗುತ್ತದೆ. ೫೦ ಜನ ಹಿಡಿಯತಕ್ಕ ಬಸ್ಸಿನಲ್ಲಿ ನೂರು ಜನರನ್ನು ಹಾಕತಕ್ಕದ್ದು ದುರುಪಯೋಗ ಅಲ್ಲವೆ ? ಇದನ್ನು ತನಿಖೆ ಮಾಡಲೇಬೇಕು. ನಂದಿನಿ ಲೇಔಟ್ ಮತ್ತು ರಾಜಾವಿಲಾಸ್ ಲೇಔಟ್‌ಗಳಲ್ಲಿ ಬಿಡಿಎ. ಮನೆಗಳಿವೆ. ಅವನ್ನು ಬಾಡಿಗೆಗೆ ತೆಗೆದುಕೊಂಡಿದ್ದರು. Whether you are entitled to lease out these new houses to private parties, since these houses have already been sold out, You have no right to lease out these houses to anyone either temporarily or permanently, since these houses have already been allotted. ಇದು ಪತ್ರಿಕೆಯಲ್ಲಿ ಬಂದಿದೆ. ಇದು ಉತ್ಪ್ರೇಕ್ಷೆ ಮಾಡತಕ್ಕ ಪ್ರಶ್ನೆ ಅಲ್ಲ. ನೀವು ಲೀಸ್‌ಔಟ್ ಎಂದು ಹೇಳಿದ್ದೀರಿ. ಎಷ್ಟು ಬಾಡಿಗೆಗೆ ಮಾಡಿದ್ದೀರಿ ? ಲೀಸ್ ಔಟ್ ಮಾಡುವುದಕ್ಕೆ ಬಿಡಿಎನಲ್ಲಿ ರೂಲ್ಸ್ ಇದೆಯೆ ? ಇದನ್ನು ತಾವು ಹೇಳಬೇಕು. ಈಗ ಸಾಕಷ್ಟು ಫ್ಲಡ್ ಬಂದಿದೆ. Your conscience should have been towards saving the flood victims and towards raising funds for the flood victims. ಮುಖ್ಯ ಮಂತ್ರಿಗಳ ರಿಲೀಫ್ ಫಂಡಿಗೆ ಹಣ ಉಪಯೋಗವಾಗುತ್ತಿದ್ದರೆ ಬಹಳ ಪ್ರಯೋಜನವಾಗುತ್ತಿತ್ತು. ಅದನ್ನು ಮಾಡುವ ಬದಲು ಈ ಕೆಲಸ ಮಾಡಿದ್ದೀರಿ, ನಮಗೆ ಏನೆಂದರೆ, ತಾವು ಮುಖ್ಯ ಮಂತ್ರಿಯಾಗಿ ಹೊಸದಾಗಿ ಅಧಿಕಾರವನ್ನು ವಹಿಸಿಕೊಂಡಿರಿ. ತಾವು ಅಧಿಕಾರ ವಹಿಸಿಕೊಂಡ ಕೂಡಲೇ ಈ ಬಾಲಗ್ರಹ ಏತಕ್ಕೆ ಬರಬೇಕಾಗಿತ್ತು, ಇದು ತಮಗೆ ಏತಕ್ಕೆ ತಟ್ಟಬೇಕಾಗಿತ್ತು ? ಫೋನ್ ಟ್ಯಾಪಿಂಗ್ ಮಾಡಿ ಹೆಗಡೆಯವರು ಮೂಲೆ ಸೇರಿರುವಾಗ ಅದನ್ನು glorify ಮಾಡುವ ಕೆಲಸ ತಮಗೆ ಏತಕ್ಕೆ ಬಿತ್ತು ಎಂದು ನಾವು ನಿಮ್ಮ ಬಗ್ಗೆ ವಿಷಾದ ಪಡುತ್ತಿದ್ದೇವೆ.

Now you have Provided him some plat–form so that he could be glorified. This may be your last chance to express your gratitude.

---

* ಅಧ್ಯಕ್ಷರ ಆದೇಶದ ಮೇರೆಗೆ ಗುರುತಿಸಿರುವ ಭಾಗವನ್ನು ತೆಗೆದು ಹಾಕಲಾಗಿದೆ.

This is the last act of gratitude from Mr. Bommai, the present Chief Minister to the Ex-Chief Minister. I complement him for this kind of gesture of loyalty or goodwill shown to the Ex-Chief Minister. ಅದರ ಬಗ್ಗೆ ನಾವು ಹೆಚ್ಚು ಚರ್ಚಿಸುವುದಕ್ಕೆ ಹೋಗುವುದಿಲ್ಲ. ನಾನು ಏನು ಪ್ರಕರಣಗಳನ್ನು ಹೇಳಿದ್ದೇನೆ ಅದಕ್ಕೆ ಸಾಕಷ್ಟು ಎವಿಡೆನ್ಸ್ ಇದೆ. ಅದನ್ನೆಲ್ಲ ಪಟ್ಟಿ ಮಾಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ೫ ನಿಮಿಷದಲ್ಲಿ ಮುಗಿಸಿ ಎಂದು ಬೇರೆ ಹೇಳಿದ್ದೀರಿ. ಇದರ ಬಗ್ಗೆ ನ್ಯಾಯಾಂಗ ವಿಚಾರಣೆ ನಡೆಯಲಿ, ಸತ್ಯ ಹೊರಗೆ ಬರಲಿ. ಇದೆಲ್ಲ ನಮ್ಮ ತಲೆ ಮೇಲೆ ಇರಲಿ, ಅದನ್ನು ಸಹಿಸಿಕೊಳ್ಳತಕ್ಕ ಶಕ್ತಿ ಇದೆ. ನಮಗೆ ದಪ್ಪ ಚರ್ಮ ಇದೆ ಎಂದರೆ ಬಿಟ್ಟುಬಿಡೋಣ. If you want to clear this off, we insist on behalf of the people of Karnataka for a judicial enquiry. ಸಿಬಿಐ. ಎನ್‌ಕ್ವೈರಿಗೆ ಬೇಕಾದರೆ ನೀವೇ ಡಿಮ್ಯಾಂಡ್ ಮಾಡಿ. ಮತ್ತೊಂದು ಪ್ರಸಂಗ. ಇಲ್ಲಿ ಉದ್ಭವವಾಗಿದೆ. ಅದರ ಬಗ್ಗೆ ನಮ್ಮ ನಾಯಕರೂ ಕೂಡ ಹೇಳಿದ್ದಾರೆ. ನಾನು ಹೆಚ್ಚು ವಿಸ್ತಾರ ಮಾಡುವುದಕ್ಕೆ ಹೋಗುವುದಿಲ್ಲ. ಅದೇನೆಂದರೆ ಮುಖ್ಯ ಮಂತ್ರಿಯಾಗಿ ದೇವೇಗೌಡ...

(ನಗು)

ದೇವೇಗೌಡರು ಮುಖ್ಯ ಮಂತ್ರಿಯಾಗುತ್ತಾರೆಂದು ಆದೇ ಬಂತು. ಅವರು ಮುಖ್ಯ ಮಂತ್ರಿಯಾದರೆ...

ಶ್ರೀ ಎಸ್. ಆರ್. ಬೊಮ್ಮಾಯಿ.— ಅವರಿಗೆ ಒಂದು ಭೂತ ಬೆನ್ನು ಹತ್ತಿದೆ. ಅದು ಯಾವಾಗಾದರೂ ಹೊರಗೆ ಬರುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಮಾನ್ಯ ದೇವೇಗೌಡರ ಭೂತ ಹಿಡಿದಿದ್ದು ನಿಮಗೆ ನಮಗೆ ಅಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.— ದೇವೇಗೌಡರ ಭೂತ ನಿಮ್ಮನ್ನು ನುಂಗುತ್ತದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಆ ಭೂತ ಈಗಾಗಲೇ ಒಬ್ಬರನ್ನು ಓಡಿಸಿಬಿಟ್ಟಿದೆ. ನಿಮ್ಮನ್ನೂ ಓಡಿಸಬಾರದು ಅಂತ ನಮ್ಮ ಇಚ್ಛೆ ..

(ನಗು)

ಶ್ರೀ ಎಸ್. ಆರ್. ಬೊಮ್ಮಾಯಿ.— ನಿಮಗೇನು ಗೊತ್ತಿದೆ. ನಾನೂ -ದೇವೇಗೌಡರು ಹೇಗೆ ಇದ್ದೇವೆ ಎಂಬುದು. ಅದಕ್ಕೆ ನಿಮಗೆ ಅಂಜಿಕೆಯಾಗಿದೆ.

ಶ್ರೀ ಆರ್. ಎಲ್. ಜಾಲಪ್ಪ.— ಆ ಎರಡೂ ಭೂತಗಳು ಒಂದಾಗಿ ನಿಮ್ಮನ್ನು ಓಡಿಸದಿದ್ದರೆ ಸಾಕು.

ಶ್ರೀ ಎಂ. ವೀರಪ್ಪ ಮೊಯ್ಲಿ.— ಅವರು ಯಾರನ್ನು ಓಡಿಸುತ್ತಾರೋ ಓಡಿಸಿಕೊಳ್ಳಲಿ. ಅದು ನಮಗೆ ಏಕೆ? ಆ ವಿಷಯವನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ.— ಅವರಿಗೆ ಬೇಕಾದಷ್ಟು ಸಮಸ್ಯೆಗಳು ಇವೆ. ಅದಕ್ಕೆ.

ಶ್ರೀ ಎಂ. ವೀರಪ್ಪ ಮೊಯ್ಲಿ.— ನಮ್ಮ ಸಮಸ್ಯೆಗಳು ಇದ್ದರೆ ನಾವು ನೋಡಿಕೊಳ್ಳುತ್ತೇವೆ. ಈಗ ಇರುವುದು ನಿಮ್ಮ ಸಮಸ್ಯೆ. ಅದನ್ನು ಬೇಗ ಪರಿಹಾರ ಮಾಡಿಕೊಳ್ಳಿ. ಅಧಿಕಾರದಲ್ಲಿರುವವರು ನೀವು ಹೇಗಾದರೂ ಮಾಡಿ ಅಧಿಕಾರದಲ್ಲಿ ಉಳಿದುಕೊಳ್ಳಬೇಕಾದವರು ನೀವು, ನಾವಲ್ಲ. ನಮ್ಮಲ್ಲೇನೂ ಆ ಅಧಿಕಾರ ಇಲ್ಲ.

ಶ್ರೀ ಆರ್. ವಿ. ದೇಶಪಾಂಡೆ.— ನಿಮ್ಮ ಸಮಸ್ಯೆಗಳೇ ಬೇಕಾದಷ್ಟು ಇವೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸನ್ಮಾನ್ಯ ಬೊಮ್ಮಾಯಿಯವರು ಆ ದಿವಸ ಅಧ್ಯಕ್ಷತೆಯನ್ನು ವಹಿಸಿದ್ದಾರೆ. ಯಾವಾಗ? When the Janatha Dal is born. I do not think that is in dispute. ಅಲ್ಲವಾ? ಜನತಾ ದಳ ಅಂದರೆ ಹೇಗಾಯಿತು ಎಂಬ ಪ್ರಶ್ನೆಗೆ ತಾವೇ ಹೇಳಿದ್ದೀರಿ. ಇನ್ನೂ ಮರ್ಜರ್ ಆಗಲಿಲ್ಲ ಅಂತ. ಮರ್ಜರ್ ಯಾವಾಗ ಆಗುವುದು? It is hypothetical question whether it will merge at all Dal means front.

It cannot be one unit of a party. ಆದರೆ ಜನಗಳಿಗೆ ಏನು ಅಭಿಪ್ರಾಯ ಬಂದಿದೆ ಅಂದರೆ ನ್ಯಾಷನಲ್ ಫ್ರಂಟ್‌ದೊಳಗೆ ಇದೂ ಒಂದು ಫ್ರಂಟ್. ಅದರೊಳಗೆ ಇನ್ನೊಂದು ಫ್ರಂಟ್ ಏನು ಮಾಡುತ್ತೀರೋ ಮಾಡಿ. ಆಲ್‌ರೈಟ್. ಆದು ಬಹಳ ಡೆಮಾಕ್ರಟಿಕ್ ಆಗಿ ಆಗಿದೆ ಅಂತ ತಾವೇ ಹೇಳಿದ್ದೀರಿ. ಅದನ್ನು ಅವರಿಗೆ ಬಿಡೋಣ. ಅದು Internal democracy ನಾನು ಅದರ ಮೇಲೆ ಕಾಮೆಂಟ್ ಮಾಡುತ್ತೇನೆಂದು ತಿಳಿದುಕೊಳ್ಳಬೇಡಿ Only merger of leaders have taken place and not the merger of parties. That you are going to impose on the constituent parties. It is for you to do it. I am not commenting upon that. Leaders have merged either in a dinner party or in a big conclave. Do you want to call it democratic?

(ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಅಲ್ಲಿ ರೆಸಲ್ಯೂಷನ್ ಅನ್ನು ಓದಿ ಹೇಳಲಿಲ್ಲ, ಎಲ್ಲರೂ ಕೈ ಎತ್ತಿ ಅಂತ ಹೇಳಿದಾಗ ಎಲ್ಲರೂ ಕೈ ಎತ್ತಿದರು, ಅದನ್ನು ನಮ್ಮ ಮಾನ್ಯ ಬೊಮ್ಮಾಯಿಯವರೇ ಮಾಡಿದ್ದಾರೆ. ಆ ಪ್ರಶ್ನೆ ನಿಮಗೆ ಬಿಟ್ಟಿದ್ದು.

(ಗೊಂದಲ)

ಶ್ರೀ ಎಚ್. ಡಿ. ದೇವೇಗೌಡ.— ಓದಿ ಹೇಳಲಿಲ್ಲ ಅಂತ ತಾವು ಹೇಳಿದ್ದೀರಿ. ಟಿ.ವಿ. ನೋಡಿದಾಗ ಕೈ ಎತ್ತಿದ್ದನ್ನು ಟಿ.ವಿ.ಯವರು ಹಿಡಿದಿದ್ದಾರೆ. ಆದರೆ ನಿರ್ಣಯವನ್ನು ಓದಿ ಹೇಳಿದ್ದನ್ನು ಟಿ.ವಿ.ಯಲ್ಲಿ ಬರಲೇ ಇಲ್ಲ. ಅದಕ್ಕೇ ಆ ರೀತಿ ಆಗಿರುವುದು.

ಶ್ರೀ ಎಂ, ವೀರಪ್ಪ ಮೊಯ್ಲಿ.— ಆ ದಿವಸ ನಾನು ಟಿ.ವಿ.ಯನ್ನೇ ನೋಡಲಿಲ್ಲ. ಮರುದಿವಸ ಪತ್ರಿಕೆಯಲ್ಲಿ ಬಂದಿದ್ದನ್ನು ಓದಿದೆ.

SRI R.V. DESH PANDE. Perhaps you were also present.

(*Interruption*)

ಶ್ರೀ ಎಂ. ವೀರಪ್ಪ ಮೊಯ್ಲಿ.— ಭಯ ಇಲ್ಲ. ಅಲ್ಲಿ ಎಷ್ಟು ಜನ ಕೃಷ್ಣನನ್ನು ನೋಡಬೇಕಾಯಿತು, ನಮಗೆ ಭಯವಿಲ್ಲ. ಲಕ್ನೋದಿಂದ ಬಂದಂತಹ ಕೃಷ್ಣನನ್ನು ನೋಡೋದೋ, ಸಂಜಯ್ ಸಿಂಗ್ ಕೃಷ್ಣನನ್ನು ನೋಡೋದೋ, ವಿ. ಪಿ. ಸಿಂಗ್ ಕೃಷ್ಣನನ್ನು ನೋಡೋದೋ, ರಾಮಕೃಷ್ಣ ಎಂಬ ಕೃಷ್ಣನನ್ನು ನೋಡೋದೋ. ಎಲ್ಲಾ ಕೃಷ್ಣಮಯ ಆಗಿತ್ತು ಅಲ್ಲಿ. Mr. Bommai is a rationalist and Roy-ist. ಸನ್ಮಾನ್ಯ ಬೊಮ್ಮಾಯಿಯವರು...

ಅಧ್ಯಕ್ಷರು.— ಬೇಗ ಮುಗಿಸಿ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಸನ್ಮಾನ್ಯ ಬೊಮ್ಮಾಯಿಯವರು He is a Royist. ಅವರಿಗೆ ಕೃಷ್ಣನ ಪಾರ್ಟನ್ನು ಕೊಡುವುದಿಲ್ಲ, ಅವರು ಪಾಪ -ಕೃಷ್ಣರಲ್ಲ.

ಅವರು ಹಿಡಿತದೋ ಇಲ್ಲೋ. ಅದಕ್ಕೆ ಹಿಡಿಯುವವರು ಬೇರೆ ಇದ್ದಾರೆ. ರಾಯಿಲಿಸ್ಟ್ ಆಗಿ, ರ್‍ಯಾಷನಲಿಸ್ಟ್ ಆಗಿ ಮಹಾಭಾರತ ಪುರಾಣವನ್ನು ಓದುವುದನ್ನು ಯಾವತ್ತೋ ನಿಲ್ಲಿಸಿದ್ದಾರೆ. ಕಲಿಯುಗದಲ್ಲಿ ಕೃಷ್ಣನ ಗತಿ ಏನು ಗೊತ್ತಾ ? ರಾಮ ವಾಲಿಯನ್ನು ಕೊಂದ ಕೊಂದಾಗ ವಾಲಿಗೆ ರಾಮ ಏನು ಹೇಳಿದ? ನಾನು ಯಾವ ರೀತಿ ನಿನ್ನನ್ನು ಬಾಣದಿಂದ ಕೊಂದೆ ಇದರ ಪಾಪ ಪರಿಹಾರ ಆಗಬೇಕಾದರೆ ಕಲಿಯುಗದಲ್ಲಿ ಬೇಡನ ವೇಷ ಧರಿಸಿ ನನ್ನನ್ನು ಅದೇ ರೀತಿಯಲ್ಲಿ ಬಾಣವನ್ನು ಬಿಟ್ಟು ನೀನು ಕೊಲ್ಲಬಹುದು. ಆಗ ನನ್ನ ಶಾಪ ವಿಮೋಚನೆ ಆಗುತ್ತದೆ ಎಂದು ಹೇಳಿ ರಾಮ ವಾಲಿಗೆ ತ್ರೇತಾಯುಗದಲ್ಲಿ ಕೊಟ್ಟ ವಚನದ ಪಾಲನೆ ಕಲಿಯುಗಕ್ಕೆ ಕಾಲು ಇಟ್ಟಾಗ ಕೃಷ್ಣನ ಪತನ ಆಯಿತು. ಆದುದರಿಂದ ಸ್ವಾಮಿ, ನಿಮ್ಮ ಕಲಿಯುಗಕ್ಕೆ ಕಾಲಿಟ್ಟಾಗ ನಿಮ್ಮ ಜನತಾದಳದ ಪತನ ಈಗ ಪ್ರಾರಂಭ ಆಗಿದೆ. ಕೃಷ್ಣನ ಗತಿ ಇಷ್ಟು. ಈ ಕೃಷ್ಣ ನಿಮ್ಮದು, ಬೇರೆ ಕೃಷ್ಣ ಅಲ್ಲದಿದ್ದರೂ ಕೂಡಾ ಕೊನೆಗಾಲದ ಕೃಷ್ಣ.

ಶ್ರೀ ಜೀವರಾಜ ಆಳ್ವ.—ಮಾನ್ಯ ರಮಾನಂದಸಾಗರರ ರಾಮಾಯಣ ಹೇಳುತ್ತಿದ್ದೀರಾ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಇದು ತ್ರೇತಾಯುಗವಲ್ಲ. ಮಾನ್ಯ ರಮಾನಂದಸಾಗರರನ್ನು ನಿಮಗೆ ಬಿಟ್ಟಿದ್ದೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನೀವು ಏನಾದರೂ ಹೊಸದಾಗಿ ರಾಮಾಯಣವನ್ನು ಬರೆಯುತ್ತಿದ್ದೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಶ್ರೀನಿವಾಸ್ ಅವರೇ. ಅವರು ರಾಮಾಯಣ ಕಾಲದಲ್ಲಿ ಇಲ್ಲ, ಅವರು ತ್ರೇತಾಯುಗದಲ್ಲಿ ಕೃಷ್ಣನ ಗೋಕುಲದಲ್ಲಿ ಇದ್ದಾರೆ. ಸುಮ್ಮನೆ ಅವರನ್ನು ಏಕೆ ರಾಮಾಯಣದ ಹಂತಕ್ಕೆ ತರುತ್ತಿದ್ದೀರಿ ?

ಶ್ರೀ ಕೆ. ಎಚ್. ಶ್ರೀನಿವಾಸ್.—ಬಾಲಲೀಲೆಗಳಲ್ಲಿದ್ದಾರಾ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಬಾಲ ಲೀಲೆಗಳಲ್ಲಿದ್ದಾರೆ. ಅಧ್ಯಕ್ಷರೇ, ಇಲ್ಲಿ ಒಂದು ಪ್ರಮುಖವಾದ ಪ್ರಶ್ನೆ ಉದ್ಭವವಾಗಿದೆ. ಇದನ್ನು ಎತ್ತುವಾಗ ರಾಜಕೀಯವಾಗಿ ವಿಚಾರ ಎತ್ತುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದು ತಾವು ಬಹುಶಃ ತಿಳಿದುಕೊಂಡಿರಬಹುದು; ಆದರೆ ತಾವು ದಯಮಾಡಿ ಸೆಕ್ಷನ್ 2 (ಎ) ನ್ನು ಪರಿಶೀಲನೆ ಮಾಡಬೇಕು. I will read it. It is a very serious matter. ಇದನ್ನು ತಾವು ಗಮನವಿಟ್ಟು ನೋಡಬೇಕು. ತಾವು ಈ ಸದನದ ಅಧ್ಯಕ್ಷರಾಗಿ You have to play part in it. As between us' that stage has passed. Now the ball is in your Court. Disqualification on the ground of defection :—

> " (1) Subject to the provisions of paragraph 3. 4 and 5 a member of a House belonging to any political party shall be disqualified for being a member of the House.
>
> (a) if he has voluntarily gives up his membership of such political party : "

The Chief Minister is not only the Chief Minister but also the Leader of the Janatha Legislature Party and a Membsr of this House. He has voluntarily given up the membership of the Janatha Party by presiding over a function. It is a fact that he has wound up Janatha Party and given birth to a new Janatha Dal. It is in evidence. It is known to the entire world. ಅಲ್ಲಿ ಸಮಾವೇಶಕ್ಕೆ ಸೀಮಿತ ಆಗಿಲ್ಲ. ಮತ್ತೆ You have read out a resolution. You have said ; " ಕಂಸ ಹುಟ್ಟಿದ್ದಾನೆ " ಅಲ್ಲ, ಅಲ್ಲ " ಕೃಷ್ಣ ಹುಟ್ಟಿದ್ದಾನೆ ". He himself has proclaimed. Hon. Chief Minister and the Leader of the Legislsture Party is a Member of this House. It is for the other Members to disclaim him. They can disown Sri Bommai as the Leader of the Legislature Party. It is between you, ಅದನ್ನು ನಾವು ಏಕೆ ಚರ್ಚೆ ಮಾಡಬೇಕು ? ಶ್ರೀ ದೇವೇಗೌಡರು ಚರ್ಚೆ ಮಾಡಬಹುದು. 11ನೇ ತಾರೀಕಿನಿಂದ ಇವತ್ತು 14ನೇ ತಾರೀಕು. ಮೂರು ದಿವಸ ಆಯಿತು, None of the Members of the Legislature Party has disclaimed him. They have to write ' Voluntarily I have not given up the membership of my political party viz. , Janata party.' has anybody written to the Janata Legislature Party saying that they have not given up the membership of the Janata Party and they are still in the Janata

Party and not in the Janata Dal ? ಲೆಜಿಸ್ಲೇಚರ್ ಪಾರ್ಟಿಗೆ ಬರೆದಿದ್ದಾರಾ ? ಬಹುಶಃ ಶ್ರೀ ದೇವೇಗೌಡರಿಗೂ ಬರೆದಿರಲಿಕ್ಕಿಲ್ಲ. It is between you to decide about it. But, we are concerned to this extent that the facts of the voluntary relinquishment of the Membership of the Janata Party is a fact before this House' a fact before the entire world. ಆದ್ದರಿಂದ ಈ ಪ್ರಶ್ನೆ ಬಂದಾಗ, ಅಧ್ಯಕ್ಷರೇ, ತಾವು ಡಿಸೈಡ್ ಮಾಡಬೇಕಾಗುತ್ತದೆ. ಈ. ಇಷ್ಯೂ ಸರಿ ಇದೆಯೋ ಅಂತ ತಾವು ಹೇಳಿ. I have raised this issue before you. You have to consider it under Section 6. ತಾವು ಇದನ್ನು ಹೇಳಬೇಕು. Anti-Defection Bill is a penal bill: ಅಧ್ಯಕ್ಷರೇ, ತಾವು ವಕೀಲರಾಗಿದ್ದೀರಿ. Any penal clause will have to be strictly read. It has to be strictly read even under the General Clauses Act. It cannot be interpreted according to the convenience or according to the knowledge or wisdom of the person who read out that. 'Decision on question as to disqualification:- If any question arises as to whether a Member of the House has become a subject to disqualification under this schedule, the question shall be referred for the decision to the Chairman or as the case may be to the Speaker of such House and his decision shall be final." Your decision cannot be across the table. You have to give a considered decision on that. I have raised this issue under rule 68 here. It is for you to take a decision under Section 6. There is no other provision except Section 6 Whether your ground is a frivolous, or whimsical one or a serious or sober one, it is not to be questioned. But the matter has arisen before you that here is a chief Minister as a Leader of the Legislature party who has voluntarily relinquished his membership of the Janata Party and consequently former the Janata Dal, is a part and parcel of that meeting. He is a party to that decision and he cannot separate himself or isolate himself from the decision which he has already taken. This is a very serious matter which makes the Leader of the Janata Legislature Party. in turn of the Janata Party to disqualiy the Leader of the House including the Members when they have not disclaimed. It amounts and it constitutes the disqualification under Section 2(a) of the Anti Defection Act. It is a very clear provision. I do not think, there is any ambiguity or a vagueness in so far as the conception of this particular clause in the particular section is concerned and the Hon. Speaker has no other option, but to consider this question when it arises under-Section 6 and give a final decision in this matter. ಈ ಎರಡು ವಿಚಾರವನ್ನು ತಾವು ಗಮನಿಸಬೇಕು. ನಾವು ಬೇಡಿಕೆಯನ್ನು ಸಲ್ಲಿಸಿದ್ದೇವೆ. ಸರ್ಕಾರಿ ಮಿಷನರಿ ದುರುಪಯೋಗವಾಗಿದೆ. ಜಿಲ್ಲಾಪರಿಷತ್ ಅಧ್ಯಕ್ಷರು ಕಾರು ತಂದು ದುರುಪಯೋಗ ಮಾಡಿದ್ದಾರೆ, ಪೋಲೀಸ್ ಇಲಾಖೆಯವರು ದುರುಪಯೋಗ ಮಾಡಿದ್ದಾರೆ, ಕೆ.ಎಸ್.ಆರ್.ಟಿ.ಸಿ.ನಲ್ಲಿ ದುರುಪಯೋಗವಾಗಿದೆ, ಕೆ.ಇ.ಬಿ. ಇಲಾಖೆ ದುರುಪಯೋಗವಾಗಿದೆ, ಬಿ.ಡಿ.ಎ. ದುರುಪಯೋಗವಾಗಿದೆ. ಈ ತರಹ ಅನೇಕ ದುರುಪಯೋಗದ ಪ್ರಸಂಗಗಳು ಆಗಿದೆ. ತಾವು ಇದನ್ನು ನ್ಯಾಯಾಂಗ

ವಿಚಾರಣೆಗೆ ಒಪ್ಪಿಸಬೇಕು. ಎರಡನೆಯದಾಗಿ, ಸನ್ಮಾನ್ಯ ಮುಖ್ಯಮಂತ್ರಿಯವರು, as a presiding personality of that merger movement viz., Janatha Dal on 11th, has voluntarly relinquished the party, which you have recognised, apart from the mandate of the people. That is a political propriety. ಜನತಾ ದಳಕ್ಕೆ ಮ್ಯಾನ್‌ಡೇಟ್ ಇದೆಯೋ ಇಲ್ಲವೋ ಗೊತ್ತಿಲ್ಲ. ಖಂಡಿತ ಇಲ್ಲ. ೫ ವರ್ಷದಲ್ಲಿ ನಾನು ಮೊನ್ನೆ ತಾನೆ ಹೇಳಿದೆ, ಇಬ್ಬರು ಮುಖ್ಯಮಂತ್ರಿಗಳು, ಮೂರು ಪಕ್ಷಗಳು, ಜನತಾ ರಂಗ, ಜನತಾ ಇವತ್ತು ಜನತಾ ದಳ. ಇಂತಹ ಅಸ್ಥಿರವಾದಂಥ, ಗೊಂದಲಮಯವಾದಂಥ, ರಾಜಕೀಯ ಅಭದ್ರತೆಯ ವಾತಾವರಣವನ್ನು ಸೃಷ್ಟಿಸಿ ಕೂಡ without taking a fresh mandate from the people. ನಾವು ಆಳುತ್ತೇವೆ ಎಂದು ಹೇಳಿದರೆ, ಅಧಿಕಾರದ ಆಸೆಗೆ ಅಂಟಿಕೊಂಡು ಬದುಕುತ್ತೇವೆಂದೂ, ಜನ ನಮ್ಮನ್ನು ಹೊಡೆದೋಡಿಸುವವರೆಗೂ ನಾವು ಅಧಿಕಾರದಲ್ಲಿ ಇರುತ್ತೇವೆಂದು ಹೇಳಿದರೆ, it is left to the subjective sense of propriety of this party. I do not want to comment on that. ಆದ್ದರಿಂದ ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ವಂದನೆಯನ್ನು ಸಮರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಶ್ರೀಮತಿ ನಾಗರತ್ನಮ್ಮನವರೇ, ಈಗ ೨ ತಾಸು ಆಗಿದೆ. ನಾನು ಮೊದಲೇ ಹೇಳಿದೆ, ಏನೆಂದರೆ, ಒಂದು ತಾಸು ಕೊಡೋಣ ಎಂದು ಹೇಳಿದೆ, ರೂಲ್ ೭೮ರ ಪ್ರಕಾರ ಅದೂ ಮುಗಿಯಿತು. ಇದನ್ನು ಅಡ್ಜರ್ನ್‌ಮೆಂಟ್ ಮೋಷನ್ ಆಗಿ ತೆಗೆದುಕೊಂಡಿದ್ದರೂ ಸಹಿತ, ಅದಕ್ಕೂ ಮ್ಯಾಕ್ಸಿಮಮ್ ೨ ಗಂಟೆ. ಅದೂ ಕೂಡ ಮುಗಿದಿದೆ. ಈಗ ಇನ್ನೂ ೮ ಕಾಲಿಂಗ್ ಅಟೆನ್‌ಷನ್ ಇವೆ, ೫೩, ೩೩೪ರ ಚರ್ಚೆ ಇವೆ. ಆದ್ದರಿಂದ ಇದು ಇಲ್ಲಿಗೆ ಸಾಕು, ಈಗ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ,

ಅಧ್ಯಕ್ಷರು.—ಮಾನ್ಯ ಬಸವಲಿಂಗಪ್ಪನವರೇ. ಈಗಾಗಲೇ ೨ ತಾಸು ಆಗಿದೆ. I have given you maximum time. ನಾನು ಮೊದಲೇ ಹೇಳಿದ್ದೆ, ಎಲ್ಲರೂ ೫–೫ ನಿಮಿಷ ಮಾತನಾಡಿ ಎಂದು.

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನೀವು, ದಯವಿಟ್ಟು ನಮ್ಮನ್ನು ಹೆದರಿಸಿ, ಬೆದರಿಸಿ ಮಾಡಬೇಡಿ......

ಅಧ್ಯಕ್ಷರು.—ನಿಮ್ಮನ್ನು ಹೆದರಿಸುವುದಕ್ಕೆ ನಾವು ಕರಡಿ ಕಟ್ಟಿಕೊಂಡಿಲ್ಲ, ನೀವೂ ಕರಡಿ ಕಟ್ಟಿಕೊಂಡಿಲ್ಲ. ಯಾರಿಗೆ ಯಾರೂ ಹೆದರಿಸುವುದಕ್ಕಾಗುವುದಿಲ್ಲ. ರೂಲ್ಸ್ ಪ್ರಕಾರ ನಾನು ಹೇಳಿದೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ರೂಲ್ಸ್ ನೀವು ಹೇಳಬೇಡಿ, ಬೆಳಿಗ್ಗೆ ಮುಖ್ಯಮಂತ್ರಿಗಳೂ ಇದನ್ನು ತೆಗೆದುಕೊಳ್ಳುವುದಕ್ಕೆ ಒಪ್ಪಿದ್ದಾರೆ......

ಅಧ್ಯಕ್ಷರು.—ಹಾಗಾದರೆ, ರೂಲ್ಸ್ ಗಾಳಿಗೆ ತೂರಿಬಿಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಮಾತನಾಡಿಲ್ಲ, ನಾನೂ ಕೂಡ ಹೆಸರು ಕೊಟ್ಟಿದ್ದೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾವು ಕೊನೆವರೆಗೆ ಸುಮ್ಮನೆ ಕುಳಿತಿದ್ದೇವೆ. ಈಗ ಎಲ್ಲಾ ಕೆಲಸ ಮುಗಿಯಿತು ಎಂದು ಹೇಳಿ, ನಾವು ಮಾತನಾಡುವುದಕ್ಕೆ ಬಿಡುವುದಿಲ್ಲ. ೨ ತಾಸು ಆಯಿತು, ೩ ತಾಸು ಆಯಿತು ಎಂದು ಹೇಳಿದರೆ ಹೇಗೆ ?

(ಗೊಂದಲ)

ಅಧ್ಯಕ್ಷರು.—ಕಾಂಗ್ರೆಸ್ ಸದಸ್ಯರಿಗೆ ೧ ತಾಸು ಅಲ್ಲ, ೨ ತಾಸು ಅವಕಾಶ ಕೊಟ್ಟಿದ್ದೇನೆ. ಮುಖ್ಯಮಂತ್ರಿಗಳು ಈಗ ಏನು ಹೇಳುತ್ತಾರೆ ಎಂಬುದನ್ನು ಕೇಳೋಣ. ಅವರ ಅಭಿಪ್ರಾಯವನ್ನೂ ಕೇಳೋಣ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅದೆಲ್ಲಾ ಸಾಧ್ಯವಾಗುವುದಿಲ್ಲ. ನೀವು ಟೈಮ್ ಕೊಡಲೇಬೇಕು. ನೀವು ಬೆಳಿಗ್ಗೆ ಒಪ್ಪಿದ್ದೀರಿ, ಈಗ ಮಾಡಿರುವುದು ಏನು ?

ಅಧ್ಯಕ್ಷರು.—ಅವಕಾಶ ಕೊಡಬೇಕೆಂದೇ ನಾನು ಈಗಾಗಲೇ ೨ ತಾಸು ಕೊಟ್ಟಿದ್ದೇನೆ. ಮುಖ್ಯಮಂತ್ರಿಗಳು ಈಗ ಏನು ಹೇಳುತ್ತಾರೆ ಎಂಬುದನ್ನೂ ಕೇಳೋಣ. ಅವರ ಅಭಿಪ್ರಾಯವನ್ನೂ ಕೇಳೋಣ. ಅವರ ಉತ್ತರ ಅಲ್ಲ, ಅಭಿಪ್ರಾಯವನ್ನು ಕೇಳುತ್ತೇನೆ.

(ಗೊಂದಲ)

೭.೦೦ ಪಿ. ಎಂ.

ಶ್ರೀ ಎಸ್. ಆರ್. ಬೊಮ್ಮಾಯಿ.—ಚರ್ಚೆಗೆ ಅವಕಾಶ ಕೊಡುವುದಕ್ಕೆ ಸರ್ಕಾರ ಕೂಡ ಸಿದ್ಧವಾಗಿದೆ. ಆದರೆ ಚರ್ಚೆಗೆ ತಾವು ಒಂದು ಕಾಲ ಮಿತಿ ಹಾಕಬೇಕಾಗುತ್ತದೆ. ಯಾವುದೇ ಒಂದು ಮಹತ್ವದ ವಿಚಾರ ಬಂದಾಗ ಅದಕ್ಕೆ ಸ್ವಲ್ಪ ಹೆಚ್ಚು ಸಮಯ ಕೊಡಬೇಕಾಗುತ್ತದೆ. ಅದೇ ರೀತಿ ಈಗ ಸುಮಾರು ಎರಡು ಗಂಟೆ ಚರ್ಚೆಯಾಗಿದೆ. ನೀವು ಒಂದು ಟೈಮ್ ನಿಗದಿ ಮಾಡಿ. ನಾನು ಇನ್ನೂ ಕೆಲವು ಕಾರ್ಯಕ್ರಮಗಳನ್ನು ಒಪ್ಪಿಕೊಂಡಿದ್ದೇನೆ. ಇದಕ್ಕೆ ಒಂದು ಕಾಲ ಮಿತಿ ಹಾಕಿ. ಬೇರೆ ಪಕ್ಷದವರಿಗೂ ಅವಕಾಶ ಕೊಡಿ. ನಮ್ಮ ಪಕ್ಷದಿಂದಲೂ ಒಂದಿಬ್ಬರು ಮಾತನಾಡಲಿ ಆದರೆ ಸುಮಾರು ೭ ಗಂಟೆಗೆ ಚರ್ಚೆ ಮತ್ತು ಉತ್ತರ ಎರಡೂ ಮುಗಿಯಬೇಕು. ನಾನು ಉತ್ತರ ಕೊಡಲು ೧೫ ನಿಮಿಷ ಸಾಕು.

ಅಧ್ಯಕ್ಷರು.—ಎಲ್ಲರು ೫ ನಿಮಿಷ ಮಾತ್ರ ಮಾತ್ರ ಮಾತನಾಡಿ.

ಶ್ರೀ ಕೆ. ಎಸ್. ನಾಗರತ್ನಮ್ಮ.—ನಾವು ಎಷ್ಟೋ ಸಾರಿ ಹತ್ತು ಗಂಟೆ ತನಕ ಕುಳಿತು ಕೊಂಡು ನಿಮಗೆ ಕೋ ಆಪರೇಷನ್ ಕೊಟ್ಟಿದ್ದೇವೆ. ಎರಡು ಗಂಟೆ ಒಂದು ಗಂಟೆ ಎಂದು ರೂಲ್ಸ್‌ನಲ್ಲಿ ಇದೆ. ರೂಲ್ಸ್ ನಾನು ಓದಿದ್ದೇನೆ.

ಅಧ್ಯಕ್ಷರು.—ರೂಲ್ಸ್ ಕಲಿತಿದ್ದು ನಾನು ನಿಮ್ಮಿಂದ. ನೀವು ಇಲ್ಲಿದ್ದಾಗ ನಾನು ಸ್ಟೂಡೆಂಟ್ ಆಗಿ ಕಲಿತಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಇವತ್ತು ನಿಲುವಳಿ ಸೂಚನೆ ಮೂಲಕ ದಿನಾಂಕ ೧೧ನೇ ತಾರೀಖು ಉದಯಿಸಿದಂತಹ ಜನತಾದಳದ ಪಕ್ಷ ಉದಯಿಸಿದ ಸಂದರ್ಭದಲ್ಲಿ ಸರ್ಕಾರ ತನ್ನ ಅಧಿಕಾರ ದುರುಪಯೋಗ ಮಾಡಿಕೊಂಡಿದೆ. ಮತ್ತೆ ಜನತಾ ದಳ ಉದಯಿಸಿದ ಸಂದರ್ಭದಲ್ಲಿ ಆದ ಪರಿಣಾಮಗಳ ಬಗ್ಗೆ ನಿಲುವಳಿ ಸೂಚನೆ ಮೂಲಕ ಇಲ್ಲಿ ಚರ್ಚೆಯಾಗುತ್ತಿದೆ. ಈ ಬಗ್ಗೆ ಅನೇಕ ವಿಷಯಗಳನ್ನು ವಿರೋಧಪಕ್ಷದ ನಾಯಕರು ಸದನದ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ ಯಾವ ಒಂದು ಜನತಾ ದಳ ಉದಯವಾಯಿತು ಅದರಿಂದ ಈ ರಾಜ್ಯದ ಈ ದೇಶದ ಜನತೆಯ ಕಲ್ಯಾಣವಾಗುವುದಾದರೆ ಖಂಡಿತವಾಗಿ ನಾನು ಸ್ವಾಗತ ಮಾಡುತ್ತೇನೆ. ಆದರೆ ನನ್ನ ಮನಸ್ಸಿನಲ್ಲಿರುವ ಖೇದವೇನೆಂದರೆ ಲೋಕನಾಯಕ ಜಯಪ್ರಕಾಶ್ ನಾರಾಯಣ್‌ರವರು ಬದುಕಿದ್ದಂತಹ ಸಂದರ್ಭದಲ್ಲಿ ಆ ಮಹಾನ್ನಾಯಕರು ಮಾಡಿದ ಹೋರಾಟದ ಪರಿಣಾಮವಾಗಿ ಆಗ ಜನತಾ ಪಕ್ಷ ಉದಯವಾಯಿತು. ಆ ಸಮಯದಲ್ಲಿ ಒಂದು ದಿವಸ ನಾನು ಅವರ ಜೊತೆಯಲ್ಲಿ ಇರುವ ಸಂದರ್ಭ ಬಂತು. ಆ ಒಂದು ಹೋರಾಟದ ಸಮಯದಲ್ಲಿ ಅವರು ಜೈಲಿಗೆ ಹೋದಂತಹ ವ್ಯಕ್ತಿ ಅಂತಹ ಪುಣ್ಯಾತ್ಮನ ಹೋರಾಟದ ಪರಿಣಾಮವಾಗಿ ಜನತಾ ಪಕ್ಷ ಉದಯವಾಯಿತು. ಈ ಜನತಾ ಪಕ್ಷ ಜನರ ಕಲ್ಯಾಣವನ್ನು ಜನತಾ ಪಕ್ಷದ ಸರ್ಕಾರಗಳು ಮಾಡಿದ್ದನ್ನು ಅವರು ತಮ್ಮ ಆತ್ಮ ನಿರೀಕ್ಷೆ ಮಾಡುವಂತಹ ಸಂದರ್ಭ ಸಹ ಆಗಿದೆ ಎಂದು ನಾನು ಭಾವಿಸುತ್ತೇನೆ. ಲೋಕನಾಯಕ ಜಯಪ್ರಕಾಶ್ ನಾರಾಯಣ್‌ರವರು ಬದುಕಿರುವಾಗ ಜನತಾ ಪಕ್ಷ ಉದಯವಾಯಿತು ಅದೇ ಲೋಕನಾಯಕ ಜಯಪ್ರಕಾಶ್ ನಾರಾಯಣ್‌ರವರ ಹುಟ್ಟಿದ ದಿನದಂದು ಜನತಾ ದಳ ಉದಯವಾಗಿದೆ. ಪ್ರಾರಂಭದಲ್ಲಿ ನಾನು ಹೇಳಿದ್ದೆ ಲೋಕನಾಯಕ ಜಯಪ್ರಕಾಶ್ ನಾರಾಯಣರ ಮನಸ್ಸಿನಲ್ಲಿ ಏನು ಭಾವನೆಗಳು ಇದ್ದವು, ಅವರ ಅನಿಸಿಕೆಗಳು ಏನಿದ್ದವು ಅವು ಜನತಾ ಪಕ್ಷದ ಸರ್ಕಾರಗಳು ಈಡೇರಿಸಲಿಲ್ಲ. ಅಧಿಕಾರದಲ್ಲಿದ್ದ ಪಕ್ಷ ಪ್ರಾಮಾಣಿಕವಾಗಿ ಈ ರಾಜ್ಯದ ಜನತೆಯ

ಕಲ್ಯಾಣ ಮಾಡಿದ್ದರೆ ಆ ಸಂದರ್ಭದಲ್ಲಿ ಒಳ್ಳೆಯದಾಗುತ್ತಿತ್ತು. ಅದು ಆಗಲಿಲ್ಲ. ನಿಮ್ಮಲ್ಲಿ ಯಾವುದೇ ತಪ್ಪುನೆಪ್ಪುಗಳು ಆಗಿದ್ದರೂ ಅವುಗಳೆಲ್ಲವನ್ನು ಸರಿಪಡಿಸಿಕೊಂಡು ಅನೇಕ ಕಲ್ಯಾಣಕರವಾದ ಪ್ರಯೋಗಗಳನ್ನು ಮಾಡಬಹುದಾಗಿತ್ತು. ಆ ಪ್ರಯೋಗ ಮಾಡಿದ್ದರೆ ನಿಜವಾಗಿಯೂ ನಾನು ಸ್ವಾಗತ ಮಾಡುತ್ತಿದ್ದೆ ಅದು ಆಗಲಿಲ್ಲ. ಅಪರ ಅಂದರೆ ಲೋಕನಾಯಕ ಜಯಪ್ರಕಾಶ್ ನಾರಾಯಣರ ಉದ್ದೇಶ ಸಫಲ ಮಾಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ನಿಮ್ಮ ಕಡೆಯಿಂದ ಆಗಬೇಕಾಗಿತ್ತು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಎರಡನೆಯದಾಗಿ ಅಧಿಕಾರ ದುರುಪಯೋಗದ ಬಗ್ಗೆ ಚರ್ಚೆ ಆಗುತ್ತಿದೆ. ಯಾವುದೇ ಒಂದು ರಾಜಕೀಯ ಪಕ್ಷದ ಮುಖಂಡರುಗಳು ಅಧಿಕಾರಸ್ಥ ಜನರು ನಮ್ಮಿಂದ ಅಧಿಕಾರ ದುರುಪಯೋಗ ಆಗಿಲ್ಲವೆಂದು ಹೇಳುವ ಧೈರ್ಯ ಮಾಡುವುದಕ್ಕೆ ಸಾಧ್ಯವಿಲ್ಲ. ಅವರು ಅಧಿಕಾರದಲ್ಲಿ ಇದ್ದಂತಹ ಸಂದರ್ಭದಲ್ಲಿ ಹೆಚ್ಚು ಅಧಿಕಾರ ದುರುಪಯೋಗವಾಗಿದ್ದರೆ ಈಗ ಸ್ವಲ್ಪ ಅಧಿಕಾರ ದುರುಪಯೋಗವಾಗಿದೆ ಎಂದು ಹೇಳಬಹುದು. ದುರುಪಯೋಗ ಆಗಿಲ್ಲವೆಂದು ಯಾರೂ ಹೇಳುವುದಕ್ಕಾಗುವುದಿಲ್ಲ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಬಿ. ಡಿ. ಎ. ಮನೆಗಳನ್ನು ಬಾಡಿಗೆಗೆ ಕೊಟ್ಟಿದ್ದೀರಿ. ಕಾನೂನು ಬದ್ಧವಾಗಿಯೇ ಕೊಟ್ಟಿದ್ದೀರಿ ಎಂದರೂ, ಬೇರೆ ಯಾವುದಾದರೂ ರಾಜಕೀಯ ಪಕ್ಷ ಇದೇ ರೀತಿ ಕಾರ್ಯಕ್ರಮ ಮಾಡಬೇಕೆಂದಾಗ, ಇದೇ ರೀತಿ ಬಿ.ಡಿ.ಎ. ಮನೆಗಳನ್ನು, ಕಾನೂನು ರೀತಿಯಾಗಿದೆಯೋ ಅನುಮತಿ ಕೊಟ್ಟು ಮನೆಗಳನ್ನು ಬಾಡಿಗೆಗೆ ಕೊಡುತ್ತೀರಾ ? ಈ ಸೌಜನ್ಯ ನಿಮಗೆ ಇದೆಯೇ ? ಬೇರೆ ಪಕ್ಷಗಳು ಕಾರ್ಯಕ್ರಮ ಮಾಡಿದಾಗ ಈ ರೀತಿಯ ಈ ಸೌಜನ್ಯವನ್ನು ತೋರಿಸುವ ಬುದ್ಧಿಯನ್ನು ದೇವರು ನಿಮಗೆ ಕೊಟ್ಟರೆ ಸಾಕು. ಬೆಳಗ್ಗೆ ನಡೆದಂಥ ಒಂದು ಘಟನೆಯನ್ನು ಇಲ್ಲಿ ಹೇಳುತ್ತೇನೆ. ಅದಕ್ಕೂ ಇದಕ್ಕೂ ಸಂಬಂಧ ಇಲ್ಲದಿರಬಹುದು. ನಮ್ಮ ಗುತ್ತಿಗೆ ಶಿಕ್ಷಕರು ಅಮರಣಾಂತ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಇವತ್ತು ಬೆಳಗ್ಗೆ ಎಂಟೂವರೆ ಒಂಭತ್ತು ಗಂಟೆಗೆ ನಾನು ನಮ್ಮ ಮಾನ್ಯ ಶಂಕರಮೂರ್ತಿಯವರು ಅಲ್ಲಿಗೆ ಹೋಗಿದ್ದೆವು. ಅಲ್ಲಿ ದೊಡ್ಡಹನುಮಯ್ಯ ಎಂಬ ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಎಂಟು ಹತ್ತು ಜನ ಶಿಕ್ಷಕರ ಜೊತೆ ಬಡಿದಾಡುತ್ತಿದ್ದ. ಗುತ್ತಿಗೆ ಶಿಕ್ಷಕರು ಮೈಕ್‌ನಲ್ಲಿ ಯಾರೋ ಸುಸ್ತಾಗಿದ್ದಾರೆ, ನೀರು ತೆಗೆದುಕೊಂಡು ಬನ್ನಿ ಎಂಬ ಅನೌನ್ಸ್ ಮಾಡುತ್ತಿದ್ದರು, ಯಾರದೋ ವಾಚ್ ತೆಗೆದುಕೊಂಡು ಹೋಗಿ ಕೊಡಬೇಕೆಂದು ಅನೌನ್ಸ್ ಮಾಡುತ್ತಿದ್ದರು. ಮೈಕ್‌ಗೆ ಅನುಮತಿ ಕೊಟ್ಟಿಲ್ಲವೆಂದು ಆ ಪೋಲೀಸ್ ಕಾನ್‌ಸ್ಟೇಬಲ್ ಅಡ್ಡಿಯಾಗಿ ನಿಂತಿದ್ದ. ಮೈಕ್ ಪರ್ಮಿಷನ್‌ಗೆ ಬರೆದುಕೊಟ್ಟಿರಬಹುದು, ಇನ್ನೂ ಪರ್ಮಿಷನ್ ಕೊಡದೇ ಇರಬಹುದು, ಇವರು ಆರೋಗ್ಯ ಸರಿ ಇಲ್ಲದೆ ಸಾಯುತ್ತಿದ್ದಾರೆ, ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಡಾಕ್ಟರ್ ಬಗ್ಗೆ ಹೇಳುತ್ತಿದ್ದಾರೆ. ಮೂರು ನಾಲ್ಕು ಜನ ಮೈಕ್ ಉಪಯೋಗಿಸಿಕೊಂಡರೆ ಅದೇನೂ ದೊಡ್ಡದಲ್ಲ, ಸೌಜನ್ಯಕ್ಕಾದರೂ ಸರಕಾರ ಇದಕ್ಕೆ ಅನುಮತಿ ಕೊಡಬೇಕು. ಕೊಟ್ಟಿಲ್ಲ ಎಂದರೆ ಇದೇನೂ ದೊಡ್ಡ ಕಾನೂನಿನ ತೊಡಕಲ್ಲ ಎಂದು ನಾನು ಮಾತನಾಡಿದೆ. ಇಲ್ಲ, ನಮ್ಮ ಅಧಿಕಾರಿಗಳು ಹೇಳಿದ್ದಾರೆ ಎಂದ, ಯಾರಪ್ಪ ನಿಮ್ಮ ಅಧಿಕಾರಿಗಳು ಎಂದೆ. ಅಷ್ಟರಲ್ಲಿ ಒಂದು ಜೀಪ್ ಬಂತು, ನಟರಾಜ್ ಎಂಬ ಪೋಲೀಸ್ ಆಫೀಸರ್ ಬಂದರು. ನಾನು ಹೇಳಿದೆ ಏತಕ್ಕೆ ಸ್ವಾಮಿ ಈ ರೀತಿ ಕಿರುಕುಳ ಕೊಡುತ್ತೀರಿ, ಇರಬಹುದು, ಕಾನೂನು ಪ್ರಕಾರ ಅವರು ಮೈಕ್ ಪರ್ಮಿಷನ್‌ಗೆ ಅಪ್ಲೈ ಮಾಡಿರುತ್ತಾರೆ, ಪರ್ಮಿಷನ್ ಕೊಡಬಹುದು, ಅವರೇನೂ ಗಲಾಟೆ ಮಾಡುತ್ತಿಲ್ಲ ಗಾಂಧೀ ತತ್ವದ ಪ್ರಕಾರ ತಮ್ಮ ಬೇಡಿಕೆಗಳ ಈಡೇರಿಕೆಗೆ ಪ್ರಾಮಾಣಿಕವಾಗಿ ಧರಣಿ ಸತ್ಯಾಗ್ರಹ ಮಾಡುತ್ತಿದ್ದಾರೆ. ಇಷ್ಟು ಸೌಜನ್ಯ ತೋರಿಸುವುದು ಬೇಡವೇ ಎಂದರೆ. ಅವರು ನಡೆದುಕೊಂಡಂತ ರೀತಿ, ನನ್ನ ಜೊತೆಗೆ ಹಾಗೂ ಶಂಕರ ಮೂರ್ತಿಯವರ ಜೊತೆಗೆ ನಡೆದುಕೊಂಡಂಥ ರೀತಿ ಏನಿದೆ ಅದನ್ನು ಇಲ್ಲಿ ಚರ್ಚೆಮಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಜನತಾ ಮೇಳದ ಒಂದು ಕಾರ್ಯಕ್ರಮಕ್ಕೆ ೧೬ ಟ್ಯಾಂಕ್‌ಗಳಲ್ಲಿ ಅಧಿಕಾರಿಗಳನ್ನು ಉಪಯೋಗಿಸಿಕೊಂಡು ನೀರನ್ನು ಸರಬರಾಜು ಮಾಡಿದಿರಿ. ನೀವು ಬಾಡಿಗೆಗೆ ಅದನ್ನು ಕೊಟ್ಟಿರಬಹುದು. ಅದು ಬೇರೆ. ಆದರೆ ಇವತ್ತು ಮೂರು ನಾಲ್ಕು ಸಾವಿರ ಜನ ಸಾಯುತ್ತಿರುವ ಸಂದರ್ಭದಲ್ಲಿ ಒಂದು ಟ್ಯಾಂಕರ್ ಇಟ್ಟು ಕುಡಿಯುವ ನೀರಿನ ವ್ಯವಸ್ಥೆ ಮಾಡುವ ಸೌಜನ್ಯವನ್ನು ನೀವು ತೋರಿಸಲಿಲ್ಲ. ನಾನು ಹೇಳುತ್ತಿರುವುದು ಇದಕ್ಕೆ ಸಂಬಂಧ ಇಲ್ಲ, ಅದಕ್ಕೂ ಇದಕ್ಕೂ ಯಾವ ರೀತಿ ಸಂಬಂಧ ಕಲ್ಪಿಸುತ್ತೀರಿ ಎಂದು ಕೇಳಬಹುದು. ಅಲ್ಲಿ ಬಂದಂಥ ಪಕ್ಷದ ಕಾರ್ಯಕರ್ತರಿಗೆ ಕುಡಿಯುವ ನೀರಿನ ಅಗತ್ಯ ಇದೆ ಊಟದ ಅಗತ್ಯ ಇದೆ ಎಂದು ಯೋಚನೆ ಮಾಡುವಂತಹ ನೀವು, ತಮ್ಮ ನ್ಯಾಯವಾದ ಬೇಡಿಕೆಯನ್ನು ಈಡೇರಿಸಿಕೊಳ್ಳುವುದಕ್ಕೆ ಬಂದಂಥ ಶಿಕ್ಷಕರಿಗೆ, ಇಲ್ಲಿ ಚರ್ಚೆಯಾದರೂ ಕೂಡಾ

ಒಬ್ಬ ಡಾಕ್ಟರನ್ನು ಕಳುಹಿಸಲಿಲ್ಲ, ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲಿಲ್ಲ. ಈ ನಿಮಿಷಕ್ಕೂ ಅಲ್ಲಿ ಮಾಡಿಲ್ಲ. ಇದು ಇರುವ ಸ್ಥಿತಿ. ಆದರೆ ಇದು ನಿಮಗೆ ಗೌರವ ತರುವ ಸಂಗತಿ ಅಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕಾನೂನು ದುರುಪಯೋಗದ ಬಗೆ ಅನೇಕ ವಿಷಯಗಳನ್ನು ಹೇಳುವಂತಹದ್ದು ಇದೆ. ವಿರೋಧ ಪಕ್ಷದಲ್ಲಿ ಕುಳಿತಾಗ ಕೆಲವು ಸಂಗತಿಗಳನ್ನು ಅನಿವಾರ್ಯವಾಗಿ ಹೇಳಲೇ ಬೇಕಾಗುತ್ತದೆ. ಕೃಷ್ಣಾದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಪತ್ರಿಕಾ ಗೋಷ್ಠಿಯನ್ನು ಮಾಡಿದರು. ೧೦ನೇ ತಾರೀಖು ಮಾಡಿದರು. ಮುಖ್ಯ ಮಂತ್ರಿಗಳ ಪಕ್ಕದಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರೂ ಇದ್ದರು ೧೧ನೇ ತಾರೀಖಿನ ಕಾರ್ಯಕ್ರಮಕ್ಕೆ ಯಾವ ರೀತಿ ವ್ಯವಸ್ಥೆ ಮಾಡಿದ್ದೇವೆ ಎಂಬುದರ ಬಗ್ಗೆ ಪತ್ರಕರ್ತರಿಗೆ ಎಕ್ಸ್‌ಪ್ಲೈನ್ ಮಾಡಿದರು. ಇದು ಆದಮೇಲೆ ಹೊರಗಡೆ ಬಂದ ತಕ್ಷಣ ಬಿ.ಡಿ.ಎ. ಕಾರ್‌ಗಳಲ್ಲಿ ಅಲ್ಲಿ ಫೀಲ್ಡ್‌ನಲ್ಲಿ ಎಷ್ಟೆಲ್ಲಾ ಅನುಕೂಲತೆಗಳನ್ನು ಮಾಡಿದ್ದೇವೆ ಎಂಬುದನ್ನು ತೋರಿಸುವುದಕ್ಕೋಸ್ಕರ ಪತ್ರಕರ್ತರನ್ನು ಕರೆದುಕೊಂಡು ಹೋದರು. ಬಹುಶ: ಪತ್ರಕರ್ತರು ಹಾಗೂ ಗ್ಯಾಲರಿಯಲ್ಲಿ ಕುಳಿತಿರುವಂತಹ ಅಧಿಕಾರಿಗಳು, ಇಷ್ಟೊಂದು ಅಧಿಕಾರ ದುರುಪಯೋಗವಾಗುತ್ತಿದ್ದರೂ ಸಹ, ಇಲ್ಲಿ ಅಷ್ಟೊಂದು ಅರ್ಥಗರ್ಭಿತ ಚರ್ಚೆ ಆಗುತ್ತಿಲ್ಲ ಎಂದು ನಗುತ್ತಿರಬಹುದು. ನಮ್ಮ ಚರ್ಚೆಯನ್ನು ನೋಡಿ ಅವರು ನಗುತ್ತಿರಬಹುದು. ಆದರೆ ಒಂದು ಮಾತೇ ಯಾವುದೇ ಸರಕಾರಅಧಿಕಾರದಲ್ಲಿ ಇದ್ದರೂ ಸಹ ಇಂತಹ ಮೇಳಗಳನ್ನು ಮಾಡಿದಾಗ, ಕಾನೂನಿನ ಚೌಕಟ್ಟಿನಲ್ಲಿ ಕೆಲವು ಉಪಯೋಗಗಳನ್ನು ನೀವು ಏನು ಮಾಡಿಕೊಳ್ಳುತ್ತೀರಿ, ಅದೇರೀತಿ ಬೇರೆಯವರು ಕಾರ್ಯಕ್ರಮ ಮಾಡುವ ಸಂದರ್ಭದಲ್ಲೂ ಸಹ ಸೌಜನ್ಯಕ್ಕಾದರೂ ಅನುಕೂಲ ಮಾಡಿಕೊಡುವ ಧಾರಾಳತನ ನಿಮ್ಮಲ್ಲಿ ಇರಬೇಕು. ಆದರೆ ಅದು ಕಾಣುತ್ತಿಲ್ಲ. ಒಂದು ಸಾರ್ವಜನಿಕ ಸಭೆಯನ್ನು ಮಾಡಬೇಕೆಂದು ವಿರೋಧ ಪಕ್ಷದವರು ಹೋದರೆ, ಒಂದು ಮೈದಾನ ಕೊಡುವುದಕ್ಕೆ, ಮೈಕ್‌ಗೆ ಪರ್ಮಿಷನ್ ಕೊಡುವುದಕ್ಕೆ ಅಸಾಧ್ಯ ಎಂದು ಅಧಿಕಾರಿಗಳು ಚರ್ಚೆ ಮಾಡುತ್ತಾರೆ. ಆದರೆ ಇಲ್ಲಿ ನಿಮಗೆ ಅನುಕೂಲವಾಗುವಂತೆ ಯಾವ ರೀತಿ ಉಪಯೋಗ ಮಾಡಿಕೊಂಡಿರಿ ಅದೇ ಧಾರಳತನ ಎಲ್ಲಾಕಡೆ ಇರಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾವು ಇದರ ಬಗ್ಗೆ ತುಂಬಾ ಇಕ್ಕಟ್ಟಿನ ಸ್ಥಿತಿಯಲ್ಲಿ ಇದ್ದೇವೆ. ಬಹಳಷ್ಟು ಅಧಿಕಾರ ದುರುಪಯೋಗ ಮಾಡಿಕೊಂಡಿರುವ ಜನ ಈ ಕಡೆ ಕುಳಿತಿದ್ದಾರೆ. ಅಧಿಕಾರ ದುರುಪಯೋಗ ಮಾಡಿಕೊಳ್ಳುವವರ ಜೊತೆಗೆ ಇರದೇ ಈ ಕಡೆ ಬಂದು ಸ್ವಲ್ಪ ತಿದ್ದಿಕೊಳ್ಳೋಣ ಎಂದು ಪ್ರಯತ್ನ ಮಾಡಿ ಆಗದೇ ಕುಳಿತಿರುವ ಜನ ಆ ಕಡೆ ಕುಳಿತಿದ್ದಾರೆ. ಇವರ ಮಧ್ಯೆ ಇದ್ದು ಮಾತನಾಡುವುದಕ್ಕೆ ನನಗೆ ಕಷ್ಟವಾಗುತ್ತದೆ. ಆದರೆ ಒಂದೇ ಒಂದು ವಿನಂತಿ ಯಾವ ಅಪೇಕ್ಷೆಗಳನ್ನು ಇಟ್ಟುಕೊಂಡು ಈ ದೇಶದ, ಈ ರಾಜ್ಯದ ಜನ ನಿಮ್ಮನ್ನು ಆರಿಸಿದ್ದಾರೋ ಅದನ್ನು ಈಡೇರಿಸದೇ, ಪರಸ್ಪರ ಬಡಿದಾಡುವ ವಾತಾವರಣ ಯಾರಿಗೂ ಗೌರವ ತರುವಂತಹದಲ್ಲ, ಇದರ ದುಷ್ಪರಿಣಾಮ ಈ ರಾಜ್ಯದ ಈ ದೇಶದ ಜನತೆಯ ಮೇಲೆ ಆಗುತ್ತದೆ. ಇನ್ನೊಂದು ಬಹಳ ಪ್ರಮುಖವಾದಂಥ ವಿಚಾರವನ್ನು ಮಾನ್ಯ ಮೊಯಿಲಿಯವರು ಹೇಳಿದರು. ನಿಜವಾಗಲೂ ಕಾನೂನಿನಲ್ಲಿ ಏನಿದೆಯೋ ಗೊತ್ತಿಲ್ಲ. ಜನತಾ ಪಕ್ಷ ತನ್ನದೇ ಆದಂಥ ಒಂದು ವಿಚಾರವನ್ನು, ಪ್ರಣಾಳಿಕೆಯನ್ನು ಇಟ್ಟುಕೊಂಡು ಓಟು ತೆಗೆದುಕೊಂಡು ಅಧಿಕಾರಕ್ಕೆ ಬಂದಮೇಲೆ, ಲೋಕನಾಯಕ ಜಯಪ್ರಕಾಶನಾರಾಯಣರ ಅವತ್ತಿನ ತತ್ವ ನೀತಿ ಸಿದ್ಧಾಂತಕ್ಕೆ ಜನ ಓಟು ಕೊಟ್ಟು ಅಧಿಕಾರಕ್ಕೆ ಕಳುಹಿಸಿದ ಮೇಲೆ; ಇವತ್ತು ಜನತಾದಳ ಆಗಿ ನಾಲ್ಕು ಪಕ್ಷಗಳು ಒಂದಾದ ಸಂದರ್ಭದಲ್ಲಿ ಸಹಜವಾಗಿಯೇ ಈ ಪ್ರಶ್ನೆ ಉದ್ಭವವಾಗುತ್ತದೆ. ಈಗ ಇದು ಜನತಾ ದಳವೋ. ಜನತಾ ಪಕ್ಷವೋ ? ಆಕಸ್ಮಾತ್ ಜನತಾ ದಳ ಉದಯವಾಗಿಲ್ಲ, ಅದು ಇವತ್ತು ಇನ್ನೂ ಪ್ರಾರಂಭವಾಗಿದ್ದು, ಇವತ್ತುನಾಳೆ ಆಗಬಹುದು ಎಂದರೂ ಇದರ ಹೊಸ ಪ್ರಣಾಳಿಕೆಯನ್ನು. ಹೊಸ ವಿಚಾರಗಳನ್ನು ರಾಜ್ಯದ ಜನತೆ ಒಪ್ಪಿಕೊಳ್ಳುತ್ತಾರೆಯೇ ಇದು ಜನತೆಗೆ ಒಪ್ಪಿಗೆಆಗಿದೆಯೇ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಸಹಜವಾಗಿ ಇದಕ್ಕೆ ಏನು ಮಾಡಬೇಕು, ಏನು ಬೇಡ ಅದನ್ನು ನೀವು ಯೋಚನೆ ಮಾಡಬೇಕು. ಆದರೆ ಇಲ್ಲಿ ವಿರೋಧ ಪಕ್ಷದಲ್ಲಿ ಕುಳಿತಿರುವಂತಹವರು ನಮ್ಮ ಕರ್ತವ್ಯ ಇದೆ ಎಂದು ಕೇಳಬೇಕು. ಈ ರೀತಿ ಬದಲಾವಣೆ ಆದಂಥ ಸಂದರ್ಭದಲ್ಲಿ ನಿಮ್ಮ ನಿಲವು ಏನು, ಜನತಾದಳ ಉದಯ ಆಗಿದೆಯೋ ಇಲ್ಲವೋ, ಆಗಿದ್ದರೆ ಹೊಸದಾಗಿ ನೀವು ಚುನಾವಣೆ ಎದುರಿಸಬೇಕೇ, ಜನತೆಯ ಅಭಿಪ್ರಾಯ ತೆಗೆದುಕೊಳ್ಳಬೇಕೇ ಇದು ಸಹಜವಾಗಿ ಬರುವ ಪ್ರಶ್ನೆ.

ಜನತಾದಳ ಆಗಿರುವ ಈ ಸಂದರ್ಭದಲ್ಲಿ ಇನ್ನು ಮುಂದಾದರೂ ಜನತೆಯ ಸೇವೆಯನ್ನು ಮಾಡುವ ಕಡೆ ಗಮನ ಹರಿಸಬೇಕು. ಅಧಿಕಾರದಲ್ಲಿರುವವರು ಅಧಿಕಾರವನ್ನು ದುರುಪಯೋಗ ಮಾಡಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ, ಜನತಾ ಸರ್ಕಾರ ಮಾಡಿರುವ ಅಧಿಕಾರದ ದುರುಪಯೋಗದ ಬಗ್ಗೆ ಕಾಂಗ್ರೆಸ್‌ನವರು ಮಾತನಾಡುವ ನೈತಿಕ ಹಕ್ಕಿಲ್ಲ ಏಕೆಂದರೆ, ಅವರ ಸರ್ಕಾರ ಇದ್ದಾಗ ಅವರು ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿದ್ದಾರೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮೊದಲು ನೀವೂ ಜನತಾ ಪಾರ್ಟಿಯೊಳಗೇ ಇದ್ದವರು. ಈಗ ಬಿ ಜೆ.ಪಿ. ಪಕ್ಷದವರಾಗಿಬಿಟ್ಟಿದ್ದೀರಿ.

ಶ್ರೀ ಬಿ. ಎಸ್. ಯಡಿಯೂರಪ್ಪ.— ನನ್ನ ಅಭಿಪ್ರಾಯವನ್ನು ನಾನು ಹೇಳಿದ್ದೇನೆ ಅಷ್ಟೆ.

ಶ್ರೀ ಎಂ.ಎಸ್. ಪಾಟೀಲ್.— ನೀವು ಯಾವ ರೀತಿ ದುರುಪಯೋಗ ಮಾಡಿದ್ದೀರಿ ಎಂಬುದನ್ನು ನಾವು ಹೇಳಬೇಕಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುವ ಪ್ರಾರಂಭದಲ್ಲೇ ಹೇಳಿದ್ದೇನೆ. ಅಧಿಕಾರದಲ್ಲಿರುವ ಸರ್ಕಾರ ಸರ್ಕಾರಿ ಯಂತ್ರವನ್ನು ದುರುಪಯೋಗ ಮಾಡಿಕೊಂಡಿರುತ್ತದೆ. ಇವರು ಸ್ವಲ್ಪ ಕಡಿಮೆ ಮಾಡಿರಬಹುದು. ಹಿಂದೆ ಇದ್ದವರು ಸ್ವಲ್ಪ ಹೆಚ್ಚು ಮಾಡಿರಬಹುದು. ಯಾವುದೇ ಸರ್ಕಾರ ಇರಲಿ, ನಾವು ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಒಬ್ಬರು ಜಾಸ್ತಿ ಮಾಡಿರಬಹುದು, ಒಬ್ಬರು ಕಡಿಮೆ ಮಾಡಿರಬಹುದು.

ಅಧ್ಯಕ್ಷರು.— ಬೇಗ ಮುಕ್ತಾಯ ಮಾಡ್ರಿ.

(ಕಾಂಗ್ರೆಸ್ ಪಕ್ಷದ ಅನೇಕ ಮಾನ್ಯ ಸದಸ್ಯರುಗಳು ಎದ್ದು ನಿಂತು ಮಾತನಾಡುತ್ತಿದ್ದರು)

(ಗೊಂದಲ)

ಶ್ರೀ ಎಂ. ಎಸ್. ಪಾಟೀಲ್.— ನೀವೇನು ಹರಿಶ್ಚಂದ್ರ ಎಂದು ತಿಳಿದುಕೊಂಡಿದ್ದೀರಾ? ನೀವೂ ಏನೇನು ಮಾಡಿದ್ದೀರಿ ಎಂದು ನಾವು ಹೇಳಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ.— ಅಧಿಕಾರದಲ್ಲಿರುವವರು ದುರುಪಯೋಗ ಮಾಡಿಕೊಳ್ಳುವುದು ಸ್ವಾಭಾವಿಕವೆಂದು ನಾನು ಹೇಳಿದ್ದೇನೆಯೇ ಹೊರತು ಬೇರೆ ಏನೂ ಹೇಳಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಜನತಾ ಸರ್ಕಾರ ಮಾಡಿರುವ ಅಧಿಕಾರದ ದುರುಪಯೋಗದ ಬಗ್ಗೆ ಮಾತನಾಡುವುದಕ್ಕೆ ಕಾಂಗ್ರೆಸ್‌ನವರಿಗೆ ನೈತಿಕ ಹಕ್ಕಿಲ್ಲವೆಂದು ಹೇಳಿರುವುದರಿಂದ ಈ ಪ್ರಶ್ನೆ ಬಂದಿದೆ. ಮಾತನಾಡುವುದಕ್ಕೆ ಮುಂಚೆ ಸ್ವಲ್ಪ ಯೋಚನೆ ಮಾಡಿ ಮಾತನಾಡಿ.

ಅಧ್ಯಕ್ಷರು.— ಬೇಗ ಮುಕ್ತಾಯ ಮಾಡ್ರಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಯಾವುದೇ ಪಕ್ಷ ಅಧಿಕಾರದಲ್ಲಿದ್ದರೂ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳದೇ ಯಾರೂ ಇಲ್ಲ. ಕೆಲವರು ಜಾಸ್ತಿ ದುರುಪಯೋಗ ಮಾಡಿಕೊಳ್ಳಬಹುದು. ಕೆಲವರು ಕಡಿಮೆ ದುರುಪಯೋಗ ಮಾಡಿಕೊಳ್ಳಬಹುದು.

ಶ್ರೀ ಆರ್. ರಾಮಯ್ಯ.— ಅಡ್ಡಗೋಡೆ ಮೇಲೆ ದೀಪ ಇಟ್ಟ ಹಾಗೆ ಏಕೆ ಮಾತನಾಡುತ್ತೀರಿ? ನೇರವಾಗಿ ಹೇಳಿ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.— ಈ ಸಮಯದಲ್ಲಿ ಯಾವ ಒಂದು ಜನತಾದಳ ಉದಯವಾಗಿದೆಯೋ ಅದು ಜನತೆಯ ಅಪೇಕ್ಷೆಯಂತೆ ಕೆಲಸ ಮಾಡುವಂತಾಗಲೆಂದು ಈ ಸಂದರ್ಭದಲ್ಲಿ ಹೇಳಿ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.— ಮಾನ್ಯ ಬಸವಲಿಂಗಪ್ಪನವರು ಮಾತನಾಡಿ.

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಅಧ್ಯಕ್ಷರೇ ಮೊನ್ನೆ ೧೧ನೇ ತಾರೀಕು ಜನತಾದಳ ಪಕ್ಷವನ್ನು ಸೃಷ್ಟಿ ಮಾಡಿರುವ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಮತ್ತು ಇದರ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಲಾಗಿದೆ, ನಾನು ಪುನ; ಅದೇ ಮಾತುಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಆ ಸಭೆಯಲ್ಲಿ ಸೇರಿರತಕ್ಕ ಜನ ಏನು ಮಾಡಿದರು ಎಂಬ ಬಗ್ಗೆ ಕೇಳುವ ಜವಾಬ್ದಾರಿ ನಮಗಿಲ್ಲವೆಂದು ಸುಮ್ಮನೆ ಕೈಕಟ್ಟಿ ಕುಳಿತಿರುವುದಕ್ಕಾಗುವುದಿಲ್ಲ, ರಾಷ್ಟ್ರದಲ್ಲಿ ಪ್ರಜಾಪ್ರಭುತ್ವ ಇದೆ, ರಾಜಕೀಯ ಪಕ್ಷಗಳು ಇವೆ. ರಾಜಕೀಯ ಪಕ್ಷಗಳು ಬರುತ್ತವೆ, ಹೋಗುತ್ತವೆ. ಅದರ ಬಗ್ಗೆ ನಿಮ್ಮ ಕೈವಾಡ ಏನು ಎನ್ನತಕ್ಕ ಪ್ರಶ್ನೆಗೆ ನಾನು ಹೋಗುವುದಿಲ್ಲ. ಆದರೆ, ರಾಜಕೀಯ ಪಕ್ಷಗಳು ಉದಯವಾದಾಗ ಅವು ಯಾವ ರೀತಿ ಉದಯವಾದವು, ಯಾವ ಹಿನ್ನೆಲೆಯಲ್ಲಿ ಉದಯವಾದವು ಎನ್ನುವ ಬಗ್ಗೆ ನಾವು ಯೋಚನೆ ಮಾಡಲೇ ಬೇಕು. ಒಂದು ರಾಜಕೀಯ ಪಕ್ಷ ಉದಯವಾದಾಗ ಯಾವ ರೀತಿಯಲ್ಲಿ ಉದಯವಾಯಿತು ಯಾವ ಒಂದು ಹಿನ್ನೆಲೆಯಲ್ಲಿ ಉದಯವಾಯಿತು ಎನ್ನತಕ್ಕಂಥಾದ್ದರ ಬಗ್ಗೆ ಯೋಚನೆ ಮಾಡಬೇಕು.

ಇವೊತ್ತಿನ ದಿವಸನಾವುನಾಲ್ಕು ಪಕ್ಷಗಳು ಸೇರಿದ್ದು ಒಂದು ಪಕ್ಷರಚನೆಮಾಡಿಕೊಂಡಿದ್ದಾರೆ. ಅವರುಹೀಗೆ ನಾಲ್ಕು ಪಕ್ಷಗಳೆಂದು ಸೇರಿಕೊಳ್ಳಲಿ ಏಳುಪಕ್ಷಗಳೆಂದು ಸೇರಿಕೊಳ್ಳಲಿ ಅದು ನಮಗೆಸಂಬಂಧವಿಲ್ಲ. ಆದರೆ ಪ್ರಜಾಪ್ರಭುತ್ವದಲ್ಲಿಹತ್ತಾರು ಪಕ್ಷಗಳ ಬದಲು ಒಂದೆರಡು ಪಕ್ಷಗಳು ಇದ್ದರೆ ಅದು ಬಹಳ ಒಳ್ಳೆಯದು. ಹೀಗೆ ಛಿದ್ರ ಛಿದ್ರವಾಗಿರತಕ್ಕಂಥ ಪಕ್ಷಗಳು ಒಂದೆಡೆ ಸೇರಿ, ಒಂದು ಪಕ್ಷವನ್ನು ಮಾಡಿಕೊಂಡು ಅದು ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಕೆಲಸಮಾಡುತ್ತದೆ ಅಂದರೆಅದು ನಮಗೂ ಸಂತೋಷ ಅಲ್ಲವೇ? ಆದರೆ ಇವರುಯಾವ ರೀತಿಯಲ್ಲಿ ಸೇರಿಕೊಂಡಿದ್ದಾರೆ ಎಂಬ ಪ್ರಶ್ನೆಜನರ ಮುಂದೆ ಬರುತ್ತದೆ. ಅದನ್ನು ಇವರು ಜನರಿಗೆ ಹೇಳುವುದು ಬೇಡವೆ? ಈಗ ಇವರು ನಾಲ್ಕು ಪಕ್ಷಗಳಾದ ಲೋಕದಳ, ಜನತಾ ಪಕ್ಷ, ಜನಮೋರ್ಚಾ ಮತ್ತು ಕಾಂಗ್ರೆಸ್ ಎಸ್. ಇವರಲ್ಲಿ ಕಾಂಗ್ರೆಸ್ (ಎಸ್)ನವರು ಇವರೊಂದಿಗೆ ಸೇರಲಿಲ್ಲ. ಲೋಕದಳ ಒಂದು ತುಕಡಿ ಪಕ್ಷ, ಜನತಾ ಪಕ್ಷವು ಕರ್ನಾಟಕದಲ್ಲಿ ಬಿಟ್ಟರೆ ಬೇರೆ ಎಲ್ಲಿಯೂ ಇಲ್ಲ, ಜನಮೋರ್ಚರವರು ಇದೊಂದು ದಳ ಎಂದು ಹೇಳುತ್ತಿದ್ದಾರೆ. ಅಂದರೆ ತುಕಡಿ ತುಕಡಿ ಆಗಿರ ತಕ್ಕಂಥಹವರು ಸೇರಿಕೊಂಡು ೧೧ನೇ ತಾರೀಖಿನ ದಿವಸ ಒಂದು ಪಕ್ಷ ಎಂದು ಘೋಷಣೆ ಮಾಡಿದ್ದಾರೆ. ಆ ದಿವಸ ನಮ್ಮ ಮುಖ್ಯ ಮಂತ್ರಿಗಳಾದ ಶ್ರೀಮಾನ್ ಬೊಮ್ಮಾಯಿಯವರು ಅಧ್ಯಕ್ಷರಾಗಿದ್ದರು. ಇದರ ಅರ್ಥ ಏನಾಗುತ್ತದೆ ಅಂದರೆ ಯಾವ ಜನತಾ ಪಕ್ಷಕ್ಕೆ ಅಧ್ಯಕ್ಷರಾಗಿ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರೋ, ಅವರು ಜವಾಬ್ದಾರರಾಗಿ, ಎಲ್ಲರ ಪರವಾಗಿ ಪ್ರತಿನಿಧಿಗಳಾಗಿ ಅಂದಿನ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದಾರೆ. ಅಂದು ಅವರು ನಿರ್ಣಯವನ್ನು ಕೂಡ ಜನಸ್ತೋಮಕ್ಕೆ ಓದಿ ಹೇಳಿದ್ದಾರೆ, ಅಲ್ಲಿಯ ಜನರು ಅದನ್ನು ಒಪ್ಪಿದ್ದಾರೆ, ಇದೆಲ್ಲವನ್ನು ನೋಡಿದಾಗ ಇವರ ಅರ್ಥ ಏನಾಗುತ್ತದೆ ಅಂದರೆ. ಜನತಾ ಪಕ್ಷ ಇದೆಯೋ ಇಲ್ಲವೇ ಎಂಬ ಬಗ್ಗೆ ಒಂದು ಸಂಶಯ ಬರುತ್ತದೆ. ಯಾವತ್ತು ಈ ಜನತಾ ದಳ ಉದಯವಾಯಿತು, ಅಂದು ಜನತಾ ಪಕ್ಷವು ಇಲ್ಲ ಎಂದು ನನ್ನ ಭಾವನೆಯಾಗಿದೆ. ಮೊನ್ನೆ ಮಾನ್ಯ ಶ್ರೀ ಬೊಮ್ಮಾಯಿಯವರು ಮೇಲ್ಮನೆಯಲ್ಲಿ ನಾವು ಇನ್ನೂ ಜನತಾ ಪಕ್ಷವನ್ನು ಬಿಟ್ಟು ಜನತಾ ದಳವನ್ನು ಸೇರಿಲ್ಲ ಎಂದು ಹೇಳಿದ್ದಾರೆ. ಅಂದರೆ ಜನತಾ ದಳದ ಉದಯ ಆಯಿತು ಎಂದು ಹೇಳಿದವರು ಬೊಮ್ಮಾಯಿಯವರೇ ಮತ್ತು ಜನತಾ ದಳ ಸೇರಿಲ್ಲ ಎಂದು ಹೇಳಿದವರೂ ಬೊಮ್ಮಾಯಿಯವರೇ,

ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದಾದರೆ, ಆ್ಯಂಟಿ ಡಿಫೆಕ್ಷನ್ ಆಕ್ಟ್ ಅದರಲ್ಲಿನ ನಾಲ್ಕನೆ ಕಲಮಿನ ಪ್ರಕಾರ ಒಂದು ರಾಜಕೀಯ ಪಕ್ಷದಲ್ಲಿ ಮೂರನೆ ಒಂದು ಭಾಗದಷ್ಟು ಸದಸ್ಯರು ಸಿಡಿದೆದ್ದು ಹೋದರೆ ಅದನ್ನು ಒಂದು ಪಕ್ಷವಾಗಿ ಪರಿಗಣಿಸಬಹುದು ಎಂದು ಇದೆ. ಇಲ್ಲದೆ ಹೋದರೆ, ಎಲ್ಲರೂ ಕೂಡ ಅದಕ್ಕೆ ಸೇರಬಹುದು. ಮರ್ಜರ್ ಆಗಬಹುದು ಎಂದು ಅದರಲ್ಲಿದೆ. ಈಗ ನೀವು ಮರ್ಜರ್ ಆಗಿದ್ದೀರೋ ಅಥವಾ ಸಿಡಿದೆದ್ದು ಬೇರೆ ಇದ್ದೀರೋ? ಮಾನ್ಯ ದೇವೇಗೌಡರು ಮೂರು ತಿಂಗಳಿನಿಂದಭಿನ್ನಮತೀಯರ ಮುಖಂಡರಾಗಿ, ನಾಯಕರಾಗಿ ಇದ್ದಾರೆ. ಅವರಲ್ಲಿ ೪೫ ಜನರೋ ೫೦ ಜನರೋ ಇದ್ದಾರೆ ಎಂದು ಚುನಾವಣೆ ಕಾಲದಲ್ಲಿ ನಮಗೆ ಮನವರಿಕೆ ಆಗಿದೆ, ಹಾಗಿದ್ದರೆ ಈ ಗುಂಪಿನವರು ಅಲ್ಲಿಗೆ ಅಂದು ಎಲ್ಲರೂ ಹೋಗಿದ್ದಾರೆಯೋ ಇಲ್ಲವೇ? ಈ ಗುಂಪು ಇನ್ನೂ ಇದೆಯೋ ಇಲ್ಲವೇ ಎಂಬ ಪ್ರಶ್ನೆ ಬರುತ್ತದೆ. ಅದು ಆ್ಯಂಟಿ ಡಿಫೆಕ್ಷನ್ ಲಾ ನಲ್ಲಿ ಇದೆ. ಆದುದರಿಂದ ತಾವುಗಳು ಎಲ್ಲರೂ ಹೋಗಿದ್ದರೆ ಅವರ ಪರಿಣಾಮ ಏನು ಎಂದು ಹೇಳಬೇಕಾಗುತ್ತದೆ. ಅವರ ಬಗ್ಗೆ ತಾವುಗಳು ಹೇಳಬೇ

ಹೋದಲ್ಲಿ ಜನರ ಮನಸ್ಸಿನಲ್ಲಿ ತಾವುಗಳು ಜನತಾ ಪಕ್ಷ ಅಲ್ಲ ಎಂಬುದು ಮನವರಿಕೆ ಆಗುತ್ತದೆ ಅಂಥ ಒಂದು ಪ್ರಸಂಗ ಬರುತ್ತದೆ, ಆದುದರಿಂದ ನೀವು ಇವೊತ್ತು ಕೂಡ ಜನತಾ ಪಕ್ಷವನ್ನು ಬಿಟ್ಟು ಬಿಟ್ಟು ಲೋಕದಳವನ್ನು ಸೃಷ್ಟಿ ಮಾಡಿದ್ದೇವೆ ಎಂದು ಅದನ್ನು ಬಹಿರಂಗವಾಗಿ ಹೇಳಬೇಕು. ಹಾಗೆ ಬಹಿರಂಗವಾಗಿ ಹೇಳದೇ ಹೋದರೆ, ನೀವು ಚುನಾವಣೆ ಕಾಲದಲ್ಲಿ ಯಾವ ರೀತಿಯಲ್ಲಿ ಒಂದು ಸರಕಾರವನ್ನು ಮಾಡಿದ್ದೀರಿ ಅದಕ್ಕೆ ಅಪಪ್ರಚಾರ ಮಾಡಿದ ಹಾಗೆ ಆಗುತ್ತದೆ. ನೀವು ಇವೊತ್ತಿನ ದಿವಸ ಜನರಿಂದ ರೆಫರೆಂಡಮ್ ತೆಗೆದುಕೊಳ್ಳಬೇಕು ಜನರ ಅಭಿಪ್ರಾಯಗಳನ್ನು ತೆಗೆದು ಕೊಳ್ಳಬೇಕಾಗಿತ್ತು. ಹಾಗೆ ತೆಗೆದುಕೊಂಡು ಸೇರಿದ್ದರೆ ನಿಮಗೆ ಮಾನಸಿಕವಾಗಿ, ಅಧಿಕೃತವಾಗಿ ಒಂದು ಅಧಿಕಾರ ಬರಬಹುದು.

ಶ್ರೀ ಎಚ್. ಎಲ್. ತಿಮ್ಮೇಗೌಡ.— ಮಾನ್ಯ ಬಸವಲಿಂಗಪ್ಪನವರು ಲೋಕದಳ ಎಂದು ಹೇಳುತ್ತಾ ಇದ್ದಾರೆ. ಅದು ಜನತಾ ದಳ ಎಂದು ಆಗಬೇಕು...

ಶ್ರೀ ಜಿ. ಬಸವಲಿಂಗಪ್ಪ.— ಆಯಿತು, ಲೋಕದಳ ಅಲ್ಲ, ಜನತಾ ದಳ ಎಂದು ಹೇಳುತ್ತೇನೆ. ನೀವು ಈ ಬಗ್ಗೆ ಜನರ ತೀರ್ಪು ತೆಗೆದುಕೊಳ್ಳ ಬೇಕಾಗುತ್ತದೆ ಎಂದು ಹೇಳ ಬಯಸುತ್ತೇನೆ.

ಆದ್ದರಿಂದ ನೀವು ತೀರ್ಪು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಜನಗಳಿಗೆ ಮೋಸ ಮಾಡಿದ ಹಾಗಾಗುತ್ತದೆ. ಮಾರ್ಗದಿಂದ ವಿಮುಖವಾದಂತಾಗುತ್ತದೆ. ಸರಿಯಾದ ಪ್ರಜಾಪ್ರಭುತ್ವದಲ್ಲಿ ಯಶಸ್ವಿಯಾದ ದಾರಿಯನ್ನು ತೋರಿಸಿದಂತಾಗಲಿಲ್ಲ. ನೀವು ಏನು ಹೊಸ ದಾರಿ ತೋರುತ್ತೇವೆ, ಹೊಸ ಬುನಾದಿ ಹಾಕುತ್ತೇವೆ ಎಂದು ಹೇಳಿಕೊಳ್ಳುತ್ತಿದ್ದೀರೋ ಹಾಗೆ ಹೇಳಿದಾಗ ನೀವು ನಿರ್ದಿಷ್ಟವಾದ ನಿಲುವು ತೆಗೆದುಕೊಳ್ಳದೇ ಹೋದರೆ ಜನ ಯಾವರೀತಿ ನಿಮ್ಮನ್ನು ನಂಬಬೇಕೆಂಬುದು ಪ್ರಶ್ನೆ. ನಾವು ರಾಜಕೀಯ ಪಕ್ಷವಾಗಿಯೇ ಕೆಲಸ ಮಾಡುತ್ತಿದ್ದೇವೆ. ಈಗ ಜನತಾ ಪಕ್ಷದ ಸರ್ಕಾರವಾಗಿ ಅಧಿಕಾರ ಚಲಾಯಿಸಲು ಹಕ್ಕು ಕಳೆದುಕೊಂಡಿದ್ದೀರಿ. ಏಕೆಂದರೆ ಜನತಾ ದಳವಾಗಿ ನೀವು ಪರಿವರ್ತನೆ ಹೊಂದಿದ್ದೀರಿ, ಇಲ್ಲದಿದ್ದರೆ ನೀವು ಇನ್ನೂ ಜನತಾ ಪಕ್ಷದಲ್ಲಿದ್ದೀರೋ ಎಂಬುದನ್ನಾದರೂ ಹೇಳಬೇಕು. ಹೀಗೆ ಮಾಡದಿದ್ದರೆ ಅಂತರದಲ್ಲಿ ಓಲಾಡಬೇಕಾಗುತ್ತದೆ, ಮಾನ್ಯ ಬೊಮ್ಮಾಯಿಯವರು ಮುಖ್ಯ ಮಂತ್ರಿಗಳಾಗಿ ಒಂದು ಮಾತನ್ನು ಆಡಿದ್ದಾರೆ.

> "ಇದು ಚಾರಿತ್ರ್ಯಾರ್ಹ ಅಧಿವೇಶನ. ದೆಹಲಿಯಲ್ಲಿರುವ ಕೇಂದ್ರ ಸರ್ಕಾರದಿಂದ ಅಧಿಕಾರವನ್ನು ಕಸಿದುಕೊಳ್ಳಲು ಹೊಸ ಪಕ್ಷ ಉದಯವಾಗಿದೆ ಎಂದು ಮುಖ್ಯಮಂತ್ರಿಗಳು ಇಂದಿಲ್ಲಿ ಬಣ್ಣಿಸಿದರು''.

ನಗರದ ಅರಮನೆಯ ಮೈದಾನದಲ್ಲಿ ಜರುಗಿದ ಜನತಾ ದಳದ ಸಮಾವೇಶದಲ್ಲಿ ಅಧ್ಯಕ್ಷತೆ ವಹಿಸಿದ ಮುಖ್ಯ ಮಂತ್ರಿಗಳು ಕೃಷ್ಣ ಇಂದು ಇಲ್ಲಿ ಜನಿಸಿದ್ದಾರೆ. ಕಂಸ ಎಚ್ಚರದಿಂದಿರಬೇಕೆಂದು ಹೇಳಿದರು. ಇಲ್ಲಿ ಒಂದು ಪ್ರಶ್ನೆ ಬರುತ್ತದೆ. ಕೇಂದ್ರದಲ್ಲಿ ಭ್ರಷ್ಟತನ ತುಂಬಿದೆಯೆಂದೂ, ಕರ್ನಾಟಕದಲ್ಲಿ ಭ್ರಷ್ಟತನದಿಂದ ವಿಮುಕ್ತವಾಗಿದೆ ಎಂದೂ, ಇವರೆಲ್ಲಾ ಸತ್ಯಸಂಧರ ದಾರಿಯಲ್ಲಿ ಹೋಗುತ್ತಿದ್ದಾರೆ, ಈ ಸರ್ಕಾರದ ಅಧಿಕಾರ ಆಡಳಿತಗಳಲ್ಲಿ ಲಂಚರುಷುವತ್ತುಗಳಿಲ್ಲ ಎಂದು ಇವರು ಸಾಬೀತು ಮಾಡಬೇಕು. ಇಲ್ಲವೇ ಹೋದರೆ [illegible] ...ತ್ತೇನೆ. ಒಂದದಿನೈದು ನಿಮಿಷ ಮಾರ್ಕೆಟಿಗೆ ಹೋಗಿ ನೋಡಿ. ಹೆಂಡದಂಗಡಿಗಳಲ್ಲಿ ಹೇಗೆ ಸೆಕೆಂಡ್ಸ್ ಮಾರುತ್ತಿದ್ದಾರೆ ಎಂಬುದು ಗೊತ್ತಾಗುತ್ತದೆ. ೧೮೦ ರೂ.ಗಳ ಬಾಟಲ್ ಟ್ಯಾಕ್ಸಿಲ್ಲದೆ ೬೦ ರೂ.ಗೆ ಸಿಗುತ್ತದೆ. ಈ ವ್ಯವಹಾರ ಬೀದಿ ಬೀದಿಯಲ್ಲಿ ನಡೆಯುತ್ತಿದೆ. ಅಂದರೆ ಟ್ಯಾಕ್ಸ್ ಹಾಕದೆಯೆ ವಿಸ್ಕಿ ಬ್ರಾಂದಿಗಳನ್ನು ವ್ಯವಹಾರವನ್ನು ಸರ್ಕಾರ ನಡೆಸಿಕೊಂಡು ಬಂದಿದೆ. ಇದು ಲಂಚವಲ್ಲವೋ ? ಮೌಲ್ಯಾಧಾರಿತವೋ ? ಬೀದಿ ಬೀದಿಗಳಲ್ಲಿ ಜನ ಲಂಚ ಕೊಡದೇ ಹೋದರೆ ಏನು ಕೆಲಸ ಆಗುವುದಿಲ್ಲವೆಂದು ಹೇಳುತ್ತಿದ್ದಾರೆ. ಜನತೆಯಲ್ಲಿ ಎಲ್ಲಿಯವರೆಗೆ ಭ್ರಮೆ ಇರುತ್ತದೋ ಅಲ್ಲಿಯವರೆಗೆ ನೀವು ಜನಗಳ ಮೇಲೆ ಭಾರ ಹಾಕಿ ನಮಗೇನೂ ಅಭ್ಯಂತರ ಇಲ್ಲ. ಕೇಂದ್ರದಲ್ಲೆಲ್ಲ ಭ್ರಷ್ಟತನ ತುಂಬಿದೆ ನಮ್ಮಲ್ಲಿ ಇಲ್ಲ ಎಂದು ಹೇಳುವುದು ಮಾತ್ರ ಬೇಡ. ಬೆಕ್ಕು ಕಣ್ಮುಚ್ಚಿಕೊಂಡು ಹಾಲು ಕುಡಿಯುವುದಿಲ್ಲ. ದಯವಿಟ್ಟು ಹೇಳಿ ಸ್ವಾಮಿ. ಕೃಷ್ಣ ಯಾರು ಇಲ್ಲಿ ? ಮಹಾಭಾರತದಲ್ಲಿ ನನಗೆ ನಂಬಿಕೆ ಇಲ್ಲ. ಹೋದ ಸೆಷನ್‌ನಲ್ಲೇ ನನಗೆ ನಂಬುಗೆ ಇಲ್ಲ ಎಂದ ಹೇಳಿದ್ದೇನೆ. ನಿಮ್ಮ ಜನತಾ ದಳವನ್ನು ಕೃಷ್ಣನಿಗೆ ನೀವು ಹೋಲಿಸಿಕೊಂಡರೆ ಅವನ ನೀತಿ ರೀತಿಗಳನ್ನು ನೀವು ಅಳವಡಿಸಿಕೊಳ್ಳಬೇಕಾಗುತ್ತದೆ. ಅದನು

ಸಾಧನೆ ಮಾಡಬೇಕಾಗುತ್ತದೆ. ಒಂದು ಹೇಳುತ್ತೇನೆ ಕೇಳಿ. ಕೃಷ್ಣನಿಗೆ ಎಷ್ಟು ಹೆಂಡಿರಿದ್ದರು ಎಂದರೆ ೧೬೦೦೮ ಹೆಂಡಿರು. ಈಗಿರುವ ಕೃಷ್ಣನಿಗೆ ಎಷ್ಟು ಇದ್ದಾರೆ ಹೇಳಿ. ಒಂದು ದಿವಸಕ್ಕೆ ಆ ಕೃಷ್ಣ ಳಳ ಹೆಂಗಸರೊಂದಿಗೆ ಮಾತಾಡಬೇಕಾಗುತ್ತಿತ್ತು. ಇಂತಹ ಕೃಷ್ಣ ಉದಯವಾಗಿಬಿಟ್ಟನೆ ? ಯಾವುದೊ ಒಂದು ಸರಕಾರ ಕೆಟ್ಟವರು ನಾವು ಬಹಳ ಒಳ್ಳೆಯ ಜನ, ಸಜ್ಜನರು, ಒಳ್ಳೆಯ ಗುಣವುಳ್ಳವರು ಎಂದು ಶಹಭಾಸ್‌ಗಿರಿಯನ್ನು ಪಡೆಯಬೇಕೆಂದು ಏನು ಭಾಷಣ ಮಾಡಿದ್ದೀರಿ ಇದನ್ನು ಜನ ಮರೆತಿಲ್ಲ. ಮಾನ್ಯ ಹೆಗಡೆಯವರು ೫ ವರ್ಷದಿಂದ ಮಾತನಾಡಿದ್ದಾರೆ ಅವರು ಮುಖ್ಯ ಮಂತ್ರಿಯಾದಾಗಿನಿಂದ ಆ ಗದ್ದುಗೆಯನ್ನು ಬಿಡುವವರೆಗೂ ಏನು ಹೇಳಿದ್ದಾರೆ, ಅವೆಲ್ಲವೂ ಸಮಂಜಸವಾದುದಲ್ಲ ಯಾವ್ಯಾವ ಜನರಿಗೆ ಏನೇನು ವಾಗ್ದಾನ ಮಾಡಿದ್ದಾರೆ ಅದನ್ನೊಂದನ್ನು ಜಾರಿಗೆ ಮಾಡಲಿಲ್ಲ. ಕೊನೆಯವರೆಗೂ ವಾಗ್ದಾನ ಮಾಡಿದರು ಕೊನೆಗೆ ಯಾವುದೋ ಫೋನ್ ಟ್ಯಾಪಿಂಗ್ ಪ್ರಕರಣದಲ್ಲಿ ಸಿಕ್ಕಿ ಹಾಕಿಕೊಂಡು ಹೊರಗೆ ಹೋಗಿದ್ದಾರೆ. ಜನತಾ ಪಕ್ಷದ ಮೇಲ್ಪಂಕ್ತಿಯನ್ನು ಏನು ಹಾಕಿದ್ದೀರಿ ಅದನ್ನು ಜನಗಳು ಅನುಸರಿಸಬೇಕು, ಪ್ರತಿ ಪಕ್ಷದವರು ಅನುಸರಿಸಬೇಕು ಅಂತಹ ಒಂದು ಸದುದ್ದೇಶದಿಂದ ತಾವು ನಡೆದುಕೊಳ್ಳಬೇಕು ೫ ವರ್ಷದಿಂದ ತಾವು ಏನು ಮಾಡಿದ್ದೀರಿ ? ಕಾಂಗ್ರೆಸ್‌ನವರನ್ನು ದುಷ್ಟ ತಾವು ಅಧಿಕಾರಕ್ಕೆ ಬಂದಿರಿ. ನಿಮ್ಮ ಪ್ರಕಾರ ಕಾಂಗ್ರೆಸ್‌ನವರು ಏನೇನು ಮಾಡಿದರು ಅದನ್ನೇ ನಾವೂಬೆ ಕೂಡ ಮಾಡುತ್ತೇವೆಂದು ಹೇಳಿದರೆ ನಮಗೂ ನಿಮಗೂ ಏನು ವ್ಯತ್ಯಾಸವಿದೆ ? ಜನ ಇದನ್ನೆಲ್ಲಾ ನೋಡುತ್ತಿದ್ದಾರೆ. ನೈತಿಕ ಬೆಂಬಲ ಇದ್ದರೆ ಈ ಸಭೆಯನ್ನು ವಿಸರ್ಜನೆ ಮಾಡಿ ಮತ್ತೆ ನಾವು ನೀವೂ ಕೂಡ ಜನರ ಹತ್ತಿರ ಹೋಗೋಣ ಅವರು ಯಾರಿಗೆ ಬೆಂಬಲ ಕೊಡುತ್ತಾರೆ ಕೊಡಲಿ. ಹೋದ ಚುನಾವಣೆಯಲ್ಲಿ ನಮ್ಮ ಪಕ್ಷದ ೪೦ ಜನ ಸದಸ್ಯರು ನೂರು ಓಟಿನ ಒಳಗೆ ಸೋತಿದ್ದಾರೆ ನಾವೇನೋ ಗೆದ್ದಿದ್ದೇವೆಂದು ತಾವು ತಿಳಿದುಕೊಳ್ಳಬೇಡಿ. ನಾವು ಸೋತಿದ್ದರಿಂದ ಇಲ್ಲಿ ಕುಳಿತುಕೊಂಡಿದ್ದೇವೆ ಆದರಿಂದ ನಿಮಗೆ ಒಂದು ಅವಕಾಶ ಸಿಕ್ಕಿದೆ. ಈ ಕಾಲದಲ್ಲಿ ಒಳ್ಳೆಯ ಕೆಲಸ ಮಾಡಿ ಜನಗಳ ಮೆಚ್ಚಿಗೆ ಪಡೆಯುವ ರೀತಿಯಲ್ಲಿ ಕೆಲಸ ಮಾಡಬೇಕು. ನಿಮ್ಮ ಪಕ್ಷ ಜನತಾ ಪಕ್ಷವೋ ಅಥವಾ ಜನತಾ ದಳವೋ ಎಂಬುದನ್ನು ನೇರವಾಗಿ ಹೇಳಬೇಕು.

೬–೩೦ ಪಿ. ಎಂ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ರಾಷ್ಟ್ರೀಯ ಪ್ರತಿ ಪಕ್ಷ ನಿರ್ಮಾಣಕೋಸ್ಕರ ಬೆಂಗಳೂರು ಅರಮನೆಯಲ್ಲಿ ಜರುಗಿದಂತಹ ಮೇಳದ ವಿಚಾರ ಸಹಜವಾಗಿ ೩–೪ ದೃಷ್ಟಿಕೋನಗಳಿಂದ ಪ್ರಮುಖವಾದಂತಹ ಪ್ರಶ್ನೆಗಳನ್ನು ನಮ್ಮ ಮುಂದಿಟ್ಟಿದೆ. ನಾನು ಕೇವಲ ಅಧಿಕಾರದ ದುರುಪಯೋಗ ಆಪ್ಪರ ಬಗ್ಗೆ ಮಾತ್ರ ಇವರನ್ನು ದೂಷಿಸಿ ತೃಪ್ತಿಪಟ್ಟುಕೊಳ್ಳುವುದಕ್ಕೆ ತಯಾರಿಲ್ಲ. ಮಾನ್ಯ ಯಡಿಯೂರಪ್ಪನವರು ಒಂದು ಒಳ್ಳೆಯ ಮಾತನ್ನು ಹೇಳಿದರು. ಒಂದೊಂದು ಸಾರಿ ಅಧಿಕಾರವಿದ್ದವರು ನಾವು ಮಾಡುವುದು ಎಲ್ಲರಿಗೂ ಉಪಯೋಗವಾಗುತ್ತದೆಂದು ತಿಳಿದುಕೊಂಡು ಮಾಡುತ್ತಿರತಕ್ಕಂಥಾದ್ದು ಹೊರಗಡೆಗೆ ಅಂದರೆ ಬೇರೆಯವರಿಗೆ ಅದು ದುರುಪಯೋಗವೆಂದು ಕಾಣಿಸುತ್ತದೆ. ಅದೇ ಧಾಟಿ ಯಾರೇ ಅಧಿಕಾರದಲ್ಲಿರಲಿ ಅವರು ಇದನ್ನು ಅನುಸರಿಸುವಂತಹ ಪ್ರಬುದ್ಧತೆಯನ್ನು ಇಟ್ಟುಕೊಂಡಿದ್ದರೆ ಇಂತಹ ಚರ್ಚೆ ಅಗತ್ಯ ಬೀಳುವುದಿಲ್ಲ. ನಾನು ಅಧಿಕಾರದಲ್ಲಿದ್ದಾಗ ಏನು ಮಾಡಿದರೂ ಚೆಂದ ಅದೇ ಬೇರೆಯವರು ಅಧಿಕಾರದಲ್ಲಿದ್ದು ಅವರು ಏನು ಮಾಡಿದರೂ ಅದು ಸರಿಯಲ್ಲವೆಂದು ಹೇಳತಕ್ಕಂಥಾದ್ದು ಸರಿಯಲ್ಲ. ಅಧಿಕಾರ ದುರುಪಯೋಗ ಮಾಡಿಕೊಂಡಿಲ್ಲವೆಂದು ದಯಮಾಡಿ ಹೇಳಬೇಡಿ. ನಿಮ್ಮ ಆತ್ಮವನ್ನು ಮುಟ್ಟಿ ನೋಡಿಕೊಂಡರೆ ಒಬ್ಬೊಬ್ಬರು ತರಹಾವರಿ ಮಾಡಿದ್ದೀರಿ ಅದರಲ್ಲಿ ಸಂದೇಹವಿಲ್ಲ. ನೀವು ಜನಗಳಿಗೆ ಹೇಳಿದ್ದು ಏನು ಕಾಂಗ್ರೆಸ್ ತರಹ ಇನ್ನೊಂದು ಪಕ್ಷ ಇದೆ, ಕಾಂಗ್ರೆಸ್ಸಿನವರು ಸಾಕಷ್ಟು ಕಾಲ ಆಡಳಿತ ಮಾಡಿದ್ದಾರೆ ನಾವು ಒಂದು ಸ್ವಲ್ಪ ದಿವಸ ಮಾಡುತ್ತೇವೆ ಎಂದು ಹೇಳಿ ಅಧಿಕಾರಕ್ಕೆ ಬಂದಿರಾ? ನೀವೇನು ಹೇಳಿದಿರಿ, ಕಾಂಗ್ರೆಸ್‌ನವರೆಲ್ಲರೂ ರಾಕ್ಷಸರು ಅವರು ಮಾಡಿದ್ದೆಲ್ಲಾ ತಪ್ಪು. Congress is always diabolically black and you are celestially white. They do not believe that the other party is diabolically white and celestially black. It is against the philosophy of party system. ನಾವು ಮಾತ್ರ ಪುಣ್ಯ ಪುರುಷರು ಆಕಾಶದಿಂದ ಇಳಿದು ಬಂದವರು ಅವತಾರ ಎತ್ತಿದ್ದೇವೆ ನಮಗೆ ಕೊಡಿ ಎಂದು ಹೇಳುವುದಲ್ಲ. ಪ್ರಜಾಪ್ರಭುತ್ವದಲ್ಲಿ ಒಂದೇ

ಪಕ್ಷ ಬಹಳ ದಿವಸ ಇರುವುದು ಸರಿಯಲ್ಲವೆಂದು ಏನಾದರೂ ಹೇಳಿದಿರಾ ? ಇಂಗ್ಲೇಂಡಿನಲ್ಲಿ ಅದೇ ರೀತಿ ನಡೆಯುತ್ತಿದೆ. ಅದನ್ನು ಮಾಡಲಿಲ್ಲ. ನೀವೇನು ಮಾಡಿದಿರಿ ಕಾಂಗ್ರೆಸ್ ಅನ್ನು ಅಧಿಕಾರದಿಂದ ಇಳಿಸುವುದಕ್ಕೆ ಅದನ್ನು ಎಷ್ಟು ಕೆಟ್ಟದಾಗಿ ಬಣ್ಣಿಸಬೇಕೋ ಅಷ್ಟು ಕೆಟ್ಟದಾಗಿ ಬಣ್ಣಿಸಿ ನಿಮ್ಮನ್ನು ಎಷ್ಟು ಉತ್ತಮ ರೀತಿಯಲ್ಲಿ ಬಣ್ಣಿಸಬೇಕೋ ಅಷ್ಟು ಉತ್ತಮ ರೀತಿಯಲ್ಲಿ ಬಣ್ಣಿಸಿ ತಾವು ಅಧಿಕಾರಕ್ಕೆ ಬಂದಿದ್ದೀರಿ ಎಂಬುದನ್ನು ಮರೆಯಬೇಡಿ ಅಧಿಕಾರದಲ್ಲಿ ಬಂದ ಮೇಲೆ ಅದರ ಕಷ್ಟ ಸುಖ ಗೊತ್ತಾಗಿರಬಹುದು ಆದರೆ ಈ ಮಾತನ್ನು ಹೇಳುವುದಕ್ಕೆ ನಿಮಗೆ ಅಧಿಕಾರವಿಲ್ಲ ನೈತಿಕ ಹಕ್ಕು ಇಲ್ಲ. ವಿರೋಧ ಪಕ್ಷದಲ್ಲಿರುವವರು ಕೇಳಿದ್ದಕ್ಕೆಲ್ಲಾ ನಿಮ್ಮ ಉತ್ತರವೇನೆಂದರೆ ನೀವು ಅಧಿಕಾರವಿದ್ದಾಗ ಏನು ಮಾಡಿದಿರಿ, ನಾವೂ ಅದನ್ನೇ ಮಾಡುತ್ತಿದ್ದೇವೆಂದು ಹೇಳುವುದು ಅಲ್ಲ. ನಾವು ಮಾಡಿದ್ದನ್ನೇ ನೀವು ಮಾಡುತ್ತೇವೆಂದು ಹೇಳುವುದಾದರೆ ಜನ ನಾಳೆ ನಿಮ್ಮನ್ನು ಕೇಳಬಹುದು ಹಾಗಾದರೆ ನೀವು ಏಕೆ ಇರಬೇಕು ಎಂದು. ದುರುಪಯೋಗ ಮಾಡಿರತಕ್ಕಂಥದ್ದಕ್ಕೆ Certainly you are liable to explain. ದುರುಪಯೋಗ ಮಾಡಲಿಲ್ಲವೆಂದು ಹೇಳಬೇಡಿ. ಬಿ.ಡಿ.ಎ. ಯಿಂದ ಮನೆ ತೆಗೆದು ಕೊಳ್ಳುವುದಕ್ಕೆ ದುಡ್ಡು ಕೊಟ್ಟು ಜನರು ಜಾತಕ ಪಕ್ಷಿಗಳ ರೀತಿಯಲ್ಲಿ ಕಾಯುತ್ತಿದ್ದಾರೆ. ನಾಳೆ ದಿವಸ ಅದು ಏನಾದರೂ ಡ್ಯಾಮೇಜ್ ಆದರೆ ಆ ಕಂಟ್ರಾಕ್ಟರ್ ಬಂದು ಅದನ್ನು ಸರಿಪಡಿಸುವುದಿಲ್ಲ ಆ ಕಂಟ್ರಾಕ್ಟರ್‌ಗೆ ಹೇಳತಕ್ಕಂತಹ ನೈತಿಕ ಶಕ್ತಿ ನಿಮಗಿಲ್ಲ. ಅವರ ಮನೆಯನ್ನು ಅವರೇ ರಿಪೇರಿ ಮಾಡಿ ಕೊಳ್ಳಬಹುದಾದ ಪರಿಸ್ಥಿತಿ ಇದೆ. ದುರುಪಯೋಗ ಎಂದರೆ ಆರ್.ಟಿ.ಓ. ಬಸ್ ಅನ್ನು ಸುಮ್ಮನೆ ಎಲ್ಲೆಲ್ಲಿಗೋ ಹೊಡೆದುಕೊಂಡು ಹೋಗಲೀ ಎಂದು ಹೇಳಿದರೆ ಆರು ತಿಂಗಳಲ್ಲಿ ಅವರನ್ನು ಮಾತನಾಡಿಸುವುದಕ್ಕೆ ಸಾಧ್ಯವಿಲ್ಲದಂತಾಗುತ್ತದೆ. ಹೌಸಿಂಗ್ ಬೋರ್ಡಿನವರನ್ನು, ಪಿಕ್ಸೆಲ್ಸ್ ಕಂಟ್ರಾಕ್ಟರ್‌ರವರನ್ನು ಮಾತನಾಡಿಸುವುದಕ್ಕೆ ಸಾಧ್ಯವಾಗುವುದಿಲ್ಲ ಅಂತಹ ಪರಿಸ್ಥಿತಿ ಬರುತ್ತದೆ. ಇದೆಲ್ಲವೂ ಆಡಳಿತದ ಮೇಲೆ ದುರುಪಯೋಗ ಬೀರಿಯೇ ಬೀರುತ್ತದೆ. ನಾಳೆ ಅದರ ಪರಿಣಾಮ ಆಗಿಯೇ ಆಗುತ್ತದೆ. ಇವತ್ತಿನ ಹೊಸ ಪಕ್ಷದ ಉದಯವಾಯಿತೋ ಇಲ್ಲವೋ ಅದರ ಸ್ವರೂಪ ನಮಗೂ ನಿಮಗೂ ಈ ಮನೆಗೂ ರಿಲೆವೆಂಟ್ ಆಗಿದೆ. ಈ ಸರಕಾರದ ಮೇಲೆ ಅದರ ವಿವಿಧ ರೀತಿಯ ಪರಿಣಾಮಗಳು ಆಗತಕ್ಕಂತಹ ಸಾಧ್ಯತೆ ಇದೆ. ನಾವೆಲ್ಲಾ ಒಟ್ಟಾಗಿದ್ದೇವೆ. ಅದಕ್ಕೋಸ್ಕರ ನೀವು ಭಯ ಬಿದ್ದು ಹೇಳುತ್ತಿದ್ದೇವೆಂಬ ಅಭಿಪ್ರಾಯವನ್ನು ತಾವು ಇಟ್ಟುಕೊಳ್ಳಬಹುದು. ಆದರೆ ಅದು ಸತ್ಯಕ್ಕೆ ದೂರವಾಗಿರತಕ್ಕಂತಹ ಅಭಿಪ್ರಾಯ. ಕೆಲವರಿಗೆ ಆ ಭಯ ಇರಬಹುದು. ನಾನು ಭಯ ಪಟ್ಟುಕೊಂಡು ಮಾತನಾಡುತ್ತಿದ್ದೇನೆಂದು ತಿಳಿದುಕೊಳ್ಳಬೇಡಿ. ಕೆಲವರಿಗೆ ಆ ಭಯ ಇರಬಹುದು. ನೀವೆಲ್ಲಾ ಒಟ್ಟಾಗಿ ಕಾಂಗ್ರೆಸ್ ಅನ್ನು ಹೆಚ್ಚು ಅಂದರೆ ಸೋಲಿಸಬಹುದು ಅಷ್ಟೇ ನಿಮ್ಮ ಗುರಿ ಇರುವುದೂ ಅಷ್ಟೇ. ಎಲ್ಲಾ ಪತ್ರಿಕೆಗಳ ಹೆಡ್‌ಲೈನ್ಸ್ ಅನ್ನು ಇಲ್ಲವೇ ಯಾವುದೇ ಹೇಳಿಕೆಯನ್ನು ನೋಡಿ ಒಟ್ಟಿನಲ್ಲಿ ಕಾಂಗ್ರೆಸ್ ಅನ್ನು ಸೋಲಿಸಬೇಕು ಆ ದೃಷ್ಟಿಯಿಂದ ಒಂದಾಗಬೇಕೆಂದು ಇದೆಯೇ ಹೊರತು ಬೇರೇನೂ ಇಲ್ಲ. ಅದರ ಬಗ್ಗೆ ಇತ್ತೀಚೆಗೆ ಪತ್ರಿಕೆಗಳಲ್ಲಿ ಪಾಸಿಟೀವ್ ಸ್ಟೆಪ್ ಇಲ್ಲವೆಂದು ಬಂದ ಮೇಲೆ ಜಗತ್ತಿನಲ್ಲಿದ್ದದ್ದನ್ನೆಲ್ಲಾ ಸೇರಿಸಿ ಒಂದು ಕಾರ್ಯಕ್ರಮವನ್ನು ಮಾಡಿ ಇಟ್ಟರು ಅದನ್ನು ಕಾರ್ಯಗತ ಮಾಡುತ್ತೀರಾ ? Right to work as very much part and parcel of your manifesto in 1977. could you garanteed that ? ಇವತ್ತು ಮಾನ್ಯ ವಿ. ಪಿ ಸಿಂಗ್ ಹೇಳುತ್ತಾರೆ ಚುನಾವಣೆಗಳಲ್ಲಿ ಹಣದ ಪಾತ್ರ ಇಲ್ಲದೇ ಇದ್ದ ರೀತಿಯಲ್ಲಿ ಸರಕಾರ ನೋಡಿಕೊಳ್ಳಬೇಕು ಎಂದು. ಹೇಗೆ ನೋಡಿಕೊಳ್ಳುವುದು ? ಸರಕಾರ ಹಣ ಕೊಡದಿದ್ದರೆ ಬೇರೆ ಬೇರೆ ಕಡೆಯಿಂದ ಹಣವನ್ನು ಖರ್ಚು ಮಾಡುವುದು ನಿಂತು ಹೋಗುತ್ತದೆಯೇ ? ಅದರ ಬಗ್ಗೆ ಒಂದು ಪ್ರಾಕ್ಟಿಕಲ್ ಆದ ಸಜೆಷನ್ ಅನ್ನು ಕೊಡಿ. Regarding poll reforms, the Prime Minister is ready for the dialogue but no body speaks anything positive. ರಾಷ್ಟ್ರೀಯ ಸಮಸ್ಯೆ ಬಗ್ಗೆ, ಒಮ್ಮತದ ಸಮಸ್ಯೆ ಬಗ್ಗೆ ಗಮನ ಕೊಡಬೇಕು. ಬಾಬರಿ ಮಸೀದಿ ಸಮಸ್ಯೆ ಇರಬಹುದು ಶ್ರೀಲಂಕಾ ಸಮಸ್ಯೆ, ಪಂಜಾಬ್ ಸಮಸ್ಯೆ ಇರಬಹುದು ಯಾವ ಸಮಸ್ಯೆಯ ಬಗ್ಗೆಯಾದರೂ ಕೂಡ ಹೀಗಲ್ಲಾ ಹೀಗೆ ಮಾಡಬೇಕೆಂದು ಪ್ರಾಕ್ಟಿಕಲ್ ಆದ ಸಜೆಷನ್ ಕೊಡಬೇಕು. ಅದನ್ನು ಬಿಟ್ಟು ನೀವು ಮಾಡಿದ್ದೆಲ್ಲಾ ತಪ್ಪು ನಾವು ಮಾಡಿದ್ದೆಲ್ಲಾ ಸರಿ ಎಂದು ಹೇಳುತ್ತಾ ಹೋಗುವುದು ಸರಿಯಲ್ಲ It is not a conglomeration of opposition parties. It is an alternative party which can alternate. ಆಲ್ಟರ್ನೇಟೀವ್ ಪಾರ್ಟಿ ಬೇಕು. ರಾಜಕೀಯ ಸ್ವಾಸ್ಥ್ಯ ಅದರಲ್ಲಿ ಇರಬೇಕು. ಬೇಸಿಕ್ ಫಿಲಾಸಫಿ ಮೇಲೆ ಪಾರ್ಟಿ

ಸಿಸ್ಟಂ ತಯಾರಾಗಿರಬೇಕು. ನಾವು ಒಬ್ಬರೇ ಒಳ್ಳೆಯವರು ನಾವೆಲ್ಲ ಆಕಾಶದಿಂದ ಇಳಿದು ಬಂದವರು ಕಾಂಗ್ರೆಸ್‌ನವರೆಲ್ಲಾ ರಾಕ್ಷಸರು ಎನ್ನುವ ಕಲ್ಪನೆ ಇರಬಾರದು. ಕೆಲವರು ತಪ್ಪು ಮಾಡುತ್ತಾರೆ ಅದಕ್ಕಾಗಿ ಅವರನ್ನು ಜನ ಇಲ್ಲಿ ಕೂರಿಸುತ್ತಾರೆ ಈಗ ಮತ್ತೊಬ್ಬರನ್ನು ಅಲ್ಲಿ ಕೂರಿಸುತ್ತಾರೆ ಇನ್ನೊಂದು ಸಾರಿಗೆ ಅವರು ಮಾಡಿದ ತಪ್ಪನ್ನು ತಿದ್ದಿಕೊಳ್ಳುತ್ತಾರೆ ಆಗ ಮತ್ತೆ ಅಲ್ಲಿರುವವರು ಇಲ್ಲಿ ಬರುತ್ತಾರೆ ಇಲ್ಲಿರುವವರು ಅಲ್ಲಿಗೆ ಹೋಗುತ್ತಾರೆ. ಆ ದೃಷ್ಟಿಯಿಂದ ಈ ಯೂನಿಟಿ ಮೂವ್ ಆದರೆ ಖಂಡಿತವಾಗಿ ನಾನು ಸ್ವಾಗತ ಮಾಡುತ್ತೇನೆ ಅದನ್ನು ಬಿಟ್ಟು ಕಾಂಗ್ರೆಸ್‌ನವರನ್ನು ಬೈಯ್ಯುವುದು ಸರಿಯಲ್ಲ. ಆಗ ಆ ರೀತಿ ಮಾಡಿದರೆ ನೀವು ಬೇಜವಾಬ್ದಾರಿಯಿಂದ ಮಾತನಾಡುವುದು ತಪ್ಪುತ್ತದೆ ಜವಾಬ್ದಾರಿಯಿಂದ ಮಾತನಾಡಬೇಕಾದಂತಹ ಪರಿಸ್ಥಿತಿ ಬರುತ್ತದೆ ಮತ್ತು ಎಲ್ಲರೂ ಒಂದೇ ಮಾತನ್ನು ಹೇಳಬೇಕಾದಂತಹ ಪರಿಸ್ಥಿತಿ ಬರುತ್ತದೆ ಆಗ ನಮ್ಮ ತಪ್ಪು ಇದ್ದರೂ ತಿದ್ದಿಕೊಳ್ಳಲು ಅವಕಾಶವಾಗುತ್ತದೆ. ಈ ಮೇಳಕ್ಕೆ ಮೊದಲು ಇಂಡಿಯಾ ಟುಡೇಯಲ್ಲಿ ಒಂದು ಕಾಮೆಂಟ್ ಅನ್ನು ಬರೆದಿದ್ದಾರೆ ಮೇಳ ಆದ ಮೇಲೆ ಇದಕ್ಕಿಂತ ಚೆನ್ನಾಗಿ ಬರೆಯಬಹುದೆಂದು ಅನ್ನಿಸುತ್ತದೆ.

ಇಂಡಿಯಾ ಟುಡೆ ಪತ್ರಿಕೆಯಲ್ಲಿ ಡಿಸ್‌ಯೂನಿಟಿ ಮೂವ್ಸ್ ಎಂದು ಹೆಡಿಂಗ್ ಕೊಟ್ಟಿದ್ದಾರೆ ಅದರಲ್ಲಿ ಏನು ಹೇಳಿದ್ದಾರೆ ಎಂದರೆ The born-again-aborted-again Opposition Unity. ಈ ರೀತಿ ಹೇಳಿದ್ದಾರೆ. ಇವತ್ತು ಏನಾಗಿದೆ ಎಂದರೆ It is not unity move. ಎಂದು ಕೊಟ್ಟಿದ್ದಾರೆ ಈ ರಾಜ್ಯದ ಆಡಳಿತದ ಪ್ರಶ್ನೆ ಕೂಡಾ ಇವತ್ತು ಇದೆ, ಸೂಕ್ಷ್ಮವಾಗಿ ಒಂದು ಪ್ರಶ್ನೆಯನ್ನು ಎತ್ತಿದ್ದಾರೆ. ಆಂಟಿ ಡಿಫೆಕ್ಷನ್ ಲಾದ ಹಿನ್ನೆಲೆಯಲ್ಲಿ ಜನತಾ ದಳವೋ, ಜನತಾ ಪಕ್ಷವೋ ಏನು ಎನ್ನತಕ್ಕಂಥ ಪ್ರಶ್ನೆ ಉದ್ಭವವಾಗುತ್ತದೆ. ಅದಲ್ಲದೇ ಈ ಒಂದು ಅನಿಶ ತತೆ ಇದೆ, ನಾಳೆ ಜನತಾ ದಳ ಎಂದು ಆಯಿತು. ಕೆಲವರು ಇಲ್ಲಿ ಪ್ರಮಾಣವನ್ನು ಮಾಡಿ ಹೇಳಿದವರೂ ಇದ್ದಾರೆ, ನಾವು ಜನತಾ ಪಕ್ಷದ ಹೆಸರು ಸಿಂಬಲ್ ಇದನ್ನು ಬಿಟ್ಟರೆ ನಾವು ಅವರ ಜೊತೆಯಲ್ಲಿ ಹೋಗುವುದಿಲ್ಲ ಎಂದು ಹೇಳಿ ಪ್ರಮಾಣಪೂರ್ವಕವಾಗಿ ಹೇಳಿರತಕ್ಕಂಥವರು ನಿಮ್ಮ ಸರ್ಕಾರದಲ್ಲಿ ಇದ್ದಾರೆ. ಈ ಸರ್ಕಾರ ಉಳಿಯುತ್ತದೆಯೇ ಎಂದು ಐ.ಎ.ಎಸ್. ಅಧಿಕಾರಿಗಳು ಮೂರು ತಿಂಗಳು ಕಾಯುತ್ತಾರೆ ನೀವು ಏನು ಹೇಳಿದರೂ ಕೇಳುವುದಿಲ್ಲ. ಮೊದಲನೆಯದಾಗಿ ಏನು ಎಂದು ಹೇಳಿದರೆ ಈ ಸರ್ಕಾರದಲ್ಲಿ ಏನಾದರೂ ಐಬು ಇದೆ ಎಂದು ಗೊತ್ತಾದ ಕೂಡಲೇ ಪೆನ್ನನ್ನು ಕೆಳಗೆ ಇಟ್ಟುಬಿಡುತ್ತಾರೆ, ಯಾವ ಫೈಲ್‌ಗೂ ರುಜು ಮಾಡಲಿಕ್ಕೆ ಹೋಗುವುದಿಲ್ಲ, ಯಾವ ಕೆಲಸವನ್ನು ಮಾಡಲಿಕ್ಕೂ ಹೋಗುವುದಿಲ್ಲ. ಇದು ಹೀಗಾಗಲೇ ಇದರ ಪರಿಣಾಮ ಆರು ತಿಂಗಳಿಂದ ಆಗಿದೆ. ಇದನ್ನು ನಾನು ಹೇಳುತ್ತಿರತಕ್ಕಂಥದ್ದಲ್ಲ. ಮಾನ್ಯ ಶ್ರೀ ಬೊಮ್ಮಾಯಿಯವರು ಇಂಡಿಯಾ ಟುಡೆಯಲ್ಲಿ ಒಂದು ಸಂದರ್ಶನವನ್ನು ಕೊಟ್ಟರು. "I am not Hegde's Puppet" To a question, Mr. Bommai said. "I love Hegde and accept him as a leader. But his wavering created instability in the State" ಇದರಲ್ಲಿ ಸ್ಪೆಸಿಫಿಕ್ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದ್ದಾರೆ. ಏನು ಉತ್ತರವನ್ನು ಕೊಟ್ಟಿದ್ದಾರೆ ಎಂದರೆ ಅವರು ಸ್ಪಷ್ಟವಾಗಿ ಹೇಳಿದ್ದಾರೆ. To a question, What is the kind of government and party you have inherited" Mr. Bommai gave an answer "No Chief Minister has been put in sach an extraordinary crisis as I have. The Government is in a bad shape. There is a financial crisis, an administrative crisis and the experiment of decentralisation faces teething problems. ಇದರ ನೆಕ್ಸ್ಟ್ ಪ್ಯಾರಾಗ್ರಾಫ್ ಏನು ಹೇಳಿದ್ದಾರೆ ಎಂದರೆ. The party is in a shambles with all this rivalry and the elections are only a year and a half away. I must provide continuity of rule as well as implement some of my own new ideas in the short period I have. Time is short and it is a very difficult task." ಇಂಡಿಯಾ ಟುಡೆಯಲ್ಲಿ ಹೇಳಿರುವುದು ಇಂಡಿಯಾ ದೇಶಕ್ಕೆ ಜಗಜ್ಜಾಹೀರು ಮಾಡಿದ್ದಾರೆ ಅದು ತಪ್ಪಲ್ಲ. ನಾವು ಹೇಳಿದರೆ ಮಾತ್ರ ತಪ್ಪಾಗುತ್ತದೆ ಎಂದು ಹೇಳಿದ್ದಾರೆ. ಯೂನಿಟಿ ಗಿಟಿ ಬಿಟ್ಟಿದ್ದರೆ ಏನೋ ಚಲೋ ಆಗಿತ್ತು, ಫಸ್ಟ್ ಕ್ಲಾಸ್ ಆಗುತ್ತಿತ್ತು. ಎಲ್ಲಿ ಯೂನಿಟಿ ಆಗಿದ್ದೀರಿ? ನಮಗೆ ಬಂದಿರುವ ಭಯ ಏನು ಎಂದರೆ ಇನ್ನೊಂದು ತಿಂಗಳ ಒಳಗಾಗಿ ಏನಾಗುತ್ತದೋ ಎಂದು.

SRI K. S. NAGARATHNAMMA.—Very straight-forward.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ವೆರಿ ಹಾನೆಸ್ಟ್ ಎಂದು ಎಲ್ಲರ ಬಾಯಲ್ಲಿ ಬಂತು. ಇವರಲ್ಲಿ ಮಾತ್ರ ಎಲ್ಲಗೂ ಯೂನಿಟಿ ಆಗಿದ್ದೀರಿ (ಕಾಂಗ್ರೆಸ್‌ನವರನ್ನು ಕುರಿತು) ಎಲ್ಲರೂ ಒಂದೇ ಸ್ವರದಲ್ಲಿ ಹೇಳಿದ್ದೀರಿ

ಶ್ರೀ ಬಿ. ಲಕ್ಕಪ್ಪ.—ಇರುವುದನ್ನು ಇದ್ದಹಾಗೆ ಹೇಳಿದರೆ ಬೇಡ ಎಂದು ಹೇಳುತ್ತೇವೆಯೇ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಾನು ಇನ್ನೊಬ್ಬರನ್ನು ಡಿಸ್-ಹಾನೆಸ್ಟ್ ಎಂದು ಹೇಳುವುದಿಲ್ಲ ಅವರು ಹಾನೆಸ್ಟ್ ಆಗಿ ಹೇಳಿದ್ದರೆ ಅದನ್ನು ಬೇಸಿಸ್ ಆಗಿ ತೆಗೆದುಕೊಂಡು ಅವರ ವಿರುದ್ಧವಾಗಿ ಉಪಯೋಗಿಸುವುದಕ್ಕೆ ನಾನು ಪ್ರಯತ್ನ ಪಡುತ್ತಿಲ್ಲ. ಅದರಿಂದಾಗಿ ಕೆಲವು ವಿಷಯಗಳು ಸ್ಪಷ್ಟಪಡಬೇಕು ಎಂದು ಹೇಳುತ್ತಿದ್ದೇವೆ. ಇವತ್ತು ಏನು ಯೂನಿಟಿ ಆಗಿರತಕ್ಕಂಥದ್ದು? ಯೂನಿಟಿಗೆ ಬೇಕಾಗುವ ಎಲ್ಲಾ ತಯಾರಿಯನ್ನು ಮಾಡಿಕೊಂಡು ಈ ಯೂನಿಟಿಯನ್ನು ಘೋಷಣೆ ಮಾಡತಕ್ಕಂಥ ಮೇಳವನ್ನು ಮಾಡಿದ್ದೀರಾ? ಏನೋ ಒಂದು ರಾಷ್ಟ್ರೀಕಾಣಿಕೆಯಾಗಿ ಕೊಟ್ಟಿದ್ದಾರೆ, ಹೋಗಲಿ ಬಿಡೋಣ ಎಂದರೆ ಆ ರೀತಿಯಲ್ಲಿಯೂ ಆಗಿಲ್ಲ, ನಾಲ್ಕಲ್ಲ, ಆರು ಬಸ್‌ಗಳನ್ನಾದರೂ ಹಿಡಿಸಿಕೊಂಡು ಹೋಗಲಿ ಬಿಡಿ ಎಂದು ಹೇಳಬಹುದಾಗಿತ್ತು. ಆ ರೀತಿಯಾಗಿ ಏನಾದರೂ ತಯಾರಿಯನ್ನು ಮಾಡಿದ್ದೀರಾ? ಹೆಸರು ಏನು ಎಂದು ತೀರ್ಮಾನವಾಯಿತು ಎಂದರೆ ಮೊದಲ ರಾಷ್ಟ್ರೀಯ ಸಮಾಜವಾದಿ ಜನತಾ ದಳ ಎಂದು ಇತ್ತು ''ದಳ ಮೋರ್ಚಾ ಎಂದು ಹೇಳಿದರೆ ಮುಗಿದುಹೋಗುತ್ತಿತ್ತು. ಈಗ ''ಜನತಾ ದಳ'' ಎಂದು ಹೇಳುತ್ತಾರೆ. ರಾಷ್ಟ್ರೀಯ ಎಲ್ಲಿ ಹೋಯಿತು? ಸಮಾಜವಾದಿ ಎಲ್ಲಿ ಹೋಯಿತು?

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮೊಯಿಲಿಯವರು ಆ್ಯಂಟಿ ಡಿಫೆಕ್ಷನ್ ಆಕ್ಟ್ ಬಗ್ಗೆ ಹೇಳಿದ್ದಾರೆ. ಈಗಾಗಲೇ ಇದರ ಬಗ್ಗೆ ಸಾಕಷ್ಟು ಚರ್ಚೆ ಆಗಿದೆ. ಸುಬ್ಬರಾಯನ ಕೆರೆ ಭಾಷಣ ಇಲ್ಲಿ ಬೇಡ. ಈ ಮನೆ ಅದಕ್ಕಲ್ಲಾ ಅಲ್ಲ. ಟೆಕ್ನಿಕಲ್ ಆಗಿ ಕಾನ್‌ಸ್ಟಿಟ್ಯೂಷನ್‌ನಲ್ಲಿ ಹೇಳಿ. ಕಾಂಗ್ರೆಸ್ ಬಗ್ಗೆ ನಾನು ಭಾಷಣ ಮಾಡಲಾ ಹೇಳಿ? ಮಾಡುವುದು ಸರಿಯಲ್ಲ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಇಲ್ಲಿ ನಾನೂ ಕೇಳಲಾ? ಒಂದು ವರ್ಷ ಆಯಿತು ಅಧ್ಯಕ್ಷರನ್ನು ನೇಮಿಸಿ. ಆದರೆ ಒಂದು ವರ್ಷದಿಂದ ಆಫೀಸ್ ಬೇರರ್ಸ್ ಅನ್ನು ಎಕ್ಸಿಕ್ಯೂಟೀವ್ ಅನ್ನು ಮಾಡುವುದಕ್ಕೆ ಆಗಲಿಲ್ಲ...

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾಡಿದ್ದೇವೆ...

ಶ್ರೀ ಎಸ್. ಆರ್. ಬೊಮ್ಮಾಯಿ.—ಯಾವಾಗ ಮಾಡಿದ್ದೀರಿ. ಒಂದು ವರ್ಷ ಆಯಿತು...

ಶ್ರೀ ಮತಿ ಕೆ. ಎಸ್. ನಾಗರತ್ನಮ್ಮ.—ಅವರೂ ಸಹಿತ ನಾವು ಎಷ್ಟು ಚೆನ್ನಾಗಿ ನಡೆಸುತ್ತಿದ್ದೇವೆ ಎಷ್ಟು ಎಲೆಕ್ಷನ್ಸ್ ಅನ್ನು ಫೇಸ್ ಮಾಡಿದ್ದೇವೆ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಒಂದು ವರ್ಷದಿಂದ ಎಕ್ಸಿಕ್ಯೂಟೀವ್ ಕಮಿಟಿಯನ್ನು ಆಫೀಸ್ ಬೇರರ್ಸ್ ಅನ್ನು ಮಾಡಲಾಗಲಿಲ್ಲ. ೧೦೦ ಸಲ ಡೆಲ್ಲಿಗೆ ಹೋಗಿದ್ದೀರಿ...Have you got moral rights?

(ಗೊಂದಲ)

ಅಧ್ಯಕ್ಷರು.—ಅವರ ಪಕ್ಷದ್ದೂ ಬೇಡ. ನಿಮ್ಮ ಪಕ್ಷದ್ದೂ ಬೇಡ. ನೀವು ಅವರ ಪಕ್ಷಕ್ಕೆ ಹೋಗಬೇಡಿ ಅವರೂ ಹೋಗುವುದು ಬೇಡ. ಮಾನ್ಯ ಮೊಯಿಲಿಯವರು ಹೇಳಿದ ಹಾಗೆ ಹೇಳಿ. ರಾಜಕೀಯ ಬಿಟ್ಟು ಬಿಡಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಮೊಯಿಲಿಯವರು ಹೇಳಿದ ಹಾಗೆ ಯಾಕೆ ನಾನು ಹೇಳಬೇಕು

ಅಧ್ಯಕ್ಷರು.—ಸಮಾಧಾನವಾಗಿ ಕೇಳಿ, ಅವರು ಹೇಳಿದ ಹಾಗೆ ಹೇಳಿ...

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಾನು ಯಾಕೆ ಅವರು ಹೇಳಿದ ಹಾಗಿ ಹೇಳಬೇಕು? ನಾನು ಏನು ಹೇಳಬೇಕು ಅಂತ ಇದ್ದೀನೋ ಅದನ್ನೇ ನಾನು ಹೇಳುವುದು.

(ಗೊಂದಲ)

ಅಧ್ಯಕ್ಷರು.—೧೦ ಮಿನಿಟ್ ಆಯಿತು...

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇವೊತ್ತು ಏನು ಹೇಳಿದರು, ರಾಜ್ಯದ ಆಡಳಿತ ಪರಿಸ್ಥಿತಿ ಏನು ಇದೆ ನಾನು ಏನು ಮಾಡಬೇಕು ಎಂದು ಇದ್ದೇನೆ ಎಂದು ಹೇಳಿದರು. ಅದಕ್ಕೂ ಈಗ ಆಗಿರತಕ್ಕಂಥಹ ಘಟನೆಗೂ ಸಂಬಂಧ ಇದೆ. ಸಂಬಂಧ ಇಲ್ಲದೇ ಇದ್ದರೆ ನಾನು ಹೇಳುತ್ತಾ ಇರುತ್ತಿರಲಿಲ್ಲ. ಇವೊತ್ತು ಅವರು ಏನು ಹೇಳಿದ್ದಾರೆ.

SRI S. R. BOMMAI.—I rise on a point of order. Party Politics cannot be discussed here. I don't want to be discussed. ಈ ಮನೆ ಘನತೆಯನ್ನು ಕಾಯಬೇಕಾಗುತ್ತದೆ. ಇಂಟರ್‌ನ್ಯಾಷನಲ್ ಪಾಲಿಟಿಕ್ಸ್ ಬಗ್ಗೆ, ಪಾರ್ಟಿ ಮರ್ಜರ್ ವಿಷಯ ಬೇಡ. ಸರ್ಕಾರದ ಮೇಲೆ ಪರಿಣಾಮ ಹೇಳುತ್ತೀರಿ. mis-use-of the government machinery, yes. ಆದರೆ ರಾಜಕೀಯದ ಬಗ್ಗೆ ಇಂಟರ್‌ನಲ್ ಪಾಲಿಟಿಕ್ಸ್ ಬಗ್ಗೆ ಮಾತನಾಡಲು ಇದು ವೇದಿಕೆ ಅಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನನಗೆ ಮಾತನಾಡಲು ಅವಕಾಶ...

ಅಧ್ಯಕ್ಷರು.—ಪಾರ್ಟಿ ಪ್ರಶ್ನೆ ಬಿಟ್ಟುಬಿಡಿ. mis-use-of the government machinery ಬಗ್ಗೆ ಹೇಳಿ.

ಶ್ರೀ ಕೆ. ಹೆಚ್. ಶ್ರೀನಿವಾಸ್,—ನಾನು ಹೇಳುವುದು ಕೇಳಿ, ಆಮೇಲೆ...

ಅಧ್ಯಕ್ಷರು.—ಡೀವಿಯೇಷನ್ ಮಾಡಬೇಡಿ. ಗವರ್ನಮೆಂಟ್ ಮೆಷಿನರಿ ಮಿಸ್‌ಯೂಸ್ ಆಗಿದ್ದರೆ ಅದರ ಬಗ್ಗೆ ಹೇಳಿ...

ಶ್ರೀ ಕೆ. ಹೆಚ್, ಶ್ರೀನಿವಾಸ್.—ನಾನು ಹೇಳುವುದನ್ನು ಯಾಕೆ ಕೇಳುವುದಿಲ್ಲ. ನನ್ನ ಭಾಷಣ ಆದ ಮೇಲೆ ಯಾವುದು ಬೇಡವೋ ಅದನ್ನು ಕಿತ್ತು ಬಿಸಾಕಿ, ನಾನು ಮಾತನಾಡುವುದು ಬೇಡವೇ?

ಅಧ್ಯಕ್ಷರು,—ನೀವು ಜನತಾ ದಳದ ಬಗ್ಗೆ ಮಾತನಾಡುವುದು, ಇವರು ಕಾಂಗ್ರೆಸ್ ಬಗ್ಗೆ ಮಾತನಾಡುವುದು...

ಶ್ರೀ ಎಸ್. ಆರ್. ಬೊಮ್ಮಾಯಿ.—ಪಾರ್ಲಿಮೆಂಟ್‌ನಲ್ಲಿ ಆಗಲಿ, ಶಾಸನಸಭೆಗಳಲ್ಲಿ ಆಗಲಿ ಚರ್ಚೆ ಮಾಡತಕ್ಕ ವಿಷಯದ ಬಗ್ಗೆ ಗಮನ ಇರಬೇಕಾಗುತ್ತದೆ, ಇಂಟರ್‌ನ್ಯಾಷನಲ್ ಪಾಲಿಟಿಕ್ಸ್ ಬಗ್ಗೆ, ಪಾರ್ಟಿ ಮರ್ಜರ್ ಬಗ್ಗೆ ಮಾತನಾಡುವುದು ಬೇಡ. ಅದರ ಪರಿಣಾಮ ಸರ್ಕಾರದ ಮೇಲೆ ಏನು ಇದೆ ಶಾಸನಸಭೆಗಳಿಗೆ ಸಂಬಂಧಪಟ್ಟಂತೆ ಮಾತ್ರ ಮಾತನಾಡಬೇಕು. ಅದನ್ನು ಬಿಟ್ಟು ಹೆಸರು ಆಗಲಿಲ್ಲ. ನಿನ್ನೆವರೆಗೆ ಆಗಲಿಲ್ಲ. ಮೊನ್ನೆವರೆಗೆ ಆಗಲಿಲ್ಲ ಎಂದು ಹೇಳಿದರೆ ಈ ತರಹ ಹೇಳಬಾರದು. ಮಾನ್ಯ ಪೂಜಾರಿಯವರು ಬಂದಾಗ ಒಬ್ಬರು ಇರಲಿಲ್ಲ, ಅದನ್ನು ಹೇಳಲಾ ಹೇಳುವ ಅವಶ್ಯಕತೆ ಇಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ,—ಮಾನ್ಯ ಪೂಜಾರಿಯವರು ಬಂದಾಗ ಯಾರೂ ಇರಲಿಲ್ಲ ಎಂದು ನಿಮಗೆ ರಿಪೋರ್ಟ್ ಬಂದಿತ್ತೇ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಮ್ಮ ಸಮ್ಮೇಳನಕ್ಕೆ ೬೦ ಜನ ಶಾಸಕರು ಬಂದಿದ್ದರು ಎಂದು ನಿಮಗೆ ರಿಪೋರ್ಟ್ ಬಂದಿತ್ತೇ ?

(ಗೊಂದಲ)

ಶ್ರೀ ಕೆ. ಎಸ್. ನಾಗರತ್ನಮ್ಮ.—ಪೇಪರ್‌ನಲ್ಲಿ ಬಂದಿತ್ತು...

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಪೂಜಾರಿಯವರು ಬಂದಾಗ ಯಾರೂ ಇರಲಿಲ್ಲ ವೆಂದು ನನ್ನ ಹತ್ತಿರನೂ ರಿಪೋರ್ಟ್ ಇದೆ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಆದುದರಿಂದ ರಾಜಕೀಯ ವಿಚಾರ ಮಾತನಾಡಲು ಇದು ವೇದಿಕೆ ಅಲ್ಲ. ಮಾನ್ಯ ಶ್ರೀನಿವಾಸ್ ಅವರು ಪಂಡಿತರು. ದಯವಿಟ್ಟು ಈ ಸದನದಲ್ಲಿ ಏನು ಹೇಳ ಬೇಕೋ ಅಷ್ಟನ್ನು ಹೇಳಲಿ.

ಅಧ್ಯಕ್ಷರು.—ಈ ವೇದಿಕೆಯಲ್ಲಿ ಎಷ್ಟನ್ನು ಹೇಳಬೇಕೋ ಅಷ್ಟನ್ನು ಮಾತ್ರ ಹೇಳಿ, ಬೇರೆ ವಿಷಯ ವನ್ನು ಹೇಳುವುದಕ್ಕೆ ಹೋಗಬೇಡಿ. ಮಾನ್ಯ ಬೊಮ್ಮಾಯಿಯವರು ಹೇಳಿದ ಹಾಗೆ ಹೇಳಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಈ ವೇದಿಕೆಯಲ್ಲಿ ಎಷ್ಟು ವಿಷಯವನ್ನು ಹೇಳಬೇಕೋ ಅಷ್ಟನ್ನು ಮಾತ್ರ ಹೇಳುತ್ತೇನೆ. ಮಾನ್ಯ ಬೊಮ್ಮಾಯಿಯವರ ತರಹ ಮಾತನಾಡುವುದಾದರೆ...

ಅಧ್ಯಕ್ಷರು.—ದಯವಿಟ್ಟು ಮುಕ್ತಾಯ ಮಾಡಿ

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅವರ ತರಹ ಹೇಳುವುದಾದರೆ ನಾನು ಬೇಕಾದಷ್ಟು ಹೇಳ ಬಹುದು. ನ್ಯಾಯವಾದ ವಿಷಯ ಎಷ್ಟು ಇದೆ ಅಷ್ಟನ್ನು ಮಾತ್ರ ಹೇಳುತ್ತಿದ್ದೇನೆ. ಈಗ ಆಗಿರ ತಕ್ಕಂಥ ಘಟನೆಯ ಪರಿಣಾಮ ಸರ್ಕಾರದ ಮೇಲೆ ಆಗುವುದರಿಂದ ಈ ಘಟನೆ ಏನು ಆಯಿತೆಂದು ಹೇಳ ಬೇಕಾಗುತ್ತದೆ. ಹೇಳದೇ ಇರುವುದಕ್ಕೆ ಆಗುವುದಿಲ್ಲ, ಸುಮ್ಮನೇ ಘಟನೆ ಆಯಿತು, ಪರಿಣಾಮ ಏನು ಹೇಳುವುದಕ್ಕಾಗುವುದಿಲ್ಲ ಎಂದರೆ ಹೇಗೆ ಯೂನಿಟಿ...

ಅಧ್ಯಕ್ಷರು.—೧೦ ಮಿನಿಟ್ ಕೊಟ್ಟಿದ್ದೇನೆ...

ಶ್ರೀ ಕೆ. ಹೆಚ್. ಶ್ರೀನಿವಾಸ್.—ಆ ೧೦ ಮಿನಿಟ್‌ನಲ್ಲಿ ಬಹಳ ಮಿನಿಟ್ ಬೇರೆಯವರಿಗೆ ಹೋಯಿತು, ಇದಕ್ಕೆ ಯಾರು ಜವಾಬ್ದಾರಿ?

ಅಧ್ಯಕ್ಷರು.—ನಿಮಗೆ ೫ ನಿಮಿಷ ಬೇಕೋ ೩ ನಿಮಿಷ ಬೇಕೋ

ಶ್ರೀ ಕೆ. ಹೆಚ್. ಶ್ರೀನಿವಾಸ್.—ಐದು ನಿಮಿಷ ಬೇಕು.

ಅಧ್ಯಕ್ಷರು.—ಅಷ್ಟರಲ್ಲೇ ಮುಗಿಸಬೇಕು

ಶ್ರೀ ಕೆ. ಹೆಚ್. ಶ್ರೀನಿವಾಸ್.—ನನಗೆ ಐದು ನಿಮಿಷ ಸಾಕು. ಆದರೆ ನಾನು ಹೇಳಬೇಕಾದ ವಿಷಯವನ್ನು ಐದು ನಿಮಿಷದಲ್ಲಿ ಹೇಳುತ್ತೇನೆ. ಆದರೆ ಮಧ್ಯದಲ್ಲಿ ಯಾರೂ ಮಾತನಾಡುವುದು ಬೇಡ, ಆ ರೀತಿ ನೋಡಿಕೊಳ್ಳುವುದು ನಿಮ್ಮ ಜವಾಬ್ದಾರಿ.

ನಾನು ಏನು ಹೇಳುತ್ತಿದ್ದೇನೆಂದರೆ, ನೀವು ಒಗ್ಗಟ್ಟಾಗಿದ್ದರೆ, ನೀವು ಬಲಶಾಲಿಗಳಾಗಿದ್ದರೆ ನಾವು ನಿಮ್ಮನ್ನು ಯಾವ ರೀತಿ ಎದುರಿಸಬೇಕೆಂದು ಯೋಚನೆ ಮಾಡುತ್ತಿದ್ದೆವು ಆದರೆ ಈಗ ಆ ಸ್ಥಿತಿ ನಮಗೆ ಬಂದಿಲ್ಲ. ತಾವೇ ಏನು ಹೇಳಿದ್ದೀರಿ ಎಂದರೆ, ಕಳೆದ ೫-೬ ತಿಂಗಳುಗಳಿಂದ ಈ ರಾಜ್ಯದ ಆಡಳಿತದ ಮೇಲೆ ರಾಜಕೀಯ ಅಸ್ಥಿರತೆಯಿಂದಾಗಿ ಗಂಭೀರವಾದ ಪರಿಣಾಮ ಉಂಟಾಗಿದೆ ಎಂದು. ಇದನ್ನು ತಾವೇ ಮುಕ್ತವಾಗಿ ಒಪ್ಪಿಕೊಂಡಿದ್ದೀರಿ. ಈ ಒಂದು ಗಭೀರವಾದ ಪರಿಣಾಮಕ್ಕೆ ಇನ್ನೊಂದು ಆಯಾಮವನ್ನು ಮೊನ್ನೆ ನಡೆದ ಘಟನೆ ಜೋಡಿಸಿದೆ ಇದರಿಂದ ಈ ಸರ್ಕಾರ ಎಷ್ಟು ದಿವಸ ನಿಲ್ಲುತ್ತದೆ ಅಥವಾ ಬಿಡುತ್ತದೆ ಎಂಬ ಅನುಮಾನ ನಮಗೆ ಬರುತ್ತಿಲ್ಲ, ಆದರೆ ನಿಮ್ಮ ಅಧಿಕಾರಿಗಳಿಗೆ ಬರುತ್ತಿದೆ. ನೀವು ರೀಜವು ಹಾಕಿದ್ದನ್ನು ಕಾರ್ಯಗತ ಮಾಡಬೇಕಾದ ಅಧಿಕಾರಿಗಳು ಈ ಬಗ್ಗೆ ವಾಸನೆ ಹಿಡಿಯುವುದರಲ್ಲಿ ಬಹಳ ಶೂರರು ಈ ಸರ್ಕಾರ ಬಹಳ ಕಾಲ ಉಳಿಯುತ್ತದೋ ಅಥವಾ ಇಲ್ಲವೋ ಎಂಬ ಬಗ್ಗೆ ಅವರು ವಾಸನೆ ಹಿಡಿಯುತ್ತಿದ್ದಾರೆ. ಈ ಸರ್ಕಾರದ ಬಗ್ಗೆ ಅವರಿಗೇನಾದರು ಅನ್‌ಸರ್ಟನ್ಟಿ ಬಂದರೆ ಇನ್ನು ಆರು ತಿಂಗಳ ಕಾಲ ಅವರುಗಳು ಯಾರೂ ಕೆಲಸ ಮಾಡುವುದಿಲ್ಲ ಆಗ ನೀವು ಬಹಳ ಗಟ್ಟಿ ಯಾಗಿದ್ದೇವೆಂದು ತೋರಿಸಿಕೊಳ್ಳಲು ಇನ್ನೊಂದು ಮೇಳವನ್ನು ಮಾಡಬೇಕಾಗುತ್ತದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಿಮ್ಮ ಒಂದು ಅನ್‌ಸರ್ಟನ್ಟಿಯಿಂದಾಗಿ ಆಡಳಿತದ ಮೇಲೆ ಯಾವ ರೀತಿ ಪರಿಣಾಮ ಆಗಿದೆ ಎಂಬುದನ್ನು ತೋರಿಸಿಕೊಡಲು ಈ ಮಾತನ್ನು ಹೇಳುತ್ತಿದ್ದೇನೆ, ನೀವು ಹೊಸದಾಗಿ

ಅಧಿಕಾರಕ್ಕೆ ಬಂದಮೇಲೆ ಇದನ್ನು ಸುಧಾರಣೆ ಮಾಡುತ್ತೀರಿ ಎಂದು ನಾವು ಲೆಕ್ಕ ಹಾಕಿದ್ದೆವು. ಆದರೆ ಮೊನ್ನೆ ನಡೆದ ಮೇಳದಲ್ಲಿ ನೀವು ಗುರುತರವಾದ ಪಾತ್ರವನ್ನು ವಹಿಸಿದ್ದೀರಿ ನೀವು ಸೈಡ್-ವಿಂಗ್ ನಲ್ಲಿದ್ದುಕೊಂಡು ಬೇರೆಯವರನ್ನು ಮುಂದೆ ಬಿಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ಮದುಮಗನ ರೀತಿಯಲ್ಲಿ ಪೇಟ ಇಟ್ಟುಕೊಂಡು ಪ್ರಮುಖ ಪಾತ್ರ ವಹಿಸಿದಿರಿ ಈ ತರಹದ ಕೆಲಸವನ್ನು ನೀವು ಮಾಡದಿದ್ದರೆ ಚೆನ್ನಾಗಿರುತ್ತಿತ್ತು. ತಾವು ಇಲ್ಲಿ ಸಭಾ ನಾಯಕರಾಗಿ ಮತ್ತು ಮುಖ್ಯಮಂತ್ರಿಗಳಾಗಿ ಹೋಸ್ಟ್ ಮಾಡಬೇಕು ಎಂಬುದನ್ನು ನಾನು ಒಪ್ಪುತ್ತೇನೆ. ನೀವು ಹೋಸ್ಟ್ ಮಾಡುವುದಿಲ್ಲ ಎಂದು ನಾನು ಹೇಳುವುದಿಲ್ಲ ಆದರೆ ಅಲ್ಲಿ ಮಾತ್ರ ಗೋಸ್ಟ್ ತರಹ ಹಿಂದೆ ಇರಬೇಕಾಗಿತ್ತು ಅದರ ಬದಲು ನೀವು ರಾಮಕೃಷ್ಣ ಹೆಗಡೆಯವರನ್ನು ತೃಪ್ತಿಪಡಿಸುವುದಕ್ಕಾಗಿ ಈ ರೀತಿ ಮಾಡಿದಿರಿ. ಈ ಸರ್ಕಾರ ಎಷ್ಟು ದಿವಸ ಅಧಿಕಾರದಲ್ಲಿರುತ್ತದೋ ಗೊತ್ತಿಲ್ಲ ಏಕೆಂದರೆ, ನೀವು ಒಂದು ಕಡೆ ದೇವರಿಗೆ ನೇವೆದ್ಯ ಮಾಡುತ್ತೀರಿ ಮತ್ತೊಂದು ಕಡೆ ಭೂತಕ್ಕೆ ಬಲಿ ಹಾಕುತ್ತೀರಿ ಇದರಿಂದ ನಿಮ್ಮಲ್ಲಿ ಇನ್ನೂ ಯೂನಿಟಿ ಬಂದಿಲ್ಲವೆಂದು ಅರ್ಥವಾಗುತ್ತದೆ ಈಗ ನೀವು ಯಾವುದನ್ನು ರಕ್ಷಣೆ ಮಾಡಿಕೊಳ್ಳುತ್ತೀರೋ ನನಗೆ ಅರ್ಥವಾಗುವುದಿಲ್ಲ. ನೀವು ಸರಿಯಾದ ವೇದಿಕೆಯನ್ನು ತಯಾರು ಮಾಡಿಕೊಂಡು ಈ ಸಮಾರಂಭವನ್ನು ನಡೆಸಬೇಕಾಗಿತ್ತು ? ಇಲ್ಲಿ ನಿಮ್ಮ ಸರ್ಕಾರವಿದೆ ಎಂಬ ಕಾರಣದಿಂದ ಈ ಮೇಳವನ್ನು ನಡೆಸಿದಿರಿ. ಇಲ್ಲಿಯಾದರೆ ಹೆಚ್ಚಿನ ಜನರನ್ನು ಸೇರಿಸಬಹುದು ಜನರಿಂದ ಚಪ್ಪಾಳೆ ಹೊಡೆಸಬವುದರ ಮೂಲಕ ಶ್ರೀ ವಿ.ಪಿ. ಸಿಂಗ್ ಅವರನ್ನು ಮತ್ತು ಶ್ರೀ ದೇವಿಲಾಲ್ ಅವರನ್ನು ತೃಪ್ತಿಪಡಿಸಬಹುದು ಎಂಬ ಒಂದೇ ಕಾರಣದಿಂದ ಇದನ್ನು ಮಾಡಿದಿರೇ ಹೊರತು ನಾಲ್ಕೈದು ಪಕ್ಷಗಳನ್ನು ಒಟ್ಟುಗೂಡಿಸುವಂತಹ ಕೆಲಸವನ್ನು ನೀವು ಮಾಡಲಿಲ್ಲ. ನೀವು ನಾಲ್ಕೈದು ಪಕ್ಷಗಳನ್ನು ಒಟ್ಟುಗೂಡಿಸಿ ಕಾಂಗ್ರೆಸ್ ಪಕ್ಷಕ್ಕೆ ಒಂದು ಸವಾಲನ್ನು ಎಸೆದಿದ್ದರೆ ನಾನು ನಿಮ್ಮನ್ನು ಖಂಡಿತವಾಗಿಯೂ ಅಪ್ರಿಷಿಯೇಟ್ ಮಾಡುತ್ತಿದ್ದೆ ಈ ಮಾತನ್ನು ನಾನು ಕೇವಲ ರಾಜಕೀಯಕ್ಕೋಸ್ಕರ ಹೇಳುತ್ತಿಲ್ಲ I had heen a student of political science. I have taught political science in Maharaja College for some time. ಈ ಒಂದು ಕಾರಣದಿಂದ ಈ ದೇಶದಲ್ಲಿ ಕೇವಲ ಎರಡು ಪಕ್ಷಗಳು ಮಾತ್ರ ಇರಬೇಕು ಎಂಬುದರ ಬಗ್ಗೆ ನನಗೆ ಜೀವಂತ ಆಸಕ್ತಿ ಇದೆ ಆದರೆ ಇವರು ಇಂತಹ ಒಂದು ಕೆಲಸವನ್ನು ಮಾಡಲಿಲ್ಲ. ಇಲ್ಲಿ ಏನಾಯಿತು ಎಂದರೆ. ಯಾವುದೋ ಒಂದು ಯಕ್ಷಗಾನ ನಾಟಕದಲ್ಲಿ ವಿದೂಷಕನು ತಾನು ಪಾಂಡವರನ್ನು ನೋಡಿಕೊಂಡು ಬಂದೆ ಎಂದು ಹೇಳುತ್ತಾನೆ ಪಾಂಡವರು ಯಾವ ರೀತಿ ಇದ್ದರು ಎಂದು ಕೇಳಿದಾಗ ಅವನಿಗೆ ಅವರು ಯಾವ ರೀತಿ ಇದ್ದರೆಂಬುದನ್ನು ಹೇಳುವುದಕ್ಕೆ ಬರಲಿಲ್ಲ. ಪಾಂಡವರು ೫ ಜನ ಎಂಬುದು ಅವನಿಗೆ ಗೊತ್ತಿತ್ತು ಆದರೆ ಅವನು ಪಂಚಪಾಂಡವರೈವರು ಎಂದು ಹೇಳುವಾಗ ನಾಲ್ಕು ಬೆರಳುಗಳನ್ನು ತೋರಿಸಿದ. ಅವರು ಮಂಚದ ಕಾಲುಗಳಂತೆ ಎಂದು ಹೇಳಿದ ಮಂಚದ ಕಾಲುಗಳು ಎಂದು ಹೇಳುವಾಗ ಅವನು ನಾಲ್ಕು ಬೆರಳುಗಳನ್ನು ತೋರಿಸುವುದಕ್ಕೆ ಬದಲು ೩ ಬೆರಳುಗಳನ್ನು ತೋರಿಸಿದ ನಂತರ ಅಲ್ಲಿ ಮೂರು ಮಂದಿ ಇದ್ದರು ಎಂದು ಹೇಳುವಾಗ ಒಂದು ಬೆರಳನ್ನು ತೋರಿಸಿದ. ಇಲ್ಲಿ ಪ್ರಾರಂಭವಾಗಿದ್ದು ಪಂಚಪಾಂಡವರು ಐವರು ಎಂದು ಅವರನ್ನು ಮಂಚದಕಾಲಿಗೆ ಹೋಲಿಸುವಾಗ ಅವನ ಬೆರಳು ೩ ಆಯಿತು. ಅಲ್ಲಿ ಮೂರು ಜನರಿದ್ದರು ಎಂದು ಹೇಳುವಾಗ ಅವನು ಒಂದು ಬೆರಳನ್ನು ತೋರಿಸಿದ. ವಿದೂಷಕ ಬೆರಳನ್ನು ತೋರಿಸಿದಂತೆ ಇಲ್ಲಿಯೂ ಆಗಿದ್ದು ಅಷ್ಟೆ ಇಲ್ಲಿ ಮೂರು ಪಾರ್ಟಿಗಳು ಎಲ್ಲಿ ಒಂದುಗೂಡಿದವು ? ದೇವಿಲಾಲರು ಮತ್ತು ಬಹುಗುಣ ಅವರು ಅತ್ತಲಾಗಿ ಮತ್ತು ಇತ್ತಲಾಗಿ ಒದಕೊಂಡ ಮೇಲೆ ಎರಡೂವರೆ ಪಾರ್ಟಿಗಳು ಒಂದಾದಂತೆ ಆಯಿತೇ ಹೊರತು ಮೂರು ಪಾರ್ಟಿಗಳು ಯಾವ ರೀತಿ ಆಯಿತು ? ಈ ರೀತಿಯಿಂದ ಒಂದಾಗುವುದಕ್ಕೆ ಬದಲು ಜನತಾ ಪಕ್ಷದ ಹೆಸರಿನಲ್ಲಿಯೇ ಕಾಂಗ್ರೆಸ್ ಪಕ್ಷಕ್ಕೆ ಸವಾಲನ್ನು ಹಾಕಬಹುದಾಗಿತ್ತು ಏಕೆಂದರೆ, ಇಲ್ಲಿ ಜನತಾ ಪಕ್ಷಕ್ಕೆ ಒಳ್ಳೆಯ ಹೆಸರು ಇದೆ Is it not a beautiful name ? I agree, I am a congress man, But I concede that. ಏಕೆ ಬೇಕು ಇದೆಲ್ಲಾ ? ಈ ದಳ ಏಕೆ ಬೇಕು ಈ ರಾಷ್ಟ್ರೀಯ ಏಕೆ ಬೇಕು, ಈ ಸಮಾಜವಾದಿ ಏಕೆ ಬೇಕು, you cannot invent a better name. With all sincerety at my command I say this. I read fully twice the interview in which Mr. Chandrasekhar the earstwhile President answered Mr. Chowla of Illustrated Weekly. I was deeply impressed by the sincerety of his thoughts. ನಿಜವಾಗಿಯೂ ಈ ದೇಶದಲ್ಲಿರುವಂತಹ ಕಾಂಗ್ರೆಸ್ ಪಕ್ಷಕ್ಕೆ ಒಂದು ಪರ್ಯಾಯ ಪಕ್ಷ ಕಟ್ಟಬೇಕಾದರೆ ಅದಕ್ಕೆ ಸ್ವಲ್ಪ ತಾಳ್ಮೆ ಇರಬೇಕು ಅದನ್ನು ಬಿಟ್ಟು ಇಲ್ಲಿ

ಒಂದು ಸರ್ಕಾರವಿದೆಯೆಂದುಕೊಂಡು ಒಂದು ಮೇಳ ನಡೆಸಿ ಎಲ್ಲ ಕಡೆಗಳಿಂದ ಬಸ್‌ಗಳಲ್ಲಿ ಜನರನ್ನು ಕರೆಸಿಕೊಂಡು ತಮಗೆ ಹೊಡಿಸಿಬಿಟ್ಟರೆ ಒಂದು ಪಕ್ಷ ಹುಟ್ಟುವುದಿಲ್ಲ. ಒಂದು ಹೊಸ ಪಕ್ಷ ಕಟ್ಟಬೇಕಾದರೆ ಅದಕ್ಕೆ ಸಾಕಷ್ಟು ಕಸರತ್ತು ಮಾಡಬೇಕು ಅದನ್ನು ಬಿಟ್ಟು ದಿನಬೆಳಗಾದರೆ ಒಬ್ಬರು ಮತ್ತೊಬ್ಬರ ವಿರುದ್ಧವಾಗಿ ಸ್ಟೇಟ್‌ಮೆಂಟ್ ಕೊಡುತ್ತಾ ಹೋದರೆ ನಾಳೆ ದಿವಸ ಇಲ್ಲಿರುವಂತಹ ಒಂದು ಸರ್ಕಾರ ಸಹ ಹಾಳಾಗುತ್ತದೆ. ಈ ಮೂರು ಪಕ್ಷಗಳು ಒಂದಾಗಿರುವ ಬಗ್ಗೆ ಮಾನ್ಯ ದೇವೇಗೌಡರ ನಿಲುವು ಏನೆಂಬುದು ಗೊತ್ತಿಲ್ಲ, ಮುಂದೆ ಶ್ರೀ ಚಂದ್ರಶೇಖರ್ ಅವರ ನಿಲುವು ಏನಾಗುತ್ತದೆಂಬುದು ಗೊತ್ತಿಲ್ಲ. ಮಾನ್ಯ ಬೊಮ್ಮಾಯಿ ಅವರು ಇಲ್ಲಿನ ಜನತಾಪಕ್ಷವನ್ನು ಜನತಾದಳ ಎಂದು ಡಿಕ್ಲೇರ್ ಮಾಡುವ ಹೊತ್ತಿಗೆ ಇಲ್ಲಿರುವಂತಹ ದಳಗಳೆಲ್ಲಾ ಆಚೆ ಈಚೆ ಕಳಚಿ ಬಿದ್ದರೆ ಏನು ಮಾಡುವುದು ? ಈ ಒಂದು ಅನುಮಾನ ಈಗಾಗಲೇ ಅನೇಕರಿಗೆ ಬಂದಿದೆ. ಇದರಿಂದ ಈ ರಾಜ್ಯದ ಆಡಳಿತದ ಮೇಲೆ ದೊಡ್ಡ ಒಂದು ದುಷ್ಪರಿಣಾಮ ಖಂಡಿತವಾಗಿಯೂ ಆಗುತ್ತದೆ. ನೀವು ಕಾಂಗ್ರೆಸ್‌ಗೆ ಪರ್ಯಾಯವಾಗಿ ಮತ್ತೊಂದು ಪಕ್ಷ ಕಟ್ಟುವ ಬಗ್ಗೆ ನಮ್ಮ ಅಭ್ಯಂತರ ಏನೂ ಇಲ್ಲ.ದೇರ್ ಶುಡ್ ಬಿ ಎ ಮೀನಿಂಗ್‌ಫುಲ್ ಆಲ್ಟರ್ನೇಟೀವ್ ಅಲ್ಟರ್ನೇಟೀವ್‌ಗೆ ಸರಿಯಾದ ಪ್ರೊಜೆಕ್ಷನ್ ಕೊಡಿ. ಈಗ ವಿ.ಪಿ. ಸಿಂಗ್ ಅಧಿಕಾರ ತೆಗೆದುಕೊಳ್ಳುವುದೇ ಇಲ್ಲ ಎಂದು ಬೊಮ್ಮಾಯಿಯವರು ಹೇಳುತ್ತಾರೆ, ಅವರು ಹಿಂದುಗಡೆ ಇದ್ದು ಕೊಂಡು ಅಧಿಕಾರಕ್ಕೆ ತಂದರೆ ಜಯಪ್ರಕಾಶ್ ನಾರಾಯಣ್‌ರವರು ಅಧಿಕಾರಕ್ಕೆ ಬಂದೆ ಮೊರಾರ್ಜಿ ದೇಸಾಯಿಯವರನ್ನು ಅಧಿಕಾರಕ್ಕೆ ತಂದು ಏನು ಗತಿ ಆಯಿತು ಎಂದು ಅವರ ಮೂವ್‌ಮೆಂಟ್‌ನಲ್ಲಿ ಹೇಳಿದಂತೆ ಇವರ ಎಲ್ಲಾ ವ್ಯಾಲ್ಯೂಸ್‌ಗೂ ಅದೇ ಗತಿ ಆಗುತ್ತದೆ. Is it not a fraud on the people of India ? ಅವರು ಅಧಿಕಾರಕ್ಕೆ ಬರುತ್ತೇನೆ ಎಂದು ಹೇಳಬೇಕು ಇಲ್ಲವೇ ಅಧಿಕಾರಕ್ಕೆ ಬರುವುದಿಲ್ಲ ಎಂದರೆ,ನಾನು ಅಲ್ಟರ್ನೇಟೀವ್ ಎನ್ನುವ ಅಭಿಪ್ರಾಯ ಅವರಿಗಾಗಲಿ ಬೇರೆಯವರಿಗಾಗಲೀ ಇರಬಹುದು, ಈ ರೀತಿ ಹಲವಾರು ಸಂದೇಹಗಳನ್ನು ರಾಜಕೀಯವಾಗಿ ನಮ್ಮ ರಾಜ್ಯಕ್ಕೆ ಸವಾಲಾಗಿ ಒಡ್ಡಿರತಕ್ಕಂಥ ಸಮ್ಮೇಳನ ಅದು. ಆದುದರಿಂದ ದಯವಿಟ್ಟು ಅಷ್ಟು ಲಘುವಾಗಿ ಪರಿಗಣಿಸಬೇಡಿ. Don't try to be in the ivory tower of illusion ಇದು ನಾವು ಹೇಳುತ್ತಾ ಇರ ತಕ್ಕಂಥಾದ್ದು ಇದು ಈಗ ನಿಮಗೆ ಪಥ್ಯ ಆಗದೇ ಇರಬಹುದು. ನಿಮಗೆ ನಾಳೆ ಯಾವುದು ವಿಷ ಆಗುತ್ತಾ ಇದೆ ಎನ್ನತಕ್ಕಂಥಾದ್ದೇ ನಾವು ಹೇಳುತ್ತಾ ಇದ್ದೇವೆ, ಅನಿವಾರ್ಯವಾಗಿ ಹೇಳುತ್ತಾ ಇದ್ದೇವೆ. ಅಥವಾ ನೀವು ಅಡ್ವೈಸ್ ಕೇಳಿಲ್ಲ ಅಥವಾ ನಾವು ಹೇಳಿದರೂ ನೀವು ಕೇಳುವುದಿಲ್ಲ ಅದು ಬೇರೆ ವಿಚಾರ ಆದರೆ ಇರುವ ವಿಷಯವನ್ನು ಇದ್ದ ಹಾಗೆ ಹೇಳಬೇಕಾದ ಜವಾಬ್ದಾರಿ ನಮ್ಮದು. ಆದ್ದರಿಂದ ಹೇಳುತ್ತಾ ಇದ್ದೇವೆ, ಬೇಕಾದರೆ ಇಟ್ಟುಕೊಳ್ಳಿ ಸಾಕಾದರೆ ಬಿಟ್ಟುಬಿಡಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಕೊನೆಯ ಭಾಷಣಕಾರರಾದಂಥ ಗೆಳೆಯ ಶ್ರೀನಿವಾಸ್‌ರವರ ಹಿತವಚನ ಕೇಳಿದ್ದೇನೆ, ಅದಕ್ಕೆ ತುಂಬ ಅಭಾರಿಯಾಗಿದ್ದೇನೆ. ಅವರು ನನಗೆ ಎಚ್ಚರಿಕೆ ಕೊಟ್ಟಿದ್ದಾರೆ, ನನ್ನ ಬಗ್ಗೆ, ನಮ್ಮ ಸರ್ಕಾರದ ಬಗ್ಗೆ, ನಮ್ಮ ಪಕ್ಷದ ಬಗ್ಗೆ ವಿರೋಧಪಕ್ಷದ ಒಂದು ಯೂನಿಟಿ ಬಗ್ಗೆ ಅತ್ಯಂತ ಕಳಕಳಿಯಿಂದ, ಅಂತಃಕರಣದಿಂದ ಮಾತನಾಡಿದ್ದಾರೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ನಮಗೆ ಏನೆಂದರೆ, ನಾಳೆ ಚುನಾವಣೆಗೆ ಹೋದಾಗ ನಾವು ಯಾರನ್ನು ಬಯ್ಯಬೇಕು, ನೀವು ವೇಷ ಬದಲಾಯಿಸಿಕೊಂಡುಬಿಟ್ಟರೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಆದಕ್ಕೆ ಹೇಳುತ್ತಾ ಇದ್ದೇನೆ, ಅವರ ಅಂತಃಕರಣದ ಹಿತ ನುಡಿಗೆ ತುಂಬ ಅಭಾರಿಯಾಗಿದ್ದೇನೆ. ಮಾನ್ಯ ಅಧ್ಯಕ್ಷರೇ, ಇಲ್ಲಿ ಮುಖ್ಯವಾಗಿ ಎರಡು ವಿಚಾರಗಳು ಪ್ರಸ್ತಾಪವಾಗಿದೆ. ಅದು ಏನೆಂದರೆ, ಸರ್ಕಾರಿ ಯಂತ್ರವನ್ನು ಮೊನ್ನೆ ನಡೆದಂಥ ಸಮ್ಮೇಳನದಲ್ಲಿ ದುರುಪಯೋಗ ಮಾಡಿಕೊಂಡಿದ್ದಾರೆ ಎನ್ನುವುದು ಒಂದು, ಇನ್ನೊಂದು ಹೊಸ ಪಕ್ಷದ ಉದಯದಿಂದ ಅದರ ಪರಿಣಾಮ ಏನು ಬಂದಿದೆ ಎನ್ನುವುದು. ಈ ಸರ್ಕಾರಿ ಯಂತ್ರ ದುರುಪಯೋಗವಾಗಿದೆ ಎನ್ನುವ ಮಾತನ್ನು ಅವರು ವಿರೋಧಪಕ್ಷದಲ್ಲಿದ್ದು ಹೇಳಲೇಬೇಕು, ಹೇಳುತ್ತಾ ಇದ್ದಾರೆ. ದುರುಪಯೋಗ ವಾಗಿಲ್ಲ ಎನ್ನುವುದು ಅವರಿಗೇ ಸಂಪೂರ್ಣವಾಗಿ ಗೊತ್ತಿದೆ, ಮನವರಿಕೆ ಇದೆ. ಆದರೂ ಹೇಳಬೇಕಲ್ಲಾ ಎಂದು ಹೇಳುತ್ತಿದ್ದಾರೆ. ಈ ಸಮ್ಮೇಳನದಲ್ಲಿ ಕರ್ನಾಟಕ ರಾಜ್ಯದಲ್ಲಿ, ಬೆಂಗಳೂರಿನಲ್ಲಿ ಎಂದೂ ಕಾಣದಷ್ಟು ಜನ, 2 ಲಕ್ಷಕ್ಕಿಂತ ಹೆಚ್ಚು ಜನ ಸೇರಿದ್ದರು.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಬೆಂಗಳೂರಿನ ಇತಿಹಾಸದಲ್ಲಿ ಇಷ್ಟು ಜನ ಯಾವಾಗಲೂ ಸೇರಿಲ್ಲ, ರಿಕಾರ್ಡ್ ನೋಡಿ

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ. ನಾನು ಕಾಂಗ್ರೆಸ್ ಮೇಳಗಳು ಯಾವರೀತಿ ನಡೆದಿವೆ ಎನ್ನುವುದನ್ನು ಆಮೇಲೆ ಹೇಳುತ್ತೇನೆ, ಅದಕ್ಕೆ ಆಮೇಲೆ ಬರುತ್ತೇನೆ. ಈವತ್ತು ಕೆ.ಎಸ್.ಆರ್.ಟಿ.ಸಿ. ಬಸ್‌ಗಳು ಬಂದಿದ್ದಾವೆ, ಸುಮಾರು ೭೫೦–೬೦ ಬಸ್‌ಗಳು ಬಂದಿವೆ, ಅದಕ್ಕೆ ಹಣ ಕಟ್ಟಿದ್ದಾರೆ. ಕೆ.ಎಸ್.ಆರ್.ಟಿ.ಸಿ. ಅಧಿಕೃತ ಇರುತ್ತದೆ, ಅನಧಿಕೃತ ಅಲ್ಲ. ಬೇರೆ ಖಾಸಗಿ ಬಸ್‌ಗಳಿವೆ, ಲಾರಿಗಳಿವೆ ಟೆಂಪೊಗಳಿವೆ, ಅವೆಲ್ಲಾ ಬಂದಿವೆ, ನಾನು ಇಲ್ಲ ಎಂದು ಹೇಳುವುದಿಲ್ಲ. ಯಾವುದೇ ಒಂದು ರಾಜಕೀಯ ಪಕ್ಷದ ಸಮ್ಮೇಳನ ಆದಾಗ ಜನ ಬರುತ್ತಾರೆ. ಇದರಲ್ಲಿ ನಾನು ಬಹಳ ಹೆಮ್ಮೆಯಿಂದ ಹೇಳುತ್ತಾ ಇದ್ದೇನೆ, ಇಷ್ಟೊಂದು ಜನ ಸಮೂಹ ಸ್ವಯಂಸ್ಫೂರ್ತಿಯಿಂದ ತಮ್ಮ ಚಾರ್ಜನ್ನು ತಾವೇ ಕೊಟ್ಟುಕೊಂಡು, ತಮ್ಮ ಊಟವನ್ನು ತಾವೇ ಕಟ್ಟಿಕೊಂಡು ಬಂದಿದ್ದಾರೆ. ಜಿಲ್ಲೆಯಿಂದ ಬಂದವರಿಗೆ ಇಲ್ಲಿ ಊಟದ ವ್ಯವಸ್ಥೆಯಿಲ್ಲ. ತಮ್ಮ ಊಟ ತಾವೇ ಕಟ್ಟಿಕೊಂಡು ಬಂದಿದ್ದಾರೆ. ಈ ಒಂದು ಮೇಳ ಏನಿದೆ ಇದು ಜನತಾಪಕ್ಷದ ಬಗ್ಗೆ ಜನರ ಪ್ರೀತಿಯನ್ನು ಎತ್ತಿ ತೋರಿಸುತ್ತಾ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದನ್ನು ಹೇಳಬೇಕಾದರೆ ನಿಮಗೂ ನಗು ಬರುತ್ತಾ ಇದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನನಗೆ ಯಾವಾಗಲೂ ಸಿಟ್ಟು ಬರುವುದಿಲ್ಲ. ಇದು ಒಂದು ಸ್ಪಷ್ಟವಾದಂಥ ನಿದರ್ಶನ. ಜನತಾ ಸರ್ಕಾರದ ಬಗ್ಗೆ ಜನತಾ ಪಕ್ಷದ ಬಗ್ಗೆ ಕರ್ನಾಟಕ ಜನತೆಯ ಪ್ರೇಮ, ವಿಶ್ವಾಸ ಏನು ಎನ್ನುವುದನ್ನು ಜನತೆ ತೋರಿಸಿದ್ದಾರೆ. ಅದಕ್ಕಾಗಿ ಹೊಟ್ಟೆಕಿಚ್ಚು ಪಟ್ಟುಕೊಂಡರೆ ನಾವು ಏನು ಮಾಡುವುದಕ್ಕಾಗುತ್ತದೆ ? ಬಿ.ಡಿ.ಎ. ಮನೆಗಳಿಗೆ ಬಾಡಿಗೆ ಕೊಟ್ಟಿದ್ದೇವೆ. ಎಲೆಕ್ಟ್ರಿಸಿಟಿ ಬೋರ್ಡಿಗೆ ದುಡ್ಡು ಕೊಟ್ಟಿದ್ದೇವೆ. ನೀರಿಗೆ ಹಣ ತುಂಬಿದ್ದೇವೆ. ಎಂದೋ ಮಾಡುತ್ತಿದ್ದ ರಸ್ತೆಗಳ ಕೆಲಸವನ್ನು ಅಂದು ಮಾಡಿದ್ದಾರೆ. ಅದು ಕಂಟ್ರಾಕ್ಟ್‌ದಾರರು ಮಾಡಲೇ ಬೇಕಾದ ಕೆಲಸ. ಅಖಿಲ ಭಾರತ ಮಟ್ಟದಿಂದ ಬಂದಂಥ ಎಲ್ಲಾ ಪ್ರತಿನಿಧಿಗಳು, ಎಷ್ಟು ಸುವ್ಯವಸ್ಥೆ, ಸ್ವಯಂಸೇವಕರು ಮಾಡಿದಂಥ ಸೇವೆ, ಬೆಂಗಳೂರು ನಗರದ ಬಗ್ಗೆ, ಮತ್ತು ಕನ್ನಡಿಗರ ಬಗ್ಗೆ ಮೆಚ್ಚಿಗೆಯನ್ನು ವ್ಯಕ್ತಪಡಿಸಿ ಹೋಗಿದ್ದಾರೆ. ನಮಗೆಲ್ಲಾ ಗೊತ್ತಿರುವಂತೆ, ಸಮ್ಮೇಳನಗಳು ಆದಾಗ ಅಂಗಡಿಗಳ ಲೂಟಿ, ಹೋಟೆಲುಗಳ ಲೂಟಿ ನಡೆದಿದೆ. ಆದರೆ, ಯಾವುದೇ ಒಂದು ಗಲಾಟೆಯಿಲ್ಲದೆ, ಇಡೀ ಸಮ್ಮೇಳನ ಶಿಸ್ತಿನಿಂದ ಕೂಡಿತ್ತು. ಸಮ್ಮೇಳನಕ್ಕೆ ಬಂದಂಥ ಪ್ರತಿನಿಧಿಗಳು ಶಾಂತಿಯನ್ನು ಕಾಪಾಡಿಕೊಂಡು ಹೋಗಿದ್ದಾರೆ. ಇಡೀ ಬೆಂಗಳೂರು ತುಂಬ ಸಮ್ಮೇಳನದ ಜನ ಇದ್ದರೂ ಇಲ್ಲೂ ಕೂಡ ಒಂದು ಸಣ್ಣ ಘಟನೆ ನಡೆದಿಲ್ಲ. ಹಿಂದೆ ಕಾಂಗ್ರೆಸ್ ಸಮ್ಮೇಳನಗಳು ಆದಾಗ ಏನೇನು ಆಗಿದೆ, ಅಂಗಡಿಗಳು ಎಷ್ಟು ಲೂಟಿಯಾಗಿವೆ.

(ಗೊಂದಲ)

ಅದು ಅವರ ಸಂಸ್ಕೃತಿ, ಇದು ನಮ್ಮ ಸಂಸ್ಕೃತಿ. ಇಂಥ ಸಮ್ಮೇಳನಗಳು ನಡೆದಾಗ, ಬಸ್ಸುಗಳಲ್ಲಿ ಸಾಮಾನ್ಯವಾಗಿ ೪–೫ ಜನ ಹೆಚ್ಚಿಗೆ ಬಂದಿರುತ್ತಾರೆ. ಈ ರೀತಿ ಹೆಚ್ಚಿಗೆ ಬಂದರೆ, ಮಿಸ್‌ಯೂಸ್ ಅಲ್ಲ. ಇಂಥ ಸಮ್ಮೇಳನ ನೀವು ಮಾಡಿದರೂ ಬರುತ್ತಾರೆ. ಇದು ಸಾಮಾನ್ಯ ವಿಚಾರ. ಕಾರ್ಪೊರೇಷನ್ ಇಂಥ ಸಮ್ಮೇಳನಗಳು ನಡೆದಾಗ ನಲ್ಲಿ ಹಾಕುವುದು ಹೊಸದೇನೂ ಅಲ್ಲ. ೧೯೮೧ರಲ್ಲಿ ನಾನು ಜನತಾ ಪಕ್ಷದ ಅಧ್ಯಕ್ಷನಾಗಿದ್ದಾಗ ದಕ್ಷಿಣ ರಾಜ್ಯದಳ ಸಮ್ಮೇಳನವನ್ನು ಮೊದಲ ಭಾರಿಗೆ ಅರಮನೆ ಆವರಣದಲ್ಲಿ ಮಾಡಿದೆವು. ಆಗ ಮುಖ್ಯಮಂತ್ರಿಗಳಾಗಿದ್ದ, ಗುಂಡೂರಾಯರನ್ನು, ಸಮ್ಮೇಳನಕ್ಕೆ ಪ್ರತಿನಿಧಿಗಳು ಬರುತ್ತಾರೆ, ತಾವು ಕೆ.ಇ.ಬಿ. ಮತ್ತು ಕಾರ್ಪೊರೇಷನ್‌ಗೆ ಆರ್ಡರ್ ಮಾಡಬೇಕೆಂದು ಕೇಳಿಕೊಂಡೆನು, ಅವರು ಕೂಡಲೇ ಆರ್ಡರ್ ಮಾಡಿದರು. ಪಾಟ್ನಾದಲ್ಲಿ ಕೂಡ ಮಾಡಿದ್ದೆವು ಪಾಟ್ನಾ ಸರ್ಕಾರ ಕೂಡಾ ಸಹಾಯ ಮಾಡಿತ್ತು. ರಾಜಕೀಯ ಪಕ್ಷಗಳ ಸಮ್ಮೇಳನ ನಡೆದಾಗ, ಸಹಾಯ ಮಾಡುವುದು, ಅನುಕೂಲ ಒದಗಿಸಿಕೊಡುವುದು ಪ್ರಜಾಪ್ರಭುತ್ವದ ರೀತಿಯಾಗಿದೆ, ಸಂಸ್ಕೃತಿಯಾಗಿದೆ. ಕಾರ್ಪೊರೇಷನ್‌ನವರು ಅಡಿಷನಲ್ಲಾಗಿ ಟ್ಯಾಪ್‌ಗಳನ್ನು ಇಂಥ ಸಮ್ಮೇಳನಗಳು ನಡೆದಾಗ ಹಾಕಲೇ ಬೇಕಾಗುತ್ತದೆ. ಇದರಲ್ಲಿ ಅಧಿಕಾರಿಗಳನ್ನು ಉಪಯೋಗಿಸಿಕೊಳ್ಳುವ ವಿಚಾರವೇ ಇಲ್ಲ. Remember you are living in glass house. ಕಾಂಗ್ರೆಸ್ (ಐ) ಮಹಿಳಾ ಮೇಳ ಆಯಿತು. ಯುವ

ಮೇಳ ಆಯಿತು, ಸ್ವಚ್ಛತಾ ದೃಷ್ಟಿಯಿಂದ ಕೆಲಸ ಮಾಡಲೇಬೇಕಾಗುತ್ತದೆ. ಪೋಲೀಸ್ ಇಂತಹ ಕೆಲಸ ಮಾಡಬೇಕಾಗುತ್ತದೆ.

೭–೦೧ ಪಿ.ಎಂ.

ನಾಳೆ ಸಂಯುಕ್ತ ರಂಗದ ಪಕ್ಷದ ಅಧ್ಯಕ್ಷರು, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಅಥವಾ ಮೊಯಿಲಿಯವರು ಅದರೆ ಸಮ್ಮೇಳನ ಕರ್ನಾಟಕದಲ್ಲಿ ಮಾಡುವಂಥ ಅವಕಾಶ ನಿಮಗೆ ಬಂದರೆ ಆಗಲೂ ಕೂಡ ಏನು ಸೌಲಭ್ಯಗಳು ಬೇಕೋ ಅದನ್ನು ಕೊಡುತ್ತೇವೆ. ಮಾನ್ಯ ಯಡಿ ಯೂರಪ್ಪನವರಾಗಲಿ, ಸಿ.ಪಿ.ಐ. ಆಗಲಿ, ಸಿ.ಪಿ.ಎಂ. ಆಗಲಿ. ಯಾರೇ ಮಾಡಿದರೂ ಕೂಡ ಸೌಲಭ್ಯ ಕೊಡುತ್ತೇವೆ. ಇದು ಒಂದು ಕರ್ತವ್ಯ. ಈ ವಿಚಾರದಲ್ಲಿ ಹೆಚ್ಚು ವಿವರಕ್ಕೆ ಹೋಗುವುದರಲ್ಲಿ ಅರ್ಥವಿಲ್ಲ. ಮೊನ್ನೆ ಮದ್ರಾಸ್‌ನಲ್ಲಿ ಎ.ಐ.ಸಿ.ಸಿ. ಆಯಿತು, ಎಷ್ಟು ಬಸ್ಸುಗಳು ಹೋಗಿದ್ದವು, ಸರ್ಕಾರಿ ಬಸ್ಸುಗಳು, ಟ್ರೈನ್ಸ್ ಎಷ್ಟು ಬಿಟ್ಟಿದ್ದಾರೆ. ಬಾಂಬೆಯಲ್ಲಿ ಎ.ಐ.ಸಿ.ಸಿ. ಆದಾಗ ಬಸ್ಸುಗಳನ್ನು, ಟ್ರೈನುಗಳನ್ನು ಪ್ಲೈಟ್ಸ್‌ಗಳನ್ನು ಬಾಂಬೆಗೆ ಡೈವರ್ಟ್ ಮಾಡಿದರು. ಜನರು ಹೋಗಬೇಕಾಗುತ್ತದೆ. ಪೊಲಿಟಿಕಲ್ ಪಾರ್ಟೀಸ್ ಮಸ್ಟ್ ಮೋಟ್. ನಾನು ಮಾನ್ಯ ಗುಂಡೂರಾವ್ ಅವರನ್ನು ನೆನಸಿಕೊಂಡೆ, ನೀವು ಸಹ ಸರ್ಕಾರದಲ್ಲಿ ಇದ್ದಿರಿ ಆಗ. ಇದು ಕೋಡ್ ಆಫ್ ಕಾಂಡಕ್ಟ್, ಕೋಡ್ ಆಫ್ ಕಾಂಡಕ್ಟ್ ಎವರಿ ಪಾರ್ಟಿ ವಿಲ್ ಫಾಲೋ, ತಮಿಳುನಾಡಿನಲ್ಲಿ ಎ.ಐ.ಸಿ.ಸಿ. ಆಯಿತು. ಮೊದಲನೆಯ ದಿವಸ ೫೦ಕೋಟಿ ರೂಪಾಯಿ ಹಣ ಖರ್ಚು ಮಾಡಿದರು. ೫೦ ಸಾವಿರ ಜನ ಇರಲಿಲ್ಲ. ಪ್ರೆಸ್‌ನಲ್ಲಿ ಎಲ್ಲಾ ಬ್ಲಾಕ್ ಫೋಟೋ ತೋರಿಸಿದ್ದಾರೆ. ನೆಕ್ಸ್ಟ್ ಡೇ ಏನಾಯಿತು ? ಒಬ್ಬೊಬ್ಬರಿಗೆ ೨೦ ರೂಪಾಯಿ, ಊಟ ಎಲ್ಲಾ ಕೊಡುತ್ತೇವೆಂದು ಚಿದಂಬರಮ್ ಹೇಳಿದರೂ ಕೂಡ ಜನರು ಇರಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸತ್ಯಕ್ಕೆ ದೂರವಾದ ಮಾತುಗಳನ್ನು ಹೇಳುವುದರಲ್ಲಿ ಅವರು ಪ್ರವೀಣರು.

ಶ್ರೀ ಎಸ್.ಆರ್. ಬೊಮ್ಮಾಯಿ.—ಇಲ್ಲಿ ಸ್ವಯಂಬುದ್ಧಿಯಿಂದ ಬಂದರು. ಅವರ ಪಕ್ಷಕ್ಕೆ ಹಣ ಕೊಟ್ಟರೂ ಹೋಗುವುದಿಲ್ಲ ಆ ಸ್ಥಿತಿಗೆ ಬಂದಿದೆ. ಮಾನ್ಯ ಶ್ರೀನಿವಾಸ್ ಅವರೇ ದುಡ್ಡು ಕೊಡುತ್ತೇವೆಂದರೂ ನಿಮ್ಮ ಪಕ್ಷದ ಸಭೆಗೆ ಜನರು ಬರುವುದಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇನ್ನೂ ಕೆಲವು ದಿವಸ ಇದೇ ಭ್ರಮೆಯಲ್ಲಿ ಇರುವುದು ಒಳ್ಳೆಯದು.

ಶ್ರೀ ಎಸ್.ಆರ್. ಬೊಮ್ಮಾಯಿ.—ಕಾಂಗ್ರೆಸ್ (ಐ) ಪರಿಸ್ಥಿತಿ ಎಲ್ಲಿಗೆ ಬಂದಿದೆ ಅಂದರೆ ಇವೊತ್ತು ಹಣ ಕೊಡುತ್ತೇವೆ, ಅಧಿಕಾರ ಕೊಡುತ್ತೇವೆ, ಸ್ವರ್ಗ ಕೊಡುತ್ತೇವೆ ಎಂದು ಹೇಳಿದರೂ ಜನರು ಹೋಗುವುದಿಲ್ಲ, ಆ ಪರಿಸ್ಥಿತಿಯಲ್ಲಿ ಇದ್ದಾರೆ. ಇವೊತ್ತು ರಾಷ್ಟ್ರದ ರಾಜಕೀಯದ ಬಗ್ಗೆ ಹೇಳ ಬೇಕಾದರೆ ಹೇಳಬೇಕಾಗುತ್ತದೆ. ಉತ್ತರದಲ್ಲಿ ಎಲ್ಲಾ ಲೋಕಸಭೆಗಳ ಬೈ ಎಲೆಕ್ಷನ್ ಆಯಿತು. ಸಂಪೂರ್ಣವಾಗಿ ಕಾಂಗ್ರೆಸ್ (ಐ) ಸೋತು ಹೋಗಿದೆ.

ಶ್ರೀ ಎಂ. ವೀರಪ್ಪ ಮೋಯಿಲಿ.—ಎಲ್ಲಿ ಸಂಪೂರ್ಣವಾಗಿ ಸೋತು ಹೋಯಿತು ? ಮಧ್ಯ ಪ್ರದೇಶದಲ್ಲಿ ನೀವು ಬಂದಿದ್ದೀರಾ ? ರಾಜಸ್ಥಾನದಲ್ಲಿ, ಗುಜರಾತ್‌ನಲ್ಲಿ ನೀವು ಬಂದಿದ್ದೀರಾ ? ತ್ರಿಪುರಾದಲ್ಲಿ ತಾವು ಬಂದಿದ್ದೀರಾ ? ಅಲಹಾಬಾದ್ ವಿ. ಪಿ. ಸಿಂಗ್ ಅಂದರೆ ಅದೇ ಭ್ರಮೆ, ಸರ್ವಾಂತರ್ಯಾಮಿ, ನಿಮಗೆ ಅಲಹಾಬಾದೇ ಈ ದೇಶ.

ಶ್ರೀ ಎಸ್.ಆರ್. ಬೊಮ್ಮಾಯಿ.—ತಾವು ಏತಕ್ಕೆ ಇಷ್ಟು ಉದ್ವೇಗದಿಂದ ಮಾತನಾಡುತ್ತಿದ್ದೀರಿ? ನಾಲ್ಕು ಪಕ್ಷಗಳು ಕೂಡಿ ಒಂದು ಆಗತಕ್ಕಂಥ ನಿರ್ಣಯದಿಂದ they are shivering ಇಲ್ಲಿ ಅಲ್ಲಾ, ಡೆಲ್ಲಿ ಗದ್ದುಗೆ ನಡುಗುತ್ತಿದೆ. ನಿಮ್ಮ ಮಾತುಗಳು ಏನು ಹೇಳುತ್ತಿವೆ ಅಂದರೆ, ನಿಮ್ಮ ಮನಸ್ಸಿನಲ್ಲಿರತಕ್ಕ ವೇದನೆ, ಅಂಜಿಕೆ, ಭ್ರಮೆ ಹೇಳುತ್ತಿದ್ದೀರಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಬೆಳಿಗ್ಗೆ ಮಾತನಾಡುವಾಗ ನೋಡಬೇಕಾಗಿತ್ತು, ಎಲ್ಲರೂ ಗಡ ಗಡ ನಡುಗುತ್ತಿದ್ದರು.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರಿಗೆ ಗೊತ್ತಾಗಿದೆ, ಮುಂದಿನ ಚುನಾವಣೆಯಲ್ಲಿ ನಾವು ಆರಿಸಿ ಬರುವುದಿಲ್ಲ ಎಂದು ಅವರಿಗೆ ಸ್ಪಷ್ಟವಾಗಿ ಗೊತ್ತಾಗಿದೆ. ಮಾನ್ಯ ಕೆ. ಹೆಚ್. ಶ್ರೀನಿವಾಸ್ ಅವರಿಗೆ ಕೊನೆಯ ಅವಕಾಶ ಈ ಸಭೆಯಲ್ಲಿ ಬಂದು ಚರ್ಚೆ ಮಾಡತಕ್ಕಂಥಾದ್ದು.

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.—ತಾವು ಹೋದಸಾರಿ ಎಷ್ಟು ಓಟುಗಳನ್ನು ತೆಗೆದುಕೊಂಡು ಗೆದ್ದಿದ್ದೀರಿ, ಎರಡು ಸಾವಿರ ಓಟು ತೆಗೆದುಕೊಂಡು ಗೆಲ್ಲಲಿಲ್ಲ ನೀವು.

(ಗೊಂದಲ)

ನಾನು ಪ್ರತಿಸಾರಿಯೂ ಕ್ಷೇತ್ರ ಬದಲಾವಣೆಯನ್ನು ಮಾಡಿಲ್ಲ. ಒಂದೇ ಕ್ಷೇತ್ರದಿಂದ ನಿಲ್ಲುತ್ತಿದ್ದೇನೆ ...

(ಗೊಂದಲ)

ಶ್ರೀ ಎಂ. ವೀರಪ್ಪ ಮೋಯ್ಲಿ.—ಕ್ಷೇತ್ರವನ್ನು ಬದಲಾವಣೆ ಮಾಡಿಕೊಳ್ಳಲಿಲ್ಲವೇ ? ಹಾಗಾದರೆ ನಿಮ್ಮದು ಕುಂದುಗೋಳ ಕ್ಷೇತ್ರವಲ್ಲವೇ ? ಹುಬ್ಬಳ್ಳಿ (ರೂರಲ್‌ಗೆ) ಏತಕ್ಕೆ ಬಂದಿರಿ ? ಕುಂದಗೋಳವನ್ನು ಏತಕ್ಕೆ ಬಿಟ್ಟಿರಿ ?

ಶ್ರೀ ಎಸ್. ಆರ್, ಬೊಮ್ಮಾಯಿ.—ಏತಕ್ಕೆ ಬಿಟ್ಟೆ ಎಂದರೆ ನನ್ನ ಮೊದಲಿನ ಕ್ಷೇತ್ರ ಇಭ್ಭಾಗವಾಯಿತು......

ಶ್ರೀ ಕೆ. ಹೆಚ್. ಶ್ರೀನಿವಾಸ್.—ನೀವು ನನಗೆ ಸವಾಲು ಹಾಕಿರತಕ್ಕದ್ದು. ನಾನು ನಿಮಗೆ ಇಂಥ ಮಾತನ್ನು ಹೇಳುವುದಕ್ಕೆ ಬರುವುದಿಲ್ಲ. ಇಂಥ ಚಿಲ್ಲರೆ ಮಾತನ್ನು ನಾನು ಯಾರಿಗೂ, ಎಂದು ಹೇಳಿಲ್ಲ. ನೀವು, ನನಗೆ ಏತಕ್ಕೆ ಹೇಳುತ್ತೀರಿ ? ಇದು ಕೊನೆಯ ಅವಕಾಶ ಅಂತ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ವೈಯಕ್ತಿಕವಾಗಿ ಹೇಳಿಲ್ಲ. ನಿಮ್ಮ ಪಕ್ಷ ಬರುವುದಿಲ್ಲ ಅಂತ ಅಂದೆ. ನಿಜವಾಗಿ ಜನತಂತ್ರದಲ್ಲಿ ನಂಬಿಕೆ ಇರತಕ್ಕ ಪಕ್ಷ ಹುಟ್ಟಿದೆ......

ಶ್ರೀ ಆರ್. ಎನ್. ನಾಯಕ್.—ಮಾನ್ಯ ದೇವೇಗೌಡರು ಹೇಳುತ್ತಿದ್ದರು, ರಾಜಕಾರಣ ಮಾತನಾಡಬಾರದು ಅಂತ......

(ಗೊಂದಲ)

ಶ್ರೀ ಪಟಮಕ್ಕಿ ರತ್ನಾಕರ್.—ತಾವು ಮುಖ್ಯ ಮಂತ್ರಿಗಳಾಗಿ ನೀವು ನಮ್ಮನ್ನು ಕರೆಯುತ್ತಿದ್ದೀರಿ ಎಂದರೆ ಇದು ಸರಿಯೇ ?

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ —ಅವರ ರಾಜಕೀಯ ಬಂಡವಾಳವೇ ಅಷ್ಟು. ಬೇರೆಯವರು ಕೊಟ್ಟರೆ ಉಂಟು, ಇಲ್ಲದಿದ್ದರೆ ಇಲ್ಲ,

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ವಿ. ಪಿ. ಸಿಂಗರು ಜಗಳಮಾಡಿಕೊಂಡು ಬರುವವರೆಗೂ ನಿಮ್ಮ ಪಕ್ಷ ಹಾಗೆಯೇ ಹೋಗುತ್ತಿರುತ್ತದೆ......

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಲೇಬೇಕಾಗುತ್ತದೆ. ಕರ್ನಾಟಕದ ಜನತೆ ಜನತಾ ಪಕ್ಷದ ಬಗ್ಗೆ ತೋರಿದ ಪ್ರೀತಿ, ಅವರು ನಡೆಸುಕೊಂಡಂಥ ಶಿಸ್ತು, ಶಾಂತಿಗಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸ ಬಯಸುತ್ತೇನೆ.

ಇನ್ನು ಪಕ್ಷದ ಮರ್ಜರ್ ಬಗ್ಗೆ ಇವರು ಹೇಳಿದ್ದಾರೆ. ರಾಜಕೀಯ ಪಕ್ಷಗಳ ಒಡಕು ಈ ರಾಷ್ಟ್ರದ ಒಂದು ದೌರ್ಭಾಗ್ಯ. ಕಾಂಗ್ರೆಸ್ ಪಕ್ಷ ಹಲವಾರುಸಾರಿ ಒಡೆಯಿತು. ಆದರೆ ಆ ಪಕ್ಷದ ಸರ್ಕಾರಗಳೂ ಇದ್ದವು, ಮತ್ತು ಆ ಪಕ್ಷದ ಶಾಸಕರೂ ಇದ್ದರು. ಸರ್ಕಾರವನ್ನು ನಡೆಸತಕ್ಕ ಪಕ್ಷ

ಇಬ್ಭಾಗ ಆದಾಗ ಆ ಸರ್ಕಾರ ಬಿದ್ದು ಹೋಗಲಿಲ್ಲ. ಅದೇರೀತಿ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಇಬ್ಭಾಗ ಆದಾಗ ಮಾನ್ಯ ದೇವರಾಜ ಅರಸರ ಸರ್ಕಾರವೇ ಮುಂದುವರಿಯಿತು.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಖರ್ಗೆಯವರೂ ಆ ಮಂತ್ರಿಮಂಡಲದಲ್ಲಿ ಇದ್ದರು. ಆಗ ಸರ್ಕಾರವೇ ಇಲ್ಲವೆಂದು ನಾವೇನೂ ಹೇಳಲಿಲ್ಲ. ಅವರ ಸದಸ್ಯತ್ವ ಹೋಗಲಿಲ್ಲ ಇದರ ಬಗ್ಗೆ ಸ್ಪೀಕರ್‌ರವರು ವಿಚಾರ ಮಾಡಲಿಲ್ಲ. ಗೌರ್ನರ್‌ರವರೂ ಈ ಬಗ್ಗೆ ಕೇಳಲಿಲ್ಲ. ಏಕೆಂದರೆ ಪಕ್ಷಗಳು ಇಬ್ಭಾಗವಾಗುವುದಕ್ಕೆ ರಾಜಕೀಯ ಸ್ವಾತಂತ್ರ್ಯವಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಆಪತ್ತು ಈ ಆ್ಯಂಟಿ ಡಿಫೆಕ್ಷನ್ ಬಿಲ್ ಇರಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದಕ್ಕೂ ನಾನು ಹೇಳುತ್ತೇನೆ. ಮಾನ್ಯ ದೇವರಾಜ ಅರಸ್‌ರವರು ಕರ್ನಾಟಕ ಕಾಂಗ್ರೆಸ್‌ನ್ನು ಮಾಡಿದಾಗ ನಿಮ್ಮ ನಾಯಕರು ಯಾರು ಆಗಿದ್ದರು. ೧೯೭೮ರಲ್ಲಿ ಯಾವ ಪ್ರಣಾಳಿಕೆ ಇತ್ತು ಯಾವ ಸಿಂಬಲ್ ಇತ್ತು, ಈವತ್ತು ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಇದು ಜಗತ್ತಿಗೆ ಗೊತ್ತಿರತಕ್ಕಂಥ ಪ್ರಶ್ನೆ. ಇದು ಇವತ್ತಿನದಲ್ಲ.

ಶ್ರೀ ಎಸ್, ಆರ್. ಬೊಮ್ಮಾಯಿ.—ಅದನ್ನೇ ಹೇಳುತ್ತಿದ್ದೇನೆ. ಅದೇರೀತಿಯಲ್ಲಿ ಆಹೊತ್ತು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಎಂದು ಏನು ಇತ್ತು ಅದು ಹೋಗಿ ಈಗ ಕಾಂಗ್ರೆಸ್ (ಐ) ಆಗಿದೆ, ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸತ್ತುಹೋಗಿದೆ. Indian National Congresy has ceased to exist.

SRI M. VEERAPPA MOILY.—According to the Election Commission, it is Indian National Congress. You must have a minimum knowledge of the election law.

SRI S, R. BOMMAI.—Yes. I know the election law.

SRI M. VEERAPPA MOILY.—According to the Election Commission it is Indian National Congress and that is the only Congress existing in the country.

ಶ್ರೀ ಎಸ್ ಆರ್. ಬೊಮ್ಮಾಯಿ.—ಹಾಗಿದ್ದರೆ ನಿಮ್ಮ ಬೋರ್ಡ್‌ಗಳೆಲ್ಲಾ ಕಾಂಗ್ರೆಸ್ (ಐ) ಆಗುತ್ತದೆ. Why do y ou call yourself 'Congress-I' ? ಐ ತೆಗೆದುಹಾಕಿ.

ಶ್ರೀ ಕೆ. ಎಚ್. ಶ್ರೀನಿವಾಸ್.—ಬೇರೆ ಬೇರೆ ಕಾಂಗ್ರೆಸ್ ಎಂದು ಹೇಳಿದ್ದಾರಲ್ಲಾ. ಅದಕ್ಕೋಸ್ಕರವಾಗಿ only to distinguish it. ಅದಕ್ಕೆ ರೀಸನ್ ಇಲ್ಲ.

(ಗೊಂದಲ)

ಅಧ್ಯಕ್ಷರು.—ಮಾನ್ಯ ನಾಗರತ್ನಮ್ಮನವರೇ ಬಯುಪಟ್ಟು ಕೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಲ್ಲ. ಇಲ್ಲ. ಕಾಂಗ್ರೆಸ್ ಎ. ನಿಂದ ಜಡ್ ವರೆಗೆ ಇದೆ ಅದಲ್ಲ, ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಒಂದು ಇದ್ದುದು. ಈವತ್ತು ಇಂಡಿಯನ್ ಕಾಂಗ್ರೆಸ್ (ಐ) ಎಂದು ಒಂದು ಇದೆ. ಚುನಾವಣೆಯಲ್ಲಿ ಕರೆಯತಕ್ಕಂಥದ್ದೇ ಬೇರೆ, ಸರ್ಕಾರ ಪ್ರಚಾರ ಮಾಡತಕ್ಕಂಥದ್ದು ನಿಮ್ಮ ಪತ್ರಿಕೆಗಳಲ್ಲಿ, ಹ್ಯಾಂಡ್ ಬಿಲ್‌ನಲ್ಲಿ, ಲೆಟರ್ ಹೆಡ್‌ನಲ್ಲಿ ಇರತಕ್ಕಂಥದ್ದು ಕಾಂಗ್ರೆಸ್ 'ಐ'.

ಶ್ರೀ ಕೆ. ಎಚ್. ಶ್ರೀನಿವಾಸ್.—ಇವತ್ತು ೩-೪ ಜನರು ಎಸ್. ಆರ್. ಬೊಮ್ಮಾಯಿ ಎಂದು ಹೆಸರನ್ನು ಇಟ್ಟುಕೊಂಡರೆ ಅದನ್ನು ತಡೆಯಲಿಕ್ಕೆ ಆಗುವುದಿಲ್ಲ.

SRI S. R. BOMMAI.—Then they are committing fraud on the people. You are not Congress-I.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಏತಕ್ಕೆಂದರೆ ಅಲ್ಲಿ ಒಂದು (ಎಸ್) ಎಂದು ಕುಳಿತಿದೆಯಲ್ಲ. ಅದಕ್ಕೋಸ್ಕರವಾಗಿ ಐ' ಎಂದು ಬ್ರಾಕೆಟ್‌ನಲ್ಲಿ ಹೇಳುವುದು.

ಶ್ರೀ ಎಂ. ವೀರಪ್ಪಮೊಯಿಲಿ.— ನಿಮ್ಮ ವಿ. ಪಿ. ಸಿಂಗ್ ಅಂಥವರು* ಕಾಂಗ್ರೆಸ್ ಒಳಗೆ ಬರುತ್ತಾರಲ್ಲಾ ಅದಕ್ಕಾಗಿ ಕಾಂಗ್ರೆಸ್ (ಐ) ಎಂದು ಹೇಳುವುದು.

ಅಧ್ಯಕ್ಷರು.— ಮಾನ್ಯ ಸದಸ್ಯರು ನೀವು ವಿ.ಪಿ. ಸಿಂಗ್ ಬಗ್ಗೆ ಏನು ಹೇಳಿದರಿ It is not in good taste. ಆದ್ದರಿಂದ ಅದನ್ನು ಎಕ್ಸ್‌ಪಂಜ್ ಮಾಡಿರುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.— ಇದರಲ್ಲಿ ಅನ್ ಪಾರ್ಲಿಮೆಂಟರಿ ಏನು ಇದೆ.

ಅಧ್ಯಕ್ಷರು.— ಈಗ ನಿಮ್ಮ ಲೀಡರ್‌ಗಳನ್ನು ಅವರು ಹೇಳುವುದು ಸರಿಯಲ್ಲ ಅವರ ಲೀಡರ್‌ಗಳನ್ನು ನೀವು ಹೇಳುವುದು ಸರಿಯಲ್ಲ. ಲೀಡರ್‌ಗಳನ್ನು ''ಗುಳ್ಳೇನರಿ'' ಎಂದು ಅವರು ಹೇಳುವುದಾಗಲಿ, ನೀವು ಹೇಳುವುದಾಗಲಿ ಛಲೋ ಇರುವುದಿಲ್ಲ. ಅದನ್ನು ಎಕ್ಸ್‌ಪಂಜ್ ಮಾಡಿಸಿರುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಅಧ್ಯಕ್ಷರೇ, ಅವರು ಏನು ಬೇಕಾದರೂ ಹೇಳಲಿ. ಅವರು ಏನು ಶಬ್ದವನ್ನು ಬಳಸಿದರೂ ಅದಕ್ಕೆ ನಾವು ಅಡ್ಡಿ ಬರುವುದಿಲ್ಲ. ಅವರು ಏನು ಹೇಳುತ್ತಾರೋ ಹೇಳಿಕೊಳ್ಳಲಿ. ಒಂದು ಗಾದೆ ಇದೆ. ನಾಲಿಗೆ ಕುಲವನ್ನು ಹೇಳುತ್ತದೆ ಅಷ್ಟೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಬಹಳ ಶುದ್ಧವಾಗಿ ಹೇಳಿದರು. ಮೊನ್ನೆ ದಿವಸ ಹೇಳಿದ ಮಾತುಗಳನ್ನೆಲ್ಲಾ ತೆಗೆದು ನೋಡಿಬಿಡಿ ಯಾವುದು ಕುಲವೆಂದು ಗೊತ್ತಾಗುತ್ತದೆ.

ಶ್ರೀ ಎಂ. ವೀರಪ್ಪಮೊಯಿಲಿ.— ಮಾನ್ಯ ಅಧ್ಯಕ್ಷರೇ, ಈ ನಾಲಿಗೆಗೆ ಕುಲವೇ ಇಲ್ಲ. ಕೆಲವು ಕುಲಗಳು ಇದ್ದರೂ ಈ ನಾಲಿಗೆಗೆ ಕುಲವೇ ಇಲ್ಲ.

SRI S. R. BOMMAI.— Yes very secular. ೧೯೭೫ ರಲ್ಲಿ ಎಮರ್ಜನ್ಸಿ ಪಿರಿಯೆಡ್‌ನಲ್ಲಿ ಮಾನ್ಯ ಜೆ.ಪಿ.ಯವರನ್ನು ಜೈಲಿನಲ್ಲಿಟ್ಟಿದ್ದರು, ಜನತಾ ಪಕ್ಷ ಆಯಿತು, ಚುನಾವಣೆಯಲ್ಲಿ ಭಾಗವಹಿಸಿ ಅಧಿಕಾರಕ್ಕೆ ಬಂತು. ಹೋಗುವುದು ಬರುವುದು ಎಲ್ಲರಿಗೂ ಇದ್ದೇ ಇದೆ, ಅದೇನು ದೊಡ್ಡ ಪ್ರಶ್ನೆ ಅಲ್ಲ. ಮೊನ್ನೆ ಮೇ ಒಂದನೇ ತಾರೀಖಿಗೆ ಒಂದು ಫಾರ್ಮಾಲಿಟಿ ಕಂಪ್ಲೀಟ್ ಆಯಿತು. ಮೊನ್ನೆ ನಡೆದಂತಹ ಸಮ್ಮೇಳನದಲ್ಲಿ ಒಂದು ಪಾರ್ಟಿ ಹುಟ್ಟಿದೆ. ಮರ್ಜರ್ ಆಗಬೇಕಾದರೆ ಫಾರ್ಮಾಲಿಟಿ ಏನೆಂದರೆ, ಮರ್ಜ್ ಆಗತಕ್ಕ ಪಕ್ಷಗಳು ತಮ್ಮ ಪಕ್ಷದ ನಿಯಮಾವಳಿ ಪ್ರಕಾರ ಸಭೆ ಸೇರಿ ಹೊಸ ಪಕ್ಷ ಎಂದು ಹೇಳತಕ್ಕದ್ದನ್ನು ನಿರ್ಣಯ ಮಾಡಬೇಕಾಗುತ್ತದೆ. ಆ ಮೇಲೆ ಹೊಸ ಪಕ್ಷ ಆಗಬೇಕಾಗುತ್ತದೆ ಮರ್ಜರ್ ಆಗುವುದಕ್ಕೆ ಈ ಎಲ್ಲಾ ವ್ಯವಸ್ಥೆ ಇದೆ. ಅದೇ ರೀತಿ ಇವತ್ತು ಹೊಸ ಪಕ್ಷ ಹುಟ್ಟಿದೆ. ಇದು ಜನತಾ ದಳದ್ದು. ಇದರ ಫಾರ್ಮಾಲಿಟಿ ಮುಗಿಯುವವರೆಗೆ...

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಕುದುರೆ ಗಾಡಿಯನ್ನು ಎಳೆಯುತ್ತದೆಯೋ ಅಥವಾ ಗಾಡಿಯನ್ನು ಕುದುರೆ ಎಳೆಯುತ್ತದೆಯೋ ?

ಶ್ರೀ ಎಸ್. ಆರ್. ಬೊಮ್ಮಾಯಿ.— ಮರ್ಜರ್ ಫಾರ್ಮಾಲಿಟಿ ಮುಗಿಯುವವರೆಗೆ ಇದು ಜನತಾ ಸರ್ಕಾರ ಎಂದು ಸ್ಪಷ್ಟವಾಗಿ ಹೇಳುತ್ತೇನೆ,

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಆ ಮಾತು ಸತ್ಯಕ್ಕೆ ದೂರವಾದುದು.

ಶ್ರೀ ಎಸ್. ಆರ್ ಬೊಮ್ಮಾಯಿ.— ಅದು ಹೇಗಾಗುತ್ತದೆ ? ಉಳಿದ ವಿಚಾರವನ್ನು ಹೇಳುವ ಅವಶ್ಯಕತೆ ಇಲ್ಲ. ಕೊನೆಯದಾಗಿ, ಮೊಯ್ಲಿಯವರು ವೆರಿ ವೆರಿ ಏಬಲ್ ಅಡ್ವೋಕೇಟ್. ಅವರು ಪಾರ್ಲಿಮೆಂಟರಿ ಪದ್ಧತಿಯನ್ನು ಒಪ್ಪಿಕೊಳ್ಳುತ್ತಾರೆ. ಆದರೆ ವಿಲ್‌ಫುಲ್ ಮಾಡುತ್ತಾರೋ ಅಥವಾ ಬೊನಾಫೈಡಿಯೋ ಗೊತ್ತಿಲ್ಲ. ಒಂದು ಕಾನೂನು ಹೇಳುವಾಗ, ವಾದ ಮಾಡುವಾಗ ಕಾನೂನನ್ನು ಸಂಪೂರ್ಣವಾಗಿ ಓದಬೇಕಾಗುತ್ತದೆ ವಕೀಲರಾದವರು. ಕಾನೂನನ್ನು ಸಂಪೂರ್ಣವಾಗಿ ಮತ್ತು ನ್ಯಾಯವಾಗಿ ಹೇಳಬೇಕಾಗುತ್ತದೆ. ಮೊಯ್ಲಿಯವರು...

---

* ಅಧ್ಯಕ್ಷರ ಆದೇಶದ ಮೇರೆಗೆ ಗುರುತಿಸಿರುವ ಭಾಗವನ್ನು ತೆಗೆದುಹಾಕಲಾಗಿದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಕಾನೂನನ್ನು ಪ್ರಾಮಾಣಿಕವಾಗಿ ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.— ಹೌದು, ಕಾನೂನನ್ನು ಪ್ರಾಮಾಣಿಕವಾಗಿ ಹೇಳಬೇಕಾಗುತ್ತದೆ. ಕಾನೂನು ಹೇಳುವಾಗ ಸರಿಯಾಗಿ ಹೇಳಬೇಕಾಗುತ್ತದೆ. ಮತ್ತು ಸಂಪೂರ್ಣವಾಗಿ ಹೇಳಬೇಕಾಗುತ್ತದೆ. ಅವರು ಏನು ಹೇಳಿದರು ಅಂದರೆ ಡಿಫೆಕ್ಷನ್ ಆ್ಯಕ್ಟನ್ನು ಓದಿದರು, ಅದರಲ್ಲಿ ಸೆಕ್ಷನ್ ೨(ಎ) ನೋಡಿ. ನೀವು ಹೇಳಿದ್ದರಲ್ಲಿ ಸಂಪೂರ್ಣ ಒಪ್ಪಿಗೆ ಇದೆ. ಆದರೆ, ಸೆಕ್ಷನ್-೪

"Disqualification on ground of defection not to apply in case of Merger......

"(1) member of a house shall not be disqualified under sub-paragraph (1) of paragraph 2 where his original political party merges with another political party and he claims that he and any other members of is original political party- (a) have become members of such other political party or, as the case may be, of a new political party formed by such merger;"

ಇದೇ ಹೇಳುತ್ತಿದೆ. ಇದು ಮೊಯ್ಲಿಯವರಿಗೆ ಗೊತ್ತಿಲ್ಲವೆಂದು ಅಲ್ಲ. ನನ್ನ ದೃಷ್ಟಿಯಲ್ಲಿ ಗೊತ್ತಿದೆ. ಆದರೆ ವಾದ ಮಾಡಬೇಕಲ್ಲ ಎಂದು ಮಾಡುತ್ತಾರೆ. ಈ ಕಾನೂನಿನಲ್ಲಿ ಮರ್ಜರ್‌ಗೆ ಪ್ರಾವಿಷನ್ ಇದೆ. ಮರ್ಜರ್ ಆಗಿ ಹೊಸ ಪಕ್ಷವಾದರೆ ಮೆಂಬರ್‌ಷಿಪ್ ಹೋಗುವುದಿಲ್ಲ. ನಾನು ತಮ್ಮ ಬಗ್ಗೆ ಬಹಳ ಗೌರವ ಇಟ್ಟುಕೊಂಡಿದ್ದೇನೆ...

ಶ್ರೀ ಎಂ. ವೀರಪ್ಪ ಮೊಯ್ಲಿ.— ತಾವು ಹೇಳಿದಿರಿ, ತಮ್ಮ ವಾದವನ್ನು ಪುಷ್ಟೀಕರಿಸುವುದಕ್ಕೆ ಹೇಳಿದಿರಿ ಎಂದು. ತಮ್ಮ ಬೋನಾಫೈಡಿ ಬಗ್ಗೆ ನಾನು ಪ್ರಶ್ನೆ ಮಾಡುತ್ತಿಲ್ಲ. ಸೆಕ್ಷನ್ ೨ (ಎ) ಸ್ಪಷ್ಟವಾಗಿದೆ, ಅದನ್ನು ತಾವು ಒಪ್ಪುತ್ತೀರಿ.

Section 2 (a) "If he has voluntarily given up his membership of such political party"

Section 4 "Disqualification on ground of defection not to apply in case of Merger-

"(1) A member of a house shall not be disqualified under sub-paragraph (1) of paragraph 2 where his original political party merges with another political party and he claims that he and any other members of his original political party- (a) have become members of such other political party or, as the case may be, of a new political party formed by such merger" or (b) have not accepted the merger and opted to function as a separate group, as the case may be, shall be deemed to be the political party to which he belongs for the purposes of sub paragraph (1) of paragraph 2 and to be his original political party for the purposes of this sub-paragraph"

ಶ್ರೀ ಎಂ. ವೀರಪ್ಪ ಮೊಯ್ಲಿ.—ನೇರವಾಗಿ ಹೇಳಿದ್ದೀರಿ I agree with that proposition also. Where are you, your party? Even according to your statement just now made, you have not merged. But you have said new party is born. That means, you have disowned your

original party. Merger has not taken place. You are hanging. You are neither in the earth nor in the heaven. You are in the vacuum. ತ್ರಿಶಂಕುವಿನಲ್ಲಿದ್ದೀರಿ. Your situation in the vacuum gets back to the position of 2 (a).

(Interruption)

Let me complete. You clearly attract under 2(a).

SRI S. R. BOMMAI.—Please wait. ನಾನು ಮುಗಿಸಿದ ಮೇಲೆ ಅವರು ಹೇಳಲಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಒನ್ ಮಿನಿಟ್ ಸಾರ್.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಲ್ಲ. ನಾನು ಮುಗಿಸಿದ ಮೇಲೆ ಅವರು ಹೇಳಲಿ.

ಅಧ್ಯಕ್ಷರು.—ಅವರ ಉತ್ತರ ಮುಗಿಯಲಿ, ಆಮೇಲೆ ಹೇಳಿ.

(ಗೊಂದಲ)

SRI S. R. BOMMAI.—Don't try to confuse. I know you are confused. ನೀವು ಇದನ್ನು ಓದಿರಲೇ ಇಲ್ಲ, ನಾನು ಹೇಳಿದ ಮೇಲೆ ಓದಿದ್ದೀರಿ.

SRI M. VEERAPPA MOILY.—Do you agree that merger has taken place ? If you agree that merger has taken place, I agree with you.

ಶ್ರೀ ಎಸ್. ಆರ್. ಬೊಮ್ಮಾಯಿ.—ರಾಜಕೀಯ ಪಕ್ಷಗಳ ಉದಯದ ಬಗ್ಗೆ ಸ್ಪಷ್ಟವಾಗಿ ತಿಳಿದುಕೊಳ್ಳಿ. ಇವತ್ತಲ್ಲ, ಹಿಂದೆಯೇ ಆಯಿತು. ಕಾಂಗ್ರೆಸ್ (ಐ) ಆಯಿತು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ಆಕ್ಟ್ ಬಂದ ಮೇಲೆ ಆದದ್ದು ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಾನೂನು ಬಂದ ಮೇಲೇ ಹೇಳುತ್ತೇನೆ. ಅದರಲ್ಲಿ ಸ್ಪಷ್ಟವಾಗಿದೆ. ಮರ್ಜರ್‌ಗೆ ಅವಕಾಶ ಇದೆ. ಇವತ್ತು ನಾನು ಹೇಳುತ್ತಾ ಇದ್ದೇನೆ. ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇನ್ನೂ ಮರ್ಜರ್ ಆಗಿಲ್ಲ. Formalities are to be completed. ಇವತ್ತು ಈ ವಿಚಾರ ಏನು ಇದೆ.

(ಗೊಂದಲ)

ಪಾರ್ಟಿ ಹುಟ್ಟಿದೆ. There is process. ಯಾವುದೇ ರಾಜಕೀಯ ಪಕ್ಷಗಳು ಹುಟ್ಟಿದಾಗ ನಿಯಮಾವಳಿಗಳ ಪ್ರಕಾರ ಮರ್ಜರ್ ಆಗುವುದಕ್ಕೆ ಪ್ರೋಸೆಸ್ ಇದೆ. That process has to be completed. ಅಲ್ಲಿಯವರೆಗೂ we all remain as members of Janata Party. ಹೊಸ ಪಾರ್ಟಿ ಹುಟ್ಟಿದಾಗ ಸಂವಿಧಾನದ ಪ್ರಕಾರ ಸದಸ್ಯರನ್ನಾಗಿ ಮಾಡತಕ್ಕಂತಹದ್ದು, ಅದಕ್ಕೆ ಇನ್ನೂ ಸಮಯ ಇದೆ.

SRI M. VEERAPPA MOILY.—What is your position ?

SRI S. R. BOMMAI.—I am in Janata Party ಮೊನ್ನೆ ಕೃಷ್ಣ ಹುಟ್ಟಿದ್ದಾನೆ ಎಂದು ಹೇಳಿದ್ದೇನೆ. ಅದನ್ನು ಒಪ್ಪುತ್ತೇನೆ. ಇವತ್ತು ಇರತಕ್ಕಂತಹದ್ದು ಎಲ್ಲಿಯವರೆಗೆ ಜನತಾ ಪಕ್ಷದ ಕೌನ್ಸಿಲ್ ಆಫ್ ಮೆಂಬರ್ಸ್ ಮೀಟ್ ಮಾಡಿ ಮರ್ಜರ್ ಆಗುವುದಕ್ಕೆ ನಿರ್ಣಯವನ್ನು ಮಾಡುತ್ತಾರೋ ಅಲ್ಲಿಯವರೆಗೆ ಜನತಾ ಪಾರ್ಟಿಯಾಗಿಯೇ ಉಳಿಯುತ್ತದೆ. ನ್ಯೂ ಪಾರ್ಟಿಯ ಸದಸ್ಯರಾಗಿಲ್ಲ. ನ್ಯೂ ಪಾರ್ಟಿಯ ಸದಸ್ಯತ್ವ ಇನ್ನೂ ಓಪನ್ ಆಗಿಲ್ಲ. ಇನ್ನೂ ಆಗಬೇಕಾಗಿದೆ. Formalities ಇವತ್ತು ತಾವು ಅರ್ಥ ಮಾಡಿಕೊಳ್ಳಬೇಕು. ಎಲ್ಲಾ ರಾಷ್ಟ್ರಗಳಲ್ಲೂ ಈ ತರಹದ ಸಂದರ್ಭಗಳು ಬರುತ್ತದೆ. ಪಕ್ಷ ಹುಟ್ಟತಕ್ಕಂತಹದ್ದು. New party membership ನಮ್ಮಲ್ಲೂ ಕೂಡ ಬಂದಿದೆ. ಈ ವಿಚಾರದಲ್ಲಿ ಈ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಏಕೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಏಕೆ ಎಂಬುದನ್ನು ಹೇಳುತ್ತೇನೆ ಕೇಳಿ. ನಾವು ರಾಜ್ಯಪಾಲರಿಗೆ ಹೇಳಬೇಕಾಗುತ್ತದೆ ಮರ್ಜರ್ ಆದ ಮೇಲೆ. ಆಮೇಲೆ ಸ್ಪೀಕರ್‌ಗೂ ತಿಳಿಸಬೇಕಾಗುತ್ತದೆ. ಮೊದಲು ರಾಜ್ಯಪಾಲರಿಗೆ ತಿಳಿಸಬೇಕಾಗುತ್ತದೆ. Because we are in power. ಸರ್ಕಾರ ಇರುವುದರಿಂದ ಮರ್ಜರ್ ಆದ ಮೇಲೆ ಕಾನೂನಿಗೆ ಒಳಪಟ್ಟು ನಾವು ತಿಳುವಳಿಕೆಯನ್ನು ಕೊಡಬೇಕಾಗುತ್ತದೆ. ಅದೇ ರೀತಿ ತಮಗೂ ತಿಳುವಳಿಕೆಯನ್ನು ಕೊಡಬೇಕಾಗುತ್ತದೆ. ಅಲ್ಲಿಯವರೆಗೆ ಈ ವಿಚಾರದ ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ನಾವು ಜನತಾ ಪಾರ್ಟಿಯಿಂದ ಜನತಾ ದಳಕ್ಕೆ ಹೋಗಿದ್ದೇವೆ ಎಂದು ಸದಸ್ಯರು ತಮಗೆ ತಿಳಿಸಬೇಕಾಗುತ್ತದೆ. ಎಲ್ಲಿಯವರೆಗೆ ನಾವು ಆ ರೀತಿ ತಿಳಿಸುವುದಿಲ್ಲವೋ. We are members of Janatha Party.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅದನ್ನೇ ನಾವು ಹೇಳುತ್ತಿರುವುದು. ನೀವು ಗೌರ್ನರ್‌ಗೆ ಹೇಳಬೇಕು. ಸ್ಪೀಕರ್‌ಗೆ ಹೇಳಬೇಕು. ಅದನ್ನು ಮಾಡದೆ ಮಾಡಿಬಿಟ್ಟು ಸುಮ್ಮನೆ ಕುಳಿತಿದ್ದೀರಿ ಅಂತ ಹೇಳುತ್ತಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಲ್ಲ ಇಲ್ಲ, ಅದನ್ನು ಹೇಳುವಂತಹ ಕಾಲ ಬರುತ್ತದೆ. ಆಲ್ ಫಾರ್ಮಾಲಿಟೀಸ್ ಆದಮೇಲೆ ಮರ್ಜರ್ ಆಗಿದೆ ಎಂಬುದಾಗಿ ತಿಳಿಸತಕ್ಕ ಅವಶ್ಯಕತೆ ಇದೆ. ಆಗ ನಾವೇ ತಿಳಿಸತಕ್ಕ ಕೆಲಸವನ್ನು ಮಾಡುತ್ತೇವೆ. ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇನ್ನೂ ಮರ್ಜರ್ ಆಗಿಲ್ಲ ಎನ್ನುವುದನ್ನು ಅಲ್ಲಿಯವರೆಗೂ...We are all Janata Party members.

SRI M. VEERAPPA MOILY.—What happens to you to-day ?

SRI S. R. BOMMAI.—Till I enrol as a member of new party, I am a Janata Party member. ಇದರ ಬಗ್ಗೆ hair-splitting argument ಮಾಡುವುದಕ್ಕೆ......

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಕನ್ನಡಿ ಒಳಗಿನ ಗಂಟು......

ಶ್ರೀ ಎಸ್. ಆರ್. ಬೊಮ್ಮಾಯಿ.—ನಮ್ಮ ಕನ್ನಡಿಯೊಳಗಿನ ಗಂಟನ್ನು ನೋಡಿ ಏಕೆ ಇಷ್ಟು ಗಾಬರಿಯಾಗಿದ್ದೀರಿ ನೀವು ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಮಗೆ ಎಳ್ಳಷ್ಟೂ ಗಾಬರಿ ಇಲ್ಲ. ಆ ವಿಚಾರವೇ ನಮ್ಮ ತಲೆಯಲ್ಲಿ ಇಲ್ಲ. ನಿಮ್ಮ ಕನ್ನಡಿ ಒಡೆದು ಚೂರುಚೂರು ಆಗಿದೆ. ನಿಮ್ಮನ್ನು ನೋಡಿ ಗಾಬರಿಯಾಗುವುದು ಉಂಟೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಇವರಲ್ಲಿ ಏನಾಗಿದೆ ಎಂದರೆ, ಪಕ್ಷ ಎಂದರೆ ಒಬ್ಬ ವ್ಯಕ್ತಿ. ಅಲ್ಲಿ ಚುನಾವಣೆ ಇಲ್ಲ, ಸದಸ್ಯತ್ವ ಇಲ್ಲ. ೧೬ ವರ್ಷವಾಯಿತು, ಒಂದು ವರ್ಷವಾದರೂ ಚುನಾವಣೆಯಾಯಿತೇ ? Only nomination and appointments.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಧ್ಯಕ್ಷರೇ, ನಮಗೆ ಹೇಳುವವರು ಕೇಳುವವರು ಇದ್ದಾರೆ. ನಮ್ಮಲ್ಲಿ ದೊಡ್ಡವರು, ಚಿಕ್ಕವರು ಎನ್ನುವವರು ಇದ್ದಾರೆ. ಇವರಲ್ಲಿ ಹಾಗೆ ಇಲ್ಲ. ಇವರಿಗೆ ಯಾರೂ ಇಲ್ಲ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಯಮದ ಪ್ರಕಾರ ಪ್ರತಿ ಎರಡು ವರ್ಷಕ್ಕೆ ಚುನಾವಣೆ ಆಗಬೇಕೆಂದು ಇದೆ, ಎಷ್ಟು ವರ್ಷ ಆಯಿತು ಚುನಾವಣೆ ಆಗಿ ? ಯಾವಾಗ ಆಯಿತು ?

ಶ್ರೀ ಎಂ. ವೀರಪ್ಪ ಮೊಯ್ಲಿ.—ನಿಮ್ಮ ಚುನಾವಣೆ ಬಗ್ಗೆ ಮಾನ್ಯ ಎಂ. ಎಸ್. ನಾರಾಯಣರಾವ್ ಅವರನ್ನು ಕೇಳಬೇಕು. ಅಧ್ಯಕ್ಷರನ್ನು ತೆಗೆಯುವುದು, ಹಾಕುವುದು, ಮಾಡುವುದು, ಬಿಡುವುದು ಇದೆಲ್ಲಾ ಮಾನ್ಯ ಎಂ. ಎಸ್. ನಾರಾಯಣರಾವ್ ಅವರಿಗೆ ಗೊತ್ತಿದೆ. ಅವರು ಈಗ ಇಲ್ಲಿ ಇಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಲ್ಲಿ ಚುನಾವಣೆ ಎನ್ನುವುದು ಇದೆ. ಆದರೆ ನಿಮ್ಮಲ್ಲಿ ಆ ಪ್ರಶ್ನೆಯೇ ಇಲ್ಲ. Only nomination. ಚುನಾವಣೆ ಜಗಳ ನಿಮ್ಮಲ್ಲಿ ಇಲ್ಲ. ಏಕೆಂದರೆ ಚುನಾವಣೆ ಇಲ್ಲ ಅಲ್ಲಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಆ ಚುನಾವಣೆ ಮಾಡುವುದಕ್ಕೆ ನಮ್ಮ ಕಾಂಗ್ರೆಸ್‌ನಿಂದ ವಿ. ಪಿ. ಸಿಂಗ್, ಅರುಣ್‌ನೆಹರು, ವಿ. ಸಿ. ಶುಕ್ಲ ಎಲ್ಲಾ ಅಲ್ಲಿಗೆ ಬಂದಿದ್ದಾರೆ.

(ಗೊಂದಲ)

ಶ್ರೀ ಆರ್. ಎನ್. ನಾಯಕ್ —ಮಾನ್ಯ ವಿ.ಪಿ. ಸಿಂಗ್ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಲ್ಲ ಚುನಾವಣೆ ಮಾಡಿ ಮಾಡಿದ್ದೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ವಿ. ಪಿ. ಸಿಂಗ್ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೇವೆ. ಅವರು ಕಾಂಗ್ರೆಸ್‌ನಿಂದ ಬಂದಿದ್ದಾರೆ. ನಾನು ಇದನ್ನು ಒಪ್ಪಲೇಬೇಕು. ಕಾಂಗ್ರೆಸ್‌ನಲ್ಲಿ ಕೆಲವರು ಒಳ್ಳೆಯವರೂ ಇದ್ದಾರೆ.

ಶ್ರೀ ಎಂ. ಎಂ. ಖರ್ಗೆ.—ಯಾರು ಬರುತ್ತಾರೋ ಅವರು ಒಳ್ಳೆಯವರು ನಿಮಗೆ ವಿರೋಧ ಮಾಡುವವರು ಕೆಟ್ಟವರು.

ಶ್ರೀ ಎಸ್. ಆರ್. ಬೊಮ್ಮಾಯಿ.—ಒಳ್ಳೆಯವರು ಹೊರಗೆ ಬಂದಾಗ ಸ್ವಾಗತ ಮಾಡಬೇಕಾಗುತ್ತದೆ. ಅಲ್ಲಿ ನಡೆಯುತ್ತಿರತಕ್ಕ ವ್ಯವಹಾರ ಅವರಿಗೆ ತಡವಾಗಿ ತಿಳಿದಿದೆ. ಒಂದು ರೀತಿಯಿಂದ ಹೇಳುವುದಾದರೆ ಈಗಿರತಕ್ಕ ರಾಜಕೀಯ ಪಕ್ಷಗಳ ಅನೇಕ ನಾಯಕರು ಮೊದಲು ಕಾಂಗ್ರೆಸ್‌ನಲ್ಲಿ ಇದ್ದವರು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನಲ್ಲಿ ಇದ್ದವರು ಬೇರೆ. ಅವರು ಈಗ ಇಲ್ಲ, ಇವರೆಲ್ಲ ಕಾಂಗ್ರೆಸ್—ಐ ನವರು

(ಗೊಂದಲ)

ಮಾನ್ಯ ನಾಯಕ್ ಅವರೇ, ಕಾಂಗ್ರೆಸ್‌ನಲ್ಲೂ ಕೆಲವರು ಒಳ್ಳೆಯವರು ಇದ್ದಾರೆ ಎಂದು ಮೊದಲೇ ಹೇಳಿದ್ದೇನೆ.

ಅಧ್ಯಕ್ಷರು.—ನೀವೂ ಛಲೋ ಇದ್ದೀರಿ ಎಂದು ಹೇಳಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸಭಾಪತಿಯವರೇ, ಮಾನ್ಯ ಶ್ರೀನಿವಾಸ್ ಅವರು ಬಹಳ ಚೆನ್ನಾಗಿ ಹೇಳಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅವರು ಆ್ಯಂಟಿ ಡಿಫೆಕ್ಷನ್ ಬಗ್ಗೆ ಸ್ವಲ್ಪ ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಕೊನೆಯಲ್ಲಿ ಅದನ್ನೂ ಹೇಳುತ್ತೇನೆ. ಮಾನ್ಯ ಶ್ರೀನಿವಾಸ ಅವರು ಒಂದು ಕಳಕಳಿಯನ್ನು ವ್ಯಕ್ತ ಮಾಡಿದರು. ಈ ದೇಶದಲ್ಲಿ ಒಂದು ಪರ್ಯಾಯ ಪಕ್ಷ ಇರಬೇಕು ಎಂದು ಕೇಳಿದರು

೭–೩೦ ಪಿ. ಎಂ.

ಅದು ಈ ದೇಶದ ಭವಿಷ್ಯದ ದೃಷ್ಟಿಯಿಂದ ಅವಶ್ಯಕ ಎನ್ನುವ ಮಾತನ್ನು ಅವರು ಬಹಳ ಚೆನ್ನಾಗಿ ಹೇಳಿದ್ದಾರೆ. ನಾನು ತಮಗೆ ಭರವಸೆ ಕೊಡುತ್ತಿದ್ದೇನೆ ಏನೆಂದರೆ ಈ ಆದಂಥ ಈಗ ಪಕ್ಷದ ಯೂನಿಟಿ ಏನಿದೆ ಈ ಮರ್ಜರ್ ಏನಿದೆ ವಿರೋಧಪಕ್ಷಗಳ ಸಂಘಟನೆ ಮತ್ತು ಪರ್ಯಾಯ ಪಕ್ಷದ ಒಂದು ಬೆಳವಣಿಗೆಗೆ ನಾಂದಿಯಾಗಿದೆ. ನಾನು ಹೇಳುತ್ತಿದ್ದೇನೆ, ಇದು ಸರಿಯಾಗಿ ಒಂದಾಗಿ ಕೆಲಸ ಮಾಡುತ್ತದೆ. ಹಿಂದೆ ೧೯೭೭ರಲ್ಲಿ ಅದು ಒಂದು ಕಥೆ ಪುನರಪಿ ಆಗಬಾರದು. ಅವರ ಭಾವನೆಯನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ, ಹಿಂದೆ ನಾವು ಪಾಠ ಕಲಿತಿದ್ದೇವೆ, ನಾನು ಸ್ಪಷ್ಟವಾಗಿ ಹೇಳ ಬಯಸುತ್ತಿದ್ದೇನೆ ಏನೆಂದರೆ ನಾವು ಪಾಠ ಕಲಿತಿದ್ದೇವೆ. ನಮ್ಮ ತಪ್ಪನ್ನು ನಾವು ಅರಿತಿದ್ದೇವೆ. ಅರಿವಿನಿಂದ ಒಂದಾಗಿದ್ದೇವೆ. ಹೀಗೆ ನಾವು ಒಂದಾಗಿರುವುದಕ್ಕೆ ತಮಗೆ ಇಷ್ಟು ಏಕೆ ನಡುಗು ? ಇಷ್ಟು ಏಕೆ ಗಾಬರಿ ?

ಶ್ರೀ ಕೆ. ಎಚ್. ಶ್ರೀನಿವಾಸ್.—'ನಾವು ಒಂದಾಗಿದ್ದೇವೆ' ಎಂದು ಬಹಳ ನಡುಗಿಕೊಂಡೇ ನೀವು ಹೇಳುತ್ತಿದ್ದೀರಿ.

ಶ್ರೀ ಎಸ್, ಆರ್. ಬೊಮ್ಮಾಯಿ.—ಇಲ್ಲ ಇಲ್ಲ ಒಂದಾಗಿ ಎರಡು ದಿನ ಆಗಿಲ್ಲ, ಮೇಲೆ ಕೆಳಗೆ ನೋಡುತ್ತಿದ್ದೀರಿ ಏಕೆ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ—ಶ್ರೀ ಬೊಮ್ಮಾಯಿಯವರು ನನ್ನನ್ನು ಹೊಸದಾಗಿ ನೋಡುತ್ತಿದ್ದಾರಾ ? ಇಂತಹ ಹತ್ತು ಬೊಮ್ಮಾಯಿ ಬಂದರೂ ನಾನು ಗಾಬರಿ ಆಗುವುದಿಲ್ಲ. ಅವರ ಅವಿವೇಕ ನೋಡಿ ನಗಬೇಕೇ ಹೊರತು ಗಾಬರಿಯಾಗಿ ಯಾರೂ ಗಡಗಡ ನಡುಗತ್ತಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಶ್ರೀಮತಿ ನಾಗರತ್ನಮ್ಮನವರೇ, ಐದು ಸಲ ಕಾಂಗ್ರೆಸ್ಸನ್ನು ಸೋಲಿಸಿದ ಶಕ್ತಿ ತಮಗೆ ಇದೆ. ತಮ್ಮ ಶಕ್ತಿಯ ಬಗ್ಗೆ ನನಗೆ ಅರಿವು ಇದೆ. ವೈಯಕ್ತಿಕವಾಗಿ ನಾಗರತ್ನಮ್ಮನವರ ದೈವೀ ಶಕ್ತಿಗೆ ನನ್ನ ನಮಸ್ಕಾರ. ತಾವು ಎಂದರೆ ತಮ್ಮ ಪಕ್ಷ. ತಮ್ಮ ಶಕ್ತಿ ಬಗ್ಗೆ ನಾನು ಹೇಳಿದ್ದೇನೆ.

ಅಧ್ಯಕ್ಷರು.—ಮಹಾಶಕ್ತಿ

ಶ್ರೀ ಎಸ್. ಆರ್. ಬೊಮ್ಮಾಯಿ.—ಆದ್ದರಿಂದ ಮಾನ್ಯ ಅಧ್ಯಕ್ಷರೆ, ಟೆಕ್ನಿಕಲ್ ಆಗಿ ಏತ್ತಿದಂಥ ವಿಚಾರವಾಗಲೀ, ಬೇರೆ ವಿಚಾರ ಆಗಲೀ, ರಾಜಕೀಯ ಹೊಟ್ಟೆ ಕಿಚ್ಚಿನಿಂದ ಹೇಳಿದಂಥ ವಿಚಾರ ಎಂದರೆ ತಪ್ಪು ತಿಳಿಯಬಾರದು ನಮ್ಮ ಗೆಳತಿಯರು, ಏನೆಂದರೆ ಈ ರಾಜ್ಯದಲ್ಲಿ ಆದ ಬದಲಾವಣೆ ಏನಿದೆ, ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಚುನಾವಣೆ ಯಾವಾಗಲೇ ಬರಲಿ. ಈ ಯೂನಿಟಿ ಏನಿದೆ ಈ ಪಕ್ಷ ಅಧಿಕಾರಕ್ಕೆ ಬರುತ್ತದೆ, ನಿಮ್ಮನ್ನು ಅಧಿಕಾರದಿಂದ ಇಳಿಸುವುದಕ್ಕೆ ಶಕ್ತಿ ಅದಕ್ಕೆ ಇದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಇದು ಮೂರು ಪಾರ್ಟಿ ಸೇರಿ ಮಾಡಿದ್ದಾರೆ. ತೀನ್ ತೇರಾ ನೌ ಅಟ್ರಾ—ಅಂತ ನಮ್ಮಲ್ಲಿ ಹೇಳುತ್ತಾರೆ.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಬ್ರಹ್ಮ, ವಿಷ್ಣು, ಮಹೇಶ್ವರ ಮೂರು ಶಕ್ತಿಗಳು ಇಲ್ಲಿ ಸೇರಿವೆ. ಮೂರು ಶಕ್ತಿಗಳು ಕೂಡಿವಂಥ ಪಕ್ಷ ಇದು.

ಶ್ರೀ ಎಸ್. ಆರ್. ಬೊಮ್ಮಾಯಿ —ಈ ಪಕ್ಷ ಏನಿದೆ, ಇದರ ಸಿದ್ಧಾಂತ ಶ್ರೀ ರಾಜೀವ್‌ಗಾಂಧಿ ಅವರನ್ನು ಅಧಿಕಾರದಿಂದ ಇಳಿಸುವುದು ಅಲ್ಲ. ಅಧಿಕಾರ ಪಡೆಯತಕ್ಕದ್ದೂ ಅಲ್ಲ. ಅಧಿಕಾರ ಬೇಕು. ಆದರೆ ಅದೊಂದೇ ಉದ್ದೇಶ ಅಲ್ಲ. ಈ ಪಕ್ಷದ ಉದ್ದೇಶ ಜಯಪ್ರಕಾಶ್ ನಾರಾಯಣ್ ಗಾಂಧೀಜಿ ಯವರು ಹೇಳಿದ ರಾಮರಾಜ್ಯ, ಸಂಪೂರ್ಣ ಕ್ರಾಂತಿ ಆಧಾರದ ಮೇಲೆ ದೇಶದಲ್ಲಿ, ಸಮಾಜದಲ್ಲಿ ಬದಲಾವಣೆಯನ್ನು ತರತಕ್ಕಂಥ ಸಿದ್ಧಾಂತದ ಮೇಲೆ ನಾವು ಹೊರಟಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಬೇರೆ ಏನೂ ಇಲ್ಲ. ಒನ್ ಪಾಯಿಂಟ್ ಪ್ರೋಗ್ರಾಮ್ ನಿಮ್ಮದು.

ಶ್ರೀ ಎಸ್. ಆರ್ ಬೊಮ್ಮಾಯಿ.—ಮಾನ್ಯ ರಾಜೀವ್‌ಗಾಂಧಿ, ಒಂದೇ ನಮ್ಮ ಕಾರ್ಯಕ್ರಮ ಇಲ್ಲ. ಆ ನಾನು ಹೇಳುತ್ತಿದ್ದೇನ್ಯೆ ಸ್ವಾತಂತ್ರ್ಯ ಬಂದು ನಲವತ್ತು ವರ್ಷಗಳಾದರೂ ಈ ದೇಶಕ್ಕೆ ಕುಡಿಯುವ ನೀರು ಕೊಡುವುದಕ್ಕೆ ನಿಮ್ಮಿಂದ ಆಗಲಿಲ್ಲ. ಅಕ್ಷರದಾನ ಮಾಡಲಿಕ್ಕೆ ಆಗಲಿಲ್ಲ. ಕೈಗೆಕೆಲಸ ಕೊಡುವುದಕ್ಕೆ ಆಗಲಿಲ್ಲ.

ಶ್ರೀ ಆರ್. ಎನ್. ನಾಯಂಕ್.—ಈ ೪೦ ವರ್ಷಗಳಲ್ಲಿ ನಿಮ್ಮ ಪಾಲು ಎಷ್ಟು ? ಅದನ್ನು ಹೇಳಿ ಸ್ವಲ್ಪ. ಅದನ್ನೂ ಹೇಳಿ ಮುಗಿಸಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಮ್ಮ ಗುರಿ ಅಧಿಕಾರ ಅಲ್ಲ. ನಮ್ಮ ಸಿದ್ಧಾಂತವನ್ನು ಜಾರಿಗೊಳಿಸುವುದಕ್ಕಾಗಿ ಅಧಿಕಾರ.

ಸಿದ್ಧಾಂತ ಸಮಾಜದಲ್ಲಿರತಕ್ಕ ಬಡತನ, ಅಸಮಾನತೆ, ಮೇಲು-ಕೀಳು, ಉಚ್ಚನೀಚ ಎನ್ನತಕ್ಕ ಭಾವನೆಗಳು ಹೋಗಬೇಕು. ಇಂತಾದ್ದರ ಬಗ್ಗೆ ನಾವು ಹೋರಾಟ ಮಾಡುತ್ತಿದ್ದೇವೆ, ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ, ಇದು ಅಧಿಕಾರಕ್ಕಾಗಿ ಹುಟ್ಟಿದ ಪಕ್ಷವಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಗಾಂಧಿ ಕಂಡ ಕನಸು, ಸಾರಾಯಿ ಸಿದ್ಧಾಂತ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸಾರಾಯಿ ಯಾವುದು, ಬೋಫೋರ್ಸ್ ಯಾವುದು ಎಂಬುದನ್ನು ಜನ ತೀರ್ಮಾನ ಮಾಡುತ್ತಾರೆ. ಇವತ್ತು ಹೊಸ ಪಕ್ಷದ ಸಿದ್ಧಾಂತ ಅಧಿಕಾರಕ್ಕಾಗಿ ಅಲ್ಲ. ಸಮಾಜದಲ್ಲಿ ಅವಶ್ಯವಾಗಿ ಬದಲಾವಣೆ ಮಾಡತಕ್ಕಂತಾದ್ದು ಸರ್ವರಿಗೂ ಸಮಾನವಾದ ಅವಕಾಶ ಸಿಗುವುದನ್ನು ಮಾಡುವುದೇ ಹೊಸ ಪಕ್ಷದ ಗುರಿಯಾಗಿದೆ, ಅಧಿಕಾರಕ್ಕೆ ಬಂದು, ಅಧಿಕಾರ ದಿಂದ ಇಂತಹ ಬದಲಾವಣೆ ಮಾಡತಕ್ಕಂಥ ಸಿದ್ಧಾಂತದಲ್ಲಿ ಹುಟ್ಟಿದ ಪಕ್ಷ. ಇದರ ಫಾರ್ಮಾಲಿಟೀಸ್ ಮುಗಿಯುತ್ತಾ ಬಂದಿದೆ. ಇದು ಒಡೆದು ಹೋಗುತ್ತದೆ: ಇದು ಒಂದು ತಿಂಗಳಲ್ಲಿ ಆಗುತ್ತದೋ ಇಲ್ಲವೋ ಎಂದು ಹೇಳಿದಿರಿ, ಮಾನ್ಯ ಶ್ರೀನಿವಾಸ್‌ರವರು ಹೇಳಿದರು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಆಡಳಿತದಲ್ಲಿ ಇರತಕ್ಕ ನಿಮ್ಮ ಜನರಿಗೆ ಅನುಮಾನ ಬಾಧಿಸುತ್ತಿನೆ ಎಂದು ಹೇಳಿದೆ.

ಶ್ರೀ ಎಸ್ ಆರ್ ಬೊಮ್ಮಾಯಿ.—ಈ ಅವಧಿ ಮುಗಿದು ಮುಂದಿನ ಸಾರಿಯೂ ಬರುತ್ತೇವೆ. ಇನ್ನು ಇದರ ಮೇಲೆ ವಾದ ಬೇಡ, ಚುನಾವಣೆ ಬಂದಾಗ ಗೊತ್ತಾಗುತ್ತದೆ, ಆಡಳಿತ ಯಂತ್ರದ ಮೇಲೆ ಯಾವುದೇ ಪರಿಣಾಮ ಆಗಿಲ್ಲ. ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಸಮಸ್ಯೆಗಳನ್ನು ಎದುರಿಸು ವುದಕ್ಕೆ ಏನು ಸ್ಟೆಪ್ ತೆಗೆದುಕೊಳ್ಳಬೇಕೋ, ಅದನ್ನು ತೆಗೆದುಕೊಳ್ಳುತ್ತೇನೆ. ಅದು ಕಣ್ಣಿದ್ದರಿಗೆ ಕಾಣುತ್ತದೆ, ಕೆಲವರು ಕಣ್ಣಿದ್ದೂ ನೋಡುವುದಕ್ಕೆ ತಯಾರಿಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್ —ನೀವು ಏನು ಸ್ಟೆಪ್ ತೆಗೆದುಕೊಂಡಿರುವುದು, ಹೇಳಿದ್ದು ಮಾತ್ರ ದಾಖಲೆ ಇದೆ. ಯಾವ ಆಫೀಸರ್ಸ್‌ಗೆ ಹೇಳುವುದಕ್ಕೂ ಶಕ್ತಿ ಇಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಯಾವರೀತಿ ಹೇಳಬೇಕೆಂಬುದು ನಮಗೆ ಗೊತ್ತಿದೆ. ಆಡಳಿತದಲ್ಲಿ ಯಾವುದೇ ರೀತಿಯ ಪರಿಣಾಮ ಆಗಿಲ್ಲ. ಮಾನ್ಯ ಗೆಳೆಯರಿಗೆ ಭರವಸೆ ಕೊಡುತ್ತೇನೆ, ನಾನು ಹೇಳಿದ್ದು ಏನಿದೆ, ಅವುಗಳನ್ನು ಆಚರಣೆಗೆ ತರುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಮಾನ್ಯ ಸದಸ್ಯರು ಸುಮ್ಮನೆ ಧೂಳನ್ನು ಎಬ್ಬಿಸಿ, ಕಣ್ಣಿಗೆ ಮಣ್ಣೆರಚುವುದರಿಂದ ಕರ್ನಾಟಕದ ಜನ ಮರುಳಾಗುವುದಿಲ್ಲ, ಮೋಸ ಹೋಗುವುದಿಲ್ಲ. ಸಂಪೂರ್ಣ ವಿಶ್ವಾಸ ಜನತಾ ಸರ್ಕಾರದಲ್ಲಿ ಇದೆ, ಮತ್ತು ಜನತಾ ಪಕ್ಷದಲ್ಲೂ ಇದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೇ, ಆ್ಯಂಟಿ ಡಿಫೆಕ್ಷನ್ ಮೇಲೆ ಈ ವಿಚಾರವನ್ನು ನಾನು ಎತ್ತಿದ್ದೇನೆ. ಇದರ ಬಗ್ಗೆ ಪರಮಾಧಿಕಾರ ಇರುವಂತಾದ್ದು ತಮಗೆ. ಸೆಕ್ಷನ್ ೬ರ ಪ್ರಕಾರ ರಾಜ್ಯಪಾಲರಿಗೆ ಅಲ್ಲ, ಅಥವಾ ಬೇರೆ ಯಾವ ಅಧಿಕಾರಿಗಳಿಗೆ ಅಲ್ಲ. ಇಂಡಿಯನ್ ಎಕ್ಸ್‌ಪ್ರೆಸ್ ವರದಿಯನ್ನು ಸನ್ಮಾನ್ಯ ಮುಖ್ಯಮಂತ್ರಿಯವರು ಒಪ್ಪುತಾರೆಂದು ತಿಳಿದಿದ್ದೇನೆ. ಅದರಲ್ಲಿ ಏನಿದೆ ಎಂದರೆ,

> "Chief Minister S. R. Bommai who took the chair in the beginning, set the proper perspective for the meet when he declared that Bangalore which had seen the conventions at which national parties split in the past was witnessing the historic even of the expression of the will of the people for a unified opposition party".

It is not a tentative, interim expression of the will of these parties. It is the final expression of the will. In Times of India also it is said as 'It is not an informal launch. It is the formal launch. It is the ultimate launching of the new party, birth of the new party. Disqualifieation under Section 2 of the Anti Defection Act.

ಮಾನ್ಯ ಅಧ್ಯಕ್ಷರೇ, ಈಗ ಡಿಸ್‌ಕ್ವಾಲಿಫೈ ಮಾಡತಕ್ಕ ಸೆಕ್ಷನ್ (೨) ನೋಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮೊಯಿಲಿಯವರೇ, ನಿಮ್ಮ ಪಕ್ಷದ ಸೆಕ್ರೆಟರಿ ಕೆ. ಎನ್. ಸಿಂಗ್‌ರವರು ಹೇಳಿದ್ದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. However, Mr. Singh said that at Bangalore it was only a declaration of political party to be formed. There is no formal merger. Janata Party and Janata Dal are the same.'

SRI M. VEERAPPA MOILY.—You have said party is born and it is formally launched. It is the final expression of the will. So, that means the person presided was no less than Leader of the Janata Legislature Party and the Chief Minister and he attracts this Section 2 (a). He argued that if it is a political party, he has to take exemption under Section 4. Disqualification clause is contemplated under Section 2 (a) which he admits. It is also seen that in his statement he had said there is no merger. That means when he has declared new party is born in which he is a participanc and now expression is given what does it mean ? Mr. Bommai, who is the Leader of the Legislature Party, it is not the question. ಇದೊಂದು ವರ್ಡ್‌ನ್ನು ತಾವು ಮಾರ್ಕ್ ಮಾಡಬೇಕು. The word 'Membership of such political party ! It is not the question of Membership of a Legislature party: Even if he has given up Membership of a political party, that means disqualification of member wherein Section 2(a) attracts. They can claim the exemption if there is a merger but they say there is no merger. In view of the confused situtiou they have created vaccum. That means he had his party is really rether in vaccum. Neither they are now in Janata Party nor in Janata Dal. So, in this vaccum, he is not entitled to continue as a Member of this House and he is disqualified to hold Membership. ಆದುದರಿಂದ ಈ ಬಗ್ಗೆ ತಾವು ಕಾನ್‌ಸ್ಟಿಟ್ಯೂಟ್ ಕೊಡಬೇಕು. ಸೆಕ್ಷನ್ ೬ ಪ್ರಕಾರ ತಮಗೆ ಪರಮಾಧಿಕಾರ ಇದೆ. ಆದುದರಿಂದ ತಾವು ಕಾನ್‌ಸ್ಟಿಟ್ಯೂಟ್ ಒಪೀನಿಯನ್ ಕೊಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಬೊಮ್ಮಾಯಿಯವರೇ, ಅವರಿಗೆ ಉತ್ತರ ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ, ಕಾನೂನಿನಲ್ಲೇ ಸ್ಪಷ್ಟವಾಗಿದೆ ಉತ್ತರ ಅವಶ್ಯಕತೆ ಇಲ್ಲ ಅವರು ಎತ್ತಿರತಕ್ಕಂಥ ವಿಷಯಕ್ಕೆ ಕಾನೂನಿನ ಬೆಂಬಲ ಇಲ್ಲ. ಅದಕ್ಕೆ ಬೆಲೆ ಇಲ್ಲ.

ಅಧ್ಯಕ್ಷರು.—ವಿಷಯ ಇಲ್ಲಿಗೆ ಮುಕ್ತಾಯವಾಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ,—ಅಧ್ಯಕ್ಷರೇ, ಇದರ ಬಗ್ಗೆ ತಮ್ಮ ಡಿಸಿಷನ್ ಏನು ?

ಅಧ್ಯಕ್ಷರು.—ಮುಕ್ತಾಯವಾಯಿತು ಎಂದು ಹೇಳಿದೆನಲ್ಲಾ. ನೀವು ಏನಿದ್ದರೂ ಬರೆದು ಕಳುಹಿಸಿ. ಐ ವಿಲ್ ಲುಕ್ ಇನ್ ಟು ಇಟ್,

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಈಗ ಅವರು ಏನೋ ಹೇಳಿದರು.

ಅಧ್ಯಕ್ಷರು.—ಈಗ ಏನೂ ಹೇಳುವುದಕ್ಕೆ ಆಗುವುದಿಲ್ಲ. ಇದು ಚರ್ಚೆ. If you want to examine, please send me in writing. I will look into it.

SRI M. VEERAPPA MOILY.—If you are convinced that there is a prima facie case, we will do it.

SRI H. D. DEVEGOWDA.—There is no prima facie so far as this issue is concerned.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಆರ್ಗ್ಯುಮೆಂಟ್ ಮಾಡುವಾಗ ನೀವು ಇರಲಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಪ್ರೈಮಾ ಫೇಸಿ ಕೇಸ್ ಏನಿದೆ ಇದರಲ್ಲಿ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೇ, ಆಯಿತು, ನಾನು ಬರೆದು ಕಳುಹಿಸುತ್ತೇನೆ.

ಅಧ್ಯಕ್ಷರು.—ಆಯಿತು ಬರೆದು ಕಳುಹಿಸಿ, ಅಸೆಂಬ್ಲಿ ಮುಗಿದ ಮೇಲೂ ಸಹ......

ಶ್ರೀ ಹೆಚ್. ಡಿ. ದೇವೇಗೌಡ.—ಅಧ್ಯಕ್ಷರೇ, ಮುಂದೆ ಹುಟ್ಟತಕ್ಕಂಥ ಹೊಸ ಪಕ್ಷದ ಬಗ್ಗೆ ಈ ಸದನದ ಮುಖೇನ ಈ ದೇಶದ ಗಮನವನ್ನು ಸೆಳೆಯಬೇಕಾಗಿತ್ತು ಎಂದು ಕಾಣುತ್ತದೆ, ಅದನ್ನು ಸೆಳೆದಿದ್ದಾರೆ. ಏನು ಹೇಳಬೇಕೆಂದು ಇದ್ದರೋ ಅದನ್ನು ಹೇಳಿದ್ದಾರೆ. ಆದರಿಂದ ನಮಗೇನೂ ಹೋಗಬೇಕಾದುದು ಇಲ್ಲ. ಇದರ ಬಗ್ಗೆ ವಿಚಾರ ಮಾಡಬೇಕಾದ ಅವಶ್ಯಕತೆಯೂ ಇಲ್ಲ. ಇಷ್ಟು ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಆ್ಯಂಟಿ ಡಿಫೆಕ್ಷನ್ ಬಿಲ್ ಬಗ್ಗೆ ಹೇಳಿದರು. ಇದು ಬಹುಶಃ ಇದಕ್ಕೆ ಅನ್ವಯವಾಗುತ್ತದೆಯೇ ಎಂದು ಹೇಳಿದರೆ ಇಲ್ಲ ಎಂಬುದು ಮಾನ್ಯ ವೀರಪ್ಪ ಮೊಯಿಲಿಯವರಿಗೆ ಗೊತ್ತಿದೆ. ಗೊತ್ತಿದ್ದೂ ಏತಕ್ಕೆ ಆರ್ಗ್ಯುಮೆಂಟ್ ಮಾಡುತ್ತಿದ್ದಾರೆ ? ಮಾನ್ಯ ಮೊಯಿಲಿಯವರೇ, ತಾವೇತಕ್ಕೆ ಆರ್ಗ್ಯುಮೆಂಟ್ಸ್ ಮಾಡಿದಿರಿ ? ಕಾಂಗ್ರೆಸ್ಸ್ (ಐ)ನ ೪೫ ಜನ ಸದಸ್ಯರು ಪಾರ್ಲಿಮೆಂಟಿನಲ್ಲಿ ಹೊರಗಡೆ ಬಂದರು ಆ ಸಭೆ ಈ ಸಭೆಗಿಂತ ಎತ್ತರವಾದ ಸಭೆ. ಲೋಕ ಸಭೆ. ಅಲ್ಲಿ ಅವರನು ಏತಕ್ಕೆ ಡಿಸ್‌ಕ್ವಾಲಿಫೈ ಮಾಡಲಿಲ್ಲ ?

SRI M. VEERAPPA MOILY.—Nobody has moved...

SRI H. D. DEVEGOWDA.—Your people. your party is uable to understand the implications of the Anti-Defection Act. Your Party or the Prime Minister is unable to understand the implication of the Anti-Defection Act, who is the authority of that bill. It is his own baby. That is why I don't think there is any prima facie case, You can suo motto reject. This is my request.

SRI M. VEERAPPA MOILY.—About how much we know you cannot dictate to the Chair. You can only make a submission. You may be a Minister, you must know minimum of democracy...

SRI H. D. DEVEGOWDA.—I know that.

(Interruption)

SRI M. VEERAPPA MOILY.—Why do you drag the name of the Prime Minister...You said Prime Minister is the author of the Anti-Defection Bill......

ಅಧ್ಯಕ್ಷರು.—ನಾನು ನೀವು ಡಿಕ್ಟೇಟ್ ಮಾಡಿದರೂ ಕೇಳುವುದಿಲ್ಲ. ಅವರು ಡಿಕ್ಟೇಟ್ ಮಾಡಿದರೂ ಕೇಳುವುದಿಲ್ಲ. ನೀವು ಸಬ್‌ಮಿಷನ್ ಮಾಡಿದಿರಿ ಅವರು ಸಬ್‌ಮಿಷನ್ ಮಾಡಿದರು ಅಷ್ಟೇ.

ಶ್ರೀ ಹೆಚ್. ಡಿ. ದೇವೇಗೌಡ.—ನಾನೇನು ಅಗೌರವವಾಗಿ ಮಾತನಾಡಿದ್ದೇನೆಯೇ ? ಇಲ್ಲ. ಅದು ಸಾಧ್ಯವೇ ಇಲ್ಲ.

ಅಧ್ಯಕ್ಷರು.—ನೀವು ನನಗೆ ಡಿಕ್ಟೇಟ್ ಮಾಡಲಿಲ್ಲ ಅವರು ಮಾಡಲಿಲ್ಲ, ಇಬ್ಬರೂ ಸಬ್‌ಮಿಷನ್ ಮಾಡಿದಿರಿ.

ಶ್ರೀ ಹೆಚ್, ಡಿ. ದೇವೇಗೌಡ.— ನಾನು ಪ್ರಧಾನ ಮಂತ್ರಿಗಳ ಬಗ್ಗೆ ಅಗೌರವಾಗಿ ಮಾತನಾಡಿದ್ದೇನೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಪ್ರಧಾನ ಮಂತ್ರಿಗಳ ವಿಚಾರ ಇಲ್ಲಿ ಏತಕ್ಕೆ ಬೇಕು ?

ಶ್ರೀ ಹೆಚ್. ಡಿ. ದೇವೇಗೌಡ.—ನಾನೇನು ಮಾತನಾಡಿದೆ ? ಕಾಂಗ್ರೆಸ್ಸ್ ಪಕ್ಷದಿಂದ ೪–೫ ಜನ ಸದಸ್ಯರು ಹೊರಗಡೆ ಬಂದಾಗ ಅವರನ್ನೇತಕ್ಕೆ ಡಿಸ್ ಕ್ವಾಲಿಫೈಡ್ ಮಾಡಲಿಲ್ಲವೆಂದೆ ? ಅವರು ನಮಗಿಂತ ಹೆಚ್ಚು ಕಾನೂನು ಪಂಡಿತರು. ನಮಗಿಂತ ಹೆಚ್ಚು ತಿಳಿದುಕೊಂಡಿದ್ದಾರೆ. ಆ ಸಭೆ ನಮಗೀತ ಎತ್ತರವಾದ ಸಭೆ ಎಂದು ನಾನು ಹೇಳಿದ್ದೇನೆ. ಕಾನೂನಿನ ಇಂಪ್ಲಿಕೇಷನ್ಸ್ ಅವರಿಗೆ ಗೊತ್ತಿಲ್ಲವೇ ? ನಾನು ಲಘುವಾಗಿ ಮಾತನಾಡಲಿಲ್ಲ. ಲಘುವಾಗಿ ಮಾತನಾಡುವ ಮೂರ್ಖ ನಾನಂತೂ ಅಲ್ಲ. ಸನ್ಮಾನ್ಯ ಪ್ರಧಾನ ಮಂತ್ರಿಗಳು ಯಾವ ಪಕ್ಷದವರೇ ಆಗಿರಲಿ ಆ ಸ್ಥಾನದ ಘನತೆ ಗೌರವ ಉಳಿಸಬೇಕೆನ್ನುವುದನ್ನು ತಿಳಿದುಕೊಂಡಿದ್ದೇನೆ.

ಮಾನ್ಯ ಸದಸ್ಯರಿಂದ ವೈಯಕ್ತಿಕ ಹೇಳಿಕೆ

ಶ್ರೀ ಕೆ, ಪ್ರತಾಪಚಂದ್ರ ಶೆಟ್ಟಿಯವರಿಂದ ಶ್ರೀಮತಿ ಶಿವಕಾಂತ ಚತುರೆಯವರು ಹೊಂದಿರುವ ಅವರ ಎಂ.ಐ.ಜಿ. ಮನೆಯ ಬಗ್ಗೆ ಸ್ಪಷ್ಟೀಕರಣ

ಶ್ರೀ ಪ್ರತಾಪಚಂದ್ರ ಶೆಟ್ಟಿ.— ದಿನಾಂಕ ೫-೧೦-೧೯೮೮ ರಂದು ನನ್ನ ಹೆಸರಿನ ಮುಂದೆ ನಮೂದಿತವಾದ ಚುಕ್ಕೆ ಗುರುತಿನ ಪ್ರಶ್ನೆ ನಂಬರ್ ೯೮೮ (೨೯೩೧) ಮತ್ತು ಪೂರಕ ಪ್ರಶ್ನೆಗಳನ್ನು ನಾನು ವಿಧಾನ ಸಭೆಯಲ್ಲಿ ಕೇಳಿದ ವಿಚಾರದಲ್ಲಿ ಮಾಜಿ ಮಂತ್ರಿ ಶ್ರೀಮತಿ ಶಿವಕಾಂತ ಚತುರೆ ಅವರು ತಾ॥ ೧೩-೧೦-೧೯೮೮ ರಂದು ನನ್ನ ಅನುಪಸ್ಥಿತಿಯಲ್ಲಿ ಸದನದಲ್ಲಿ ಹೇಳಿಕೆ ನೀಡಿ, ಶ್ರೀ ಪ್ರತಾಪಚಂದ್ರ ಶೆಟ್ಟಿಯವರು ರಾಜೀನಾಮೆ ಕೊಡಲು ಈ ಸದನದ ಮುಂದೆ ಒಪ್ಪಿಕೊಳ್ಳಬೇಕೆಂದು ತಮ್ಮ ಮುಖಾಂತರ ನನ್ನಲ್ಲಿ ಕೇಳಿರುವ ಸವಾಲು ಹಾಕಿರುವುದರಿಂದಾಗಿ ಈ ಕೆಳಗಿನಂತೆ ಸದನದಲ್ಲಿ ಸ್ಪಷ್ಟೀಕರಣ ನೀಡಲು ನನಗೆ ಅವಕಾಶ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ತಾರೀಖು ೫-೧೦-೧೯೮೮ ರಂದು ನನ್ನ ಹೆಸರಿನಲ್ಲಿದ್ದ ಚುಕ್ಕೆ ಗುರುತಿನದಲ್ಲದ ಪ್ರಶ್ನೆ ನಂಬ್ರ ೨೯೩೨ಕ್ಕೆ ಉತ್ತರವಾಗಿ ಮಾನ್ಯ ಸಚಿವರು ನೀಡಿದ ಉತ್ತರದಲ್ಲಿ ಕರ್ನಾಟಕ ಗೃಹ ಮಂಡಲಿ ತನ್ನ ಗುಲ್ಬರ್ಗ ವಿಭಾಗದಲ್ಲಿ ಬಿಡಿ ಮನೆ ಮತ್ತು ಬಿಡಿ ನಿವೇಶನ ಪಡೆದವರ ಹೆಸರುಗಳನ್ನು ನೀಡಿದ್ದು, ಅದರಲ್ಲಿ ಶ್ರೀಮತಿ ಶಿವಕಾಂತ ಚತುರೆಯವರು ತಾರೀಖು ೧೩-೧೦-೧೯೮೮ ರಂದು ತನ್ನ ಹೇಳಿಕೆಯಲ್ಲಿ ತನ್ನ ವಶ ಇರುವುದಾಗಿ ಒಪ್ಪಿಕೊಂಡ ಎಂ.ಐ.ಜಿ. ೬ನೇ ಮನೆಯು ಉಲ್ಲೇಖವಿಲ್ಲ. ಅಲ್ಲದೆ ಬೇರೆ ನಿವೇಶನ ವಶದಲ್ಲಿಲ್ಲವೆಂದು ಹೇಳಿದ್ದು, ಅದರ ಉಲ್ಲೇಖವೂ ಇಲ್ಲ. ಆದರೆ ಒಂದು ಮನೆ ಹಾಗೂ ಇನ್ನೊಂದು ನಿವೇಶನ ಅವರಿಗಿರುವ ಕುರಿತು ಮಾಹಿತಿ ನನ್ನಲ್ಲಿ ಇದ್ದು ನಾನು ಜವಾಬ್ದಾರಿಯುನ್ನರಿತೇ ಪೂರಕ ಪ್ರಶ್ನೆ ಕೇಳಿರುವುದಾಗಿದೆ ಶ್ರೀಮತಿ ಚತುರೆಯವರು ತನ್ನ ಹೇಳಿಕೆಯಲ್ಲಿ ಉದ್ಗರಿಸಿದಂತೆ "ಬೆಂಗಳೂರು, ಬೀದರ್‌ಗಳಲ್ಲಿ ಶ್ರೀಮತಿ ಶಿವಕಾಂತ ಚತುರೆಯವರಿಗೆ ೮ ರಿಂದ ೧೦ ನಿವೇಶನಗಳಿವೆ" ಎಂದು ನಾನು ಹೇಳಿಲ್ಲ. ಈ ಸಲುವಾಗಿ ೫-೧೦-೧೯೮೮ರ ಸದನದ ಕಲಾಪಗಳನ್ನು ನೋಡಿದಲ್ಲಿ ವಿಚಾರ ಸ್ಪಷ್ಟವಾಗುತ್ತದೆ. ಅದನ್ನು ನೋಡುವ ಬದಲಿಗೆ, ಅವಸರದಿಂದ ನನ್ನ ಮೇಲೆ ರಾಜೀನಾಮೆ ಸವಾಲೆಸೆದು, ರಾಜಕೀಯವಾಗಿ ಉಪಯೋಗಿಸಿಕೊಂಡು ಕಾಂಗ್ರೆಸ್ಸಿನ ಶ್ರೀ ಪ್ರತಾಪಚಂದ್ರ ಶೆಟ್ಟರು ರಾಜೀನಾಮೆ ಕೊಡಬೇಕೆಂದು ಹೇಳಿರುವುದು ತನ್ನ ತಪ್ಪನ್ನು ಮುಚ್ಚಿಡಲು ಮಾಡುತ್ತಿರುವ ಹತಾಶ ಯತ್ನ ಎಂದು ಭಾವಿಸುತ್ತೇನೆ. ತಾವು ಸದನದ ಸಮಿತಿ ಮೂಲಕ ತನಿಖೆ ಮಾಡಿಸುವುದಾದಲ್ಲಿ ಅಥವಾ ನ್ಯಾಯಾಂಗ ತನಿಖೆಗೆ ಒಪ್ಪಿಸಿದಲ್ಲಿ, ಕರ್ನಾಟಕ ಗೃಹ ನಿರ್ಮಾಣ ಮಂಡಲಿಯ ಉಪ ವಿಭಾಗದ ಕಛೇರಿಯನ್ನು ತೆರವು ಮಾಡಿಸಿ, ಆ ಮನೆಯನ್ನು ಪಡೆದ ಹಾಗೂ ನಿವೇಶನ ಪಡೆದ ಕುರಿತಾದ ಮಾಹಿತಿಯನ್ನು ನಾನು ನೀಡಲು ಸಿದ್ಧನಿರುತ್ತೇನೆ. ನಾನು ೫-೧೦-೧೯೮೮ ರಂದು ಪೂರಕ ಪ್ರಶ್ನೆ ಸಂದರ್ಭದಲ್ಲಿ ಶ್ರೀಮತಿ ಚತುರೆಯವರ ಕುರಿತು ಉಚ್ಚರಿಸಿದ ಮಾತುಗಳಿಗೆ ಬದ್ಧನಾಗಿದ್ದೇನೆ. ಶ್ರೀಮತಿ ಚತುರೆಯವರು ನೀಡಿದಂತಹ ರಾಜೀನಾಮೆಯ ಸವಾಲಿಗೆ ನನ್ನ ಸ್ವಾಗತ. ನನ್ನ ರಾಜೀನಾಮೆ